ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 999

2 ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

3 ಉತ್ತರಿಸಬೇಕಾದ ದಿನಾಂಕ : 12.03.2026

4 ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಪೊಲೀಸ್ ಇಲಾಖೆಯ ಎಷ್ಟು ಸಿಬ್ಬಂದಿ ಹಾಗೂ ಅಧಿಕಾರಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ; ಈ ಕುರಿತು ನಮೂದಾದ ಎಫ್‌ಐಆರ್ ಸಂಖ್ಯೆ, ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ಹೆಸರು ಹಾಗೂ ಯಾವ ಯಾವ ಸೆಕ್ಷನ್‌ಗಳ ಅನ್ವಯ ಪ್ರಕರಣ ದಾಖಲಾಗಿದೆ; ಅದರಲ್ಲಿ ಅರೆಸ್ಟ್ ಆದವರು ಎಷ್ಟು; (ಜಿಲ್ಲಾವಾರು ಪೊಲೀಸ್ ಠಾಣೆವಾರು ಸಮಗ್ರ ವಿವರ ನೀಡುವುದು)	ಕಳೆದ ಎರಡು ವರ್ಷಗಳಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಸದರಿಯವರುಗಳ ವಿರುದ್ಧ ಎಫ್‌ಐಆರ್ ದಾಖಲಾದ ಬಗ್ಗೆ ಅಂಕಿ ಅಂಶಗಳ ಮಾಹಿತಿ ಹಾಗೂ ವಿವರಗಳನ್ನು (ಪಿಸಿ ಯಿಂದ ಡಿವೈಎಸ್‌ಪಿ) ಅನುಬಂಧ-1 ರಲ್ಲಿ ಲಗತ್ತಿಸಿದೆ.
ಆ)	ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸರೆ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು	ಒಂದೇ ಸ್ಥಳದಲ್ಲಿ ಅಧಿಕ ವರ್ಷಗಳಿಂದ ಕಾರ್ಯ ನಿರ್ವಹಿಸಿ, ಸಹವಾಸ ದೋಷ, ಅತೀವಿಶ್ವಾಸ, ವೈಯಕ್ತಿಕ ಲಾಭ, ದುರಾಸೆ ಇತ್ಯಾದಿಗಳಿಂದಾಗಿ ಶಿಸ್ತು ಇಲಾಖೆಯಲ್ಲಿನ ಸಿಬ್ಬಂದಿಗಳ ಪೈಕಿ ಕೆಲವು ಸಿಬ್ಬಂದಿಗಳು ಭ್ರಷ್ಟಾಚಾರದಡಿ ಸಿಲುಕಿರುವ ಸಾಧ್ಯತೆಗಳು ಇರುತ್ತದೆ. ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆಯ ಕುರಿತು ನಿರಂತರವಾಗಿ ತರಬೇತಿ/ ಕಾರ್ಯಾಗಾರಗಳನ್ನು ಕೈಗೊಂಡು, ಕರ್ತವ್ಯ ನಿರ್ವಹಣೆ ಬಗ್ಗೆ ಹಾಗೂ ನಡತೆಯ ಬಗ್ಗೆ ತಿಳುವಳಿಕೆಗಳನ್ನು ನೀಡಲಾಗುತ್ತಿರುತ್ತದೆ. ಈ ಬಗ್ಗೆ ಡಿಜಿ ಮತ್ತು ಐಜಿಪಿ ರವರ ಕಛೇರಿ ಜ್ಞಾಪನ ಸಂಖ್ಯೆ: ಹೆಚ್‌ಆರ್‌ಎಂ-1(8)/55/2023-24, ದಿನಾಂಕ: 05.12.2025 ರಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಅನುಬಂಧ-2 ರಲ್ಲಿ ಲಗತ್ತಿಸಿದೆ. ಅಲ್ಲದೇ ಒಂದೇ ಸ್ಥಳದಲ್ಲಿ ಅಧಿಕ ಸಮಯದಿಂದ ಕಾರ್ಯನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳ ಸ್ಥಾನಪಲ್ಲಟನೆಯಂತಹ ಕ್ರಮಗಳನ್ನು ಹಾಗೂ ಶಿಸ್ತು ಕ್ರಮಗಳನ್ನು ಅನುಸರಿಸುವ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ. ಮುಂದುವರೆದು, ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು ಪೊಲೀಸ್ ಅಧಿಕಾರಿ /ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯ ವರ್ತನೆ ಮತ್ತು ನಿಷ್ಠೆಯನ್ನು
ಇ)	ಸರ್ಕಾರ ಈ ಅಪರಾಧ ಎಸಗಿದ ಪೊಲೀಸ್ ನೌಕರರನ್ನು ರಕ್ಷಿಸುವ ಮೂಲಕ ಅಥವಾ ವಿಚಾರಣೆ ವಿಳಂಬ ಮಾಡುವ ಮೂಲಕ ಮತ್ತಷ್ಟು ಪೊಲೀಸರಿಗೆ ಅಪರಾಧ ಎಸಗಲು ಪ್ರೋತ್ಸಾಹ ನೀಡಿದಂತಾಗಲಿಲ್ಲವೆ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)	

		ಕಾಯ್ದುಕೊಳ್ಳುವ ಬಗ್ಗೆ ಈಗಾಗಲೇ ಡಿಜಿ ಮತ್ತು ಐಜಿಪಿ ರವರ ಕಛೇರಿಯಿಂದ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಲಾಗಿದ್ದು, ಇತ್ತೀಚೆಗೂ ಕೂಡ ದಿನಾಂಕ: 21.10.2025 ರ ಸುತ್ತೋಲೆಯಲ್ಲಿ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಅನುಬಂಧ-3 ರಲ್ಲಿ ಲಗತ್ತಿಸಿದೆ. ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ಕೆ.ಎಸ್.ಪಿ (ಡಿಪಿ) ನಿಯಮಾವಳಿಗಳ ಪ್ರಕಾರ ಇಲಾಖಾ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಈ ರೀತಿಯಾಗಿ ಕಳೆದ ಎರಡು ವರ್ಷಗಳಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವಿರುದ್ಧ ಕೈಗೊಂಡ ಇಲಾಖಾ ಶಿಸ್ತು ಕ್ರಮಗಳ ವಿವರವನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ
ಈ)	ಪೊಲೀಸ್ ಮಹಾನಿರ್ದೇಶಕರ ಹಂತದ ಅಧಿಕಾರಿಯೇ ತನ್ನ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳ ಜೊತೆ ಅಸಭ್ಯವಾಗಿ ವರ್ತಿಸಿರುವುದು ತನ್ನ ಅಧಿಕಾರ ಮತ್ತು ಹುದ್ದೆಯ ದುರ್ಬಳಕೆ ಎಂಬುದು ಸ್ಪಷ್ಟವಾದರೂ ಸದರಿ ಅಧಿಕಾರಿಯ ಮೇಲೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಕೇಸು ದಾಖಲಿಸದೆ ಕೇವಲ ಅಮಾನತ್ತು ಮಾಡಿರುವ ಕುರಿತು ಸರ್ಕಾರದ ನಿಲುವೇನು?	ಡಾ. ಕೆ ರಾಮಚಂದ್ರರಾವ್, ಐ.ಪಿ.ಎಸ್., ಡಿಜಿಪಿ, ನಾಗರೀಕ ಜಾರಿ ಹಕ್ಕು ನಿರ್ದೇಶನಾಲಯ ಇವರ ವಿರುದ್ಧ AIS (D&A) Rule 1969 Rule 3(1) ರಂತೆ ವಿಚಾರಣೆಯನ್ನು ಬಾಕಿಯಿರಿಸಿಕೊಂಡು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ/26/ಎಸ್‌ಪಿಎಸ್/2026, ದಿನಾಂಕ: 21.01.2026 ರಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಕೂಲಂಕಷವಾಗಿ ವಿಚಾರಣೆ ಮಾಡಲು ಸದರಿಯವರು ಎಸಗಿರುವ ದುರ್ನಡತೆಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ದೇಶಿಸಲಾಗಿರುತ್ತದೆ. ಅದರಂತೆ, ಕೂಲಂಕಷವಾಗಿ ವಿಚಾರಣೆ ಮಾಡಿ ವರದಿ ಸಲ್ಲಿಸಲು 04 ಅಧಿಕಾರಿಯನ್ನೊಳಗೊಂಡಂತೆ ತನಿಖಾ ತಂಡವನ್ನು ರಚಿಸಲಾಗಿರುತ್ತದೆ. ತನಿಖಾ ತಂಡದಿಂದ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ.

ಸಂಖ್ಯೆ: ಒಇ 129 ಪಿಇಜಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ: ಹೆಚ್‌ಆರ್‌ಎಂ–1(5)/79/2025–26
ಪುಟಗಳು: 1ರಿಂದ 3 ಪುಟಗಳು

ಮಹಾನಿರ್ದೇಶಕರು ಮತ್ತು ಆರಕ್ಷಕ
ಮಹಾನಿರೀಕ್ಷಕರವರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು,
ದಿನಾಂಕ: 07.03.2026.

ಗೆ,
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು
ಒಳಾಡಳಿತ ಇಲಾಖೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 999 ಕ್ಕೆ ಉತ್ತರಿಸುವ ಕುರಿತು

* * * * *

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 999 ಕ್ಕೆ ಉತ್ತರ ಕೆಳಕಂಡಂತಿರುತ್ತದೆ.

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಪೊಲೀಸ್ ಇಲಾಖೆಯ ಎಷ್ಟು ಸಿಬ್ಬಂದಿ ಹಾಗೂ ಅಧಿಕಾರಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ; ಈ ಕುರಿತು ನಮೂದಾದ ಎಫ್‌ಐಆರ್ ಸಂಖ್ಯೆ, ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ಹೆಸರು ಹಾಗೂ ಯಾವ ಯಾವ ಸೆಕ್ಷನ್‌ಗಳ ಅನ್ವಯ ಪ್ರಕರಣ ದಾಖಲಾಗಿದೆ; ಅದರಲ್ಲಿ ಅರೆಸ್ಟ್ ಆದವರು ಎಷ್ಟು; (ಜಿಲ್ಲಾವಾರು ಪೊಲೀಸ್ ಠಾಣೆವಾರು ಸಮಗ್ರ ವಿವರ ನೀಡುವುದು)	ಕಳೆದ ಎರಡು ವರ್ಷಗಳಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಸದರಿ ರವರುಗಳ ವಿರುದ್ಧ ಎಫ್‌ಐಆರ್ ದಾಖಲಾದ ಬಗ್ಗೆ ಅಂಕಿ ಅಂಶಗಳ ಮಾಹಿತಿ ಹಾಗೂ ವಿವರಗಳನ್ನು (ಪಿಸಿ ಯಿಂದ ಡಿವೈಎಸ್‌ಪಿ) ಅನುಬಂಧ–1 ರಲ್ಲಿ ಲಗತ್ತಿಸಿದೆ.
ಆ)	ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸರೆ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;	ಒಂದೇ ಸ್ಥಳದಲ್ಲಿ ಅಧಿಕ ವರ್ಷಗಳಿಂದ ಕಾರ್ಯ ನಿರ್ವಹಿಸಿ, ಸಹವಾಸ ಪ್ರೇರಣೆ, ಅತೀವಿಶ್ವಾಸ, ವೈಯಕ್ತಿಕ ಲಾಭ, ದುರಾಸೆ ಇತ್ಯಾದಿಗಳಿಂದಾಗಿ ಶಿಸ್ತು ಇಲಾಖೆಯಲ್ಲಿನ ಸಿಬ್ಬಂದಿಗಳ ಪೈಕಿ ಕೆಲವು ಸಿಬ್ಬಂದಿಗಳು ಭ್ರಷ್ಟಾಚಾರದಡಿ ಸಿಲುಕಿರುವ ಸಾಧ್ಯತೆಗಳ ಇರುತ್ತದೆ.
ಇ)	ಸರ್ಕಾರ ಈ ಅಪರಾಧ ಎಸಗಿದ ಪೊಲೀಸ್ ನೌಕರರನ್ನು ರಕ್ಷಿಸುವ ಮೂಲಕ ಅಥವಾ ವಿಚಾರಣೆ ವಿಳಂಬ ಮಾಡುವ ಮೂಲಕ ಮತ್ತಷ್ಟು ಪೊಲೀಸ್‌ರಿಗೆ ಅಪರಾಧ ಎಸಗಲು ಪ್ರೋತ್ಸಾಹ ನೀಡಿದಂತಾಗಲಿಲ್ಲವೆ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)	ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆಯ ಕುರಿತು ನಿರಂತರವಾಗಿ ತರಬೇತಿ/ ಕಾರ್ಯಾಗಾರಗಳನ್ನು ಕೈಗೊಂಡು, ಕರ್ತವ್ಯ ನಿರ್ವಹಣೆ ಬಗ್ಗೆ ಹಾಗೂ ನಡತೆಯ ಬಗ್ಗೆ ತಿಳುವಳಿಕೆಗಳನ್ನು ನೀಡಲಾಗುತ್ತಿರುತ್ತದೆ. ಈ ಬಗ್ಗೆ ಕಛೇರಿ ಜ್ಞಾಪನ ಸಂಖ್ಯೆ: ಹೆಚ್‌ಆರ್‌ಎಂ–1(8)/55/2023–24, ದಿನಾಂಕ: 05.12.2025 ರಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

...2

		ಅಲ್ಲದೇ ಒಂದೇ ಸ್ಥಳದಲ್ಲಿ ಅಧಿಕ ಸಮಯದಿಂದ ಕಾರ್ಯನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳ ಸ್ಥಾನಪಲ್ಲಟನೆಯಂತಹ ಕ್ರಮಗಳನ್ನು ಹಾಗೂ ಶಿಸ್ತು ಕ್ರಮಗಳನ್ನು ಅನುಸರಿಸುವ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ. ಮುಂದುವರೆದು, ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯ ವರ್ತನೆ ಮತ್ತು ನಿಷ್ಪೆಯನ್ನು ಕಾಯ್ದುಕೊಳ್ಳುವ ಬಗ್ಗೆ ಈಗಾಗಲೇ ಈ ಕಛೇರಿಯಿಂದ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಲಾಗಿದ್ದು, ಇತ್ತೀಚೆಗೂ ಕೂಡ ದಿನಾಂಕ: 21.10.2025 ರ ಸುತ್ತೋಲೆಯಲ್ಲಿ ಸೂಕ್ತ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ) ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ಕೆ.ಎಸ್.ಪಿ (ಡಿಪಿ) ನಿಯಮಾವಳಿಗಳ ಪ್ರಕಾರ ಇಲಾಖಾ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಈ ರೀತಿಯಾಗಿ ಕಳೆದ ಎರಡು ವರ್ಷಗಳಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವಿರುದ್ಧ ಕೈಗೊಂಡ ಇಲಾಖಾ ಶಿಸ್ತು ಕ್ರಮಗಳ ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.
ಈ)	ಪೊಲೀಸ್ ಮಹಾನಿರ್ದೇಶಕರ ಹಂತದ ಅಧಿಕಾರಿಯೇ ತನ್ನ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳ ಜೊತೆ ಅಸಭ್ಯವಾಗಿ ವರ್ತಿಸಿರುವುದು ತನ್ನ ಅಧಿಕಾರ ಮತ್ತು ಹುದ್ದೆಯ ದುರ್ಬಳಕೆ ಎಂಬುದು ಸ್ಪಷ್ಟವಾದರೂ ಸದರಿ ಅಧಿಕಾರಿಯ ಮೇಲೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಕೇಸು ದಾಖಲಿಸದೆ ಕೇವಲ ಅಮಾನತ್ತು ಮಾಡಿರುವ ಕುರಿತು ಸರ್ಕಾರದ ನಿಲುವೇನು?	ಸದರಿ ವಿಷಯದ ಕುರಿತು ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಸದರಿ ಅಧಿಕಾರಿ ರವರ ವಿರುದ್ಧ AIS (D&A) Rule 1969 Rule 3(1) ರಂತೆ ವಿಚಾರಣೆಯನ್ನು ಬಾಕಿಯಿರಿಸಿಕೊಂಡು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದ್ದು, ಸರ್ಕಾರದ ಪತ್ರ ಸಂಖ್ಯೆ: 26/ಎಪಿಎಸ್/2026, ದಿನಾಂಕ: 21.01.2026 ರಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕುಲಂಕುಷವಾಗಿ ವಿಚಾರಣೆ ಮಾಡಲು ಮತ್ತು ಸದರಿರವರು ಎಸಗಿರುವ ದುರ್ನಡತೆ ಬಗ್ಗೆ ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ ವರದಿ ಸಲ್ಲಿಸಲು ತನಿಖಾ ತಂಡವನ್ನು ರಚಿಸಿದ್ದು, ತನಿಖಾ ತಂಡವು ಈ ಪ್ರಕ್ರಿಯೆಯಲ್ಲಿ ಜಾಲ್ತಿಯಲ್ಲಿರುತ್ತದೆ. ಸದರಿ ತನಿಖಾ ತಂಡದ ಅಂತಿಮ ವರದಿಯ ಮೇಲೆ ಸರ್ಕಾರದ ಹಂತದಲ್ಲಿ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

"ಡಿಜಿಪಿ ಮತ್ತು ಐಜಿಪಿ ರವರಿಂದ ಅನುಮೋದಿಸಲ್ಪಟ್ಟಿದೆ"

ತಮ್ಮ ವಿಶ್ವಾಸಿ,

(ಯಡಾ ಮಾರ್ಟಿನ್ ಮಾಬ್ಬಿನ್ಯಾಂಗ್, ಐ.ಪಿ.ಎಸ್)
ಡಿ.ಐ.ಜಿ.ಪಿ (ಆಡಳಿತ)
ಮಹಾ ನಿರ್ದೇಶಕರು ಮತ್ತು ಆರಕ್ಷಕ
ಮಹಾ ನಿರೀಕ್ಷಕರು ರವರ ಪರವಾಗಿ.

ಪ್ರತಿಯನ್ನು ಮಾಹಿತಿಗಾಗಿ: ಶಾಖಾಧೀಕ್ಷಕರು, ಪಿ & ಸಿ ಶಾಖೆ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು.

ಡೈರಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ
ಬೆಂಗಳೂರು - ೫೬೦ ೦೦೧.

ಸಂ: ಹೆಚ್‌ಆರ್‌ಎಂ-1(8)/55/2023-24

ಮಹಾನಿರ್ದೇಶಕರು ಹಾಗೂ,
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 05.12.2025.

ಜ್ಞಾಪನ

ವಿಷಯ: ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ.

* * *

ಇತ್ತೀಚೆಗೆ ಕೆಲವು ದರೋಡೆ, ಕಳ್ಳತನ ಮತ್ತು ವಂಚನೆ ಕೃತ್ಯಗಳಲ್ಲಿ ಕೆಲವು ಪೊಲೀಸ್ ಸಿಬ್ಬಂದಿಯವರುಗಳ ಹೆಸರುಗಳು ತಳಕು ಹಾಕಿಕೊಂಡಿರುವುದು ತೀರಾ ಕಳವಳಕಾರಿ ಬೆಳವಣಿಗೆಯಾಗಿದೆ. ಇಂತಹ ಪ್ರವೃತ್ತಿಗಳು ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸಾರ್ಹತೆಗೆ ಧಕ್ಕೆಯಾಗುವುದರೊಂದಿಗೆ ಇಲಾಖೆಯನ್ನು ಅಪಕೀರ್ತಿಗೆ ಗುರಿ ಮಾಡುತ್ತವೆ. ಈ ರೀತಿಯ ದುಷ್ಕೃತ್ಯಗಳು ಸಾರ್ವಜನಿಕರಿಗೆ ಪೊಲೀಸರ ಮೇಲಿನ ನಂಬಿಕೆಯನ್ನು ಕುಂದಿಸುವುದಲ್ಲದೆ, ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ. ಆದ್ದರಿಂದ ಇಂತಹ ಘಟನೆಗಳನ್ನು ಸಮರ್ಥವಾಗಿ ತಡೆಗಟ್ಟಿ, ಹೊಣೆಗಾರಿಕೆಯನ್ನು ನಿಗಧಿಪಡಿಸುವ ಮೂಲಕ ಪೊಲೀಸ್ ಇಲಾಖೆಯ ಸಮಗ್ರತೆಯನ್ನು ಪುನರ್ನಿರ್ಮಿಸುವ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ಒಬ್ಬ ಚಿನ್ನದ ವ್ಯಾಪಾರಿಯ ಮೇಲೆ ದರೋಡೆ ನಡೆಸಿದ ಆರೋಪದಲ್ಲಿ ಇಬ್ಬರು ಪೊಲೀಸ್ ಉಪನಿರೀಕ್ಷಕರನ್ನು ದಸ್ತಗಿರಿ ಮಾಡಲಾಗಿದೆ. ಅವರು ಸಂತ್ರಸ್ತ ವ್ಯಕ್ತಿಗೆ ತಾವಿಬ್ಬರೂ ಐಜಿ ಸ್ಕ್ವಾಡ್ ಅಧಿಕಾರಿಗಳೆಂದು ಸುಳ್ಳು ಹೇಳಿ, ಬಸ್ ನಿಲ್ದಾಣದಲ್ಲಿ ಆತನನ್ನು ವಶಕ್ಕೆ ಪಡೆದುಕೊಂಡು, ನಕಲಿ ಬಂದೂಕಿನಿಂದ ಸಂತ್ರಸ್ತ ವ್ಯಕ್ತಿಯನ್ನು ಬೆದರಿಸಿ, ಆತನಿಂದ ಸುಮಾರು 80 ಗ್ರಾಂ ಬೆಲೆಬಾಳುವ ಚಿನ್ನಾಭರಣಗಳನ್ನು ದೋಚಿ, ನಂತರ ಅದೇ ಬಸ್ ನಿಲ್ದಾಣದಲ್ಲಿ ಆತನನ್ನು ಬಿಟ್ಟು ಹೋಗಿರುತ್ತಾರೆ. ಸಂತ್ರಸ್ತ ವ್ಯಕ್ತಿಯ ಆಪ್ತ ವಲಯದ ಅಕ್ಕಸಾಲಿಗರೊಬ್ಬರ ಸಹಾಯದೊಂದಿಗೆ ಒಳಸಂಚು ರೂಪಿಸುವ ಮೂಲಕ ಈ ದರೋಡೆಯನ್ನು ಯೋಜಿತವಾಗಿತ್ತು ಎನ್ನಲಾಗಿದೆ.

ಇತ್ತೀಚೆಗೆ ಬೆಂಗಳೂರು ನಗರದಲ್ಲಿ ನಗದು ನಿರ್ವಹಣಾ ಸೇವೆಯ (ಕ್ಯಾಷ್ ಮ್ಯಾನೇಜ್‌ಮೆಂಟ್ ಸರ್ವಿಸಸ್) ಮಾಜಿ ಸಿಬ್ಬಂದಿಯೊಂದಿಗೆ ಅತ್ಯಂತ ಕರಾರುವಕ್ಕಾಗಿ ಒಳಸಂಚು ರೂಪಿಸಿ ಕೋಟ್ಯಂತರ ರೂಪಾಯಿಗಳ ದರೋಡೆ ಮಾಡಿರುವ ಪ್ರಕರಣದಲ್ಲಿ ಬೆಂಗಳೂರು ನಗರದ ಗೋವಿಂದಪುರ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಒಬ್ಬಾತನನ್ನು ಬಂಧಿಸಲಾಗಿದೆ. ಅತ್ಯಂತ ಎಚ್ಚರಿಕೆಯಿಂದ ಒಳಸಂಚು

...2

ರೂಪಿಸಿ, ಅತಿ ಹೆಚ್ಚು ಮೌಲ್ಯದ ನಗದು ದರೋಡೆ ಕೃತ್ಯದಲ್ಲಿ ಪೊಲೀಸರ ಸಹಭಾಗಿತ್ವವಿರುವ ಈ ಪ್ರಕರಣವು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿರುತ್ತದೆ.

ಅದೇ ರೀತಿ ಬಿ.ಪಿ.ಓ ಸಂಸ್ಥೆಯ ಮ್ಯಾನೇಜರ್‌ನ ಅಪಹರಣ, ಹಣದ ಸುಲಿಗೆ ಯತ್ನದ ಪ್ರಕರಣದಲ್ಲಿ ಮಾಲೂರಿನ ಹೆಡ್ ಕಾನ್ಸ್‌ಟೇಬಲ್ ಒಬ್ಬರನ್ನು ಶಂಕಿಸಿ, ಆತನನ್ನು ದಸ್ತಗಿರಿ ಮಾಡಲಾಗಿದೆ.

ಇಂತಹ ಅಪರಾಧ ಪ್ರಕರಣಗಳಲ್ಲಿ ಮತ್ತು ಅಕ್ರಮ ಚಟುವಟಿಕೆಗಳಲ್ಲಿ ಪೊಲೀಸರು ಒಳಗೊಂಡಿರುವುದು ಯಾವುದೇ ಕಾರಣಕ್ಕೂ ಒಪ್ಪಲಾಗದು. ಇಡೀ ಪೊಲೀಸ್ ಇಲಾಖೆಯ ಅಪಕೀರ್ತಿಗೆ ಕಾರಣವಾಗುವ ಇಂತಹ ಸನ್ನಿವೇಶಗಳು ಸಾರ್ವಜನಿಕರಲ್ಲಿ ಪೊಲೀಸರ ಮೇಲಿನ ವಿಶ್ವಾಸಾರ್ಹತೆಗೆ ತೀವ್ರತರವಾದ ಹಾನಿ ಮಾಡುತ್ತವೆ ಮತ್ತು ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ.

ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಪೊಲೀಸ್ ಇಲಾಖೆಯ ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿಯವರುಗಳಿಗೆ ತೀವ್ರತರವಾದ ಶಿಸ್ತಿನ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಕಠಿಣ ಎಚ್ಚರಿಕೆಯನ್ನು ಈ ಜ್ಞಾಪನದ ಮೂಲಕ ನೀಡಲಾಗಿದೆ.

ಘಟಕಾಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು:-

- ಘಟಕದ ಎಲ್ಲಾ ಅಧಿಕಾರಿಗಳು ಅಧೀನದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳ ಪೂರ್ವಾಪರಗಳ ಪರಿಶೀಲನೆ ಮತ್ತು ಸಮಗ್ರತೆಯ ಮೌಲ್ಯಮಾಪನಗಳನ್ನು ನಿಯತವಾಗಿ ನಡೆಸುವುದು.
- ನೈತಿಕ ಮಾನದಂಡಗಳು, ಕಾನೂನುಬದ್ಧ ಕರ್ತವ್ಯಗಳು, ಮತ್ತು ಭ್ರಷ್ಟಾಚಾರ/ಅಪರಾಧಗಳ ಗಂಭೀರ ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ವರ್ತನೆ, ಅಕ್ರಮ ಚಟುವಟಿಕೆಗಳು ಹಾಗೂ ಅಪರಾಧಿಕ ಕೃತ್ಯಗಳಲ್ಲಿ ತೊಡಗಿರುವ ಮಾಹಿತಿಗಳನ್ನು ತಕ್ಷಣವೇ ಪೊಲೀಸ್ ಪ್ರಧಾನ ಕಛೇರಿಗೆ ವರದಿ ಮಾಡುವುದು.
- ಇಲಾಖೆಯ ಘನತೆಯನ್ನು ಕಾಪಾಡುವ ಹೊಣೆಗಾರಿಕೆ ಮತ್ತು ಸಮಗ್ರತೆಯ ಸಂಸ್ಕೃತಿಯು ಎಲ್ಲಾ ಹಂತದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಸಮಾನ ಹೊಣೆಗಾರಿಕೆ ಎಂಬುದನ್ನು ಸಾರಿ ಹೇಳುವುದು.

...3

- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಮನೋಬಲ ಕಗ್ಗುವಿಕೆಯನ್ನು ಮತ್ತು ಇತರ ನೈತಿಕ ಲೋಪದೋಷಗಳಿಗೆ ಕಾರಣವಾಗುವ ಅಂಶಗಳಿಗೆ ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ಸ್ಪಂದಿಸಿ, ಪರಿಹರಿಸಲು ಅಗತ್ಯ ಮಾರ್ಗದರ್ಶನ ಮತ್ತು ಸಲಹಾ ಕಾರ್ಯಕ್ರಮಗಳನ್ನು ಉತ್ತೇಜಿಸುವುದು.
- ಪ್ರಸ್ತುತ ಜಾರಿಯಲ್ಲಿರುವ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಮತ್ತು ಈ ಸಂಹಿತೆಯ ಅಡ್ಡದಾರಿಗಳಿಗೆ ಆಸ್ಪದವಾಗದಂತೆ ಕ್ರಮವಹಿಸುವುದು.

ಇಲಾಖೆಯಲ್ಲಿ ದುರ್ನಡತೆಯನ್ನು ತಡೆಯುವ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸ್ವಯಂಪ್ರೇರಿತರಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲರಾಗುವ ಘಟಕಾಧಿಕಾರಿಗಳ ವಿರುದ್ಧ ಘೋರ ನಿರ್ಲಕ್ಷತೆ ಎಂದು ಪರಿಗಣಿಸಿ ಅವರುಗಳನ್ನು ಇಲಾಖಾ ಶಿಸ್ತಿನ ಕ್ರಮಕ್ಕೆ ಗುರಿಪಡಿಸಲಾಗುವುದು. ಪೊಲೀಸ್ ಇಲಾಖೆಯ ಘನತೆ, ಗೌರವ ಮತ್ತು ಸಮಗ್ರತೆಗಳಲ್ಲಿನ ರಾಜಿ ಸಮಂಜಸವಲ್ಲ ಮತ್ತು ಸಹಿಸಲು ಸಾಧ್ಯವಿಲ್ಲ.

ಪೊಲೀಸ್ ಇಲಾಖೆಯ ಹಿರಿಮೆ ಮತ್ತು ಗೌರವಾದರಗಳನ್ನು ಹೆಚ್ಚಿಸುವ ಶಿಸ್ತುಬದ್ಧ ಜವಾಬ್ದಾರಿಗಳು ಘಟಕಾಧಿಕಾರಿಗಳದ್ದಾಗಿವೆ. ಈ ಸಂಸ್ಥೆಯ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂಬುದನ್ನು ನಾವಾರೂ ಮರೆಯಕೂಡದು.

(ಡಾ॥ ಎಂ. ಎ. ಸಲೀಂ ಐ.ಪಿ.ಎಸ್)
ಮಹಾನಿರ್ದೇಶಕರು ಹಾಗೂ
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು

ಗೆ:
1. ಎಲ್ಲಾ ಪೊಲೀಸ್ ಆಯುಕ್ತರು.
2. ಎಲ್ಲಾ ವಲಯದ ಪೊಲೀಸ್ ಮಹಾನಿರೀಕ್ಷಕರು.
3. ಎಲ್ಲಾ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು.

DGP CONTROL ROOM, BENGALURU
O/o. the DG & ICP, N.T.Road, Bengaluru
Out Messages Received for Transmission
NR No. 502 TH 1735
Date 05/12/2014 Sign

ಸಂ.ಕಾಮತ್ತುಸು/ಮಿಶ್ರ/167/2025

ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು, ದಿನಾಂಕ 21.10.2025.

ಸುತ್ತೋಲೆ

ವಿಷಯ: ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು, ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯದ ವರ್ತನೆ ಮತ್ತು ನಿಷ್ಠೆಯನ್ನು ಕಾಯ್ದುಕೊಳ್ಳುವ ಬಗ್ಗೆ.

** ** **

ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಂದಿಗೆ ವರ್ತಿಸುವ ರೀತಿಯು ಪರಿಣಾಮಕಾರಿ ಕಾನೂನು ಜಾರಿ ಮತ್ತು ಸಮುದಾಯದ ಜೊತೆಗಿನ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅತ್ಯಂತ ಮುಖ್ಯವಾಗಿದೆ. ಪೊಲೀಸ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸುವಾಗ ನಾಗರೀಕರೊಂದಿಗೆ ಸೌಜನ್ಯದಿಂದ ಮತ್ತು ಗೌರವದಿಂದ ವರ್ತಿಸಬೇಕು. ಪೊಲೀಸರ ನಡವಳಿಕೆಯಲ್ಲಿ ಸೌಜನ್ಯ ಮತ್ತು ಘನತೆ ಎದ್ದು ಕಾಣಬೇಕು. ಸಕಾರಾತ್ಮಕ ಮತ್ತು ವೃತ್ತಿಪರ ನಡವಳಿಕೆಯು ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆಯ ಮೇಲಿನ ನಂಬಿಕೆ ಮತ್ತು ಸಹಕಾರವನ್ನು ಹೆಚ್ಚಿಸುತ್ತದೆ. ಪೊಲೀಸ್ ಅಧಿಕಾರಿಗಳ ಸಾರ್ವಜನಿಕರೊಂದಿಗಿನ ನಡವಳಿಕೆಯು ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧ ನಿಯಂತ್ರಣ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವಲ್ಲಿ ಸಹಕರಿಸುತ್ತದೆ. ಅಧಿಕಾರ ದುರುಪಯೋಗಪಡಿಸಿಕೊಂಡು ಸಾರ್ವಜನಿಕರ ಮೇಲೆ ಅನಗತ್ಯ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ನಾಗರೀಕರ ಹಕ್ಕುಗಳಿಗೆ ಗೌರವವನ್ನು ನೀಡುವುದು ಮತ್ತು ಸಂಯಮದಿಂದ ಅವರೊಡನೆ ವರ್ತಿಸುವುದು ಇಲಾಖೆಯ ಘನತೆಯನ್ನು ಹೆಚ್ಚಿಸಿ ಸಾರ್ವಜನಿಕರಲ್ಲಿ ಪೊಲೀಸರ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ.

ಸಾರ್ವಜನಿಕರೊಂದಿಗಿನ ಎಲ್ಲಾ ವ್ಯವಹಾರಗಳಲ್ಲಿ ಎಲ್ಲಾ ಪೊಲೀಸ್ ಅಧಿಕಾರಿಗಳು ಗರಿಷ್ಠ ಮಟ್ಟದ ವೃತ್ತಿಪರತೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವಂತೆ ಸೂಚಿಸಲಾಗಿದೆ. ಪೊಲೀಸ್ ಇಲಾಖೆಯ ಮೇಲಿನ ಗೌರವ ಹಾಗೂ ನಂಬಿಕೆಗಳು ಸಮಗ್ರವಾಗಿ ಪ್ರತಿ ಅಧಿಕಾರಿಯು ಯಾವ ರೀತಿ

ನಡೆದುಕೊಳ್ಳುತ್ತಾನೆ ಎಂಬುದರ ಮೇಲೆ (ಸಮವಸ್ತ್ರ ಧರಿಸಿದ್ದಾಗ ಅಥವಾ ಮಫ್ತಿಯಲ್ಲಿರುವಾಗ) ಅವಲಂಬಿತವಾಗಿದೆ ಎಂಬುದನ್ನು ಮರೆಯಬಾರದು.

ಈ ನಿಟ್ಟಿನಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕಟ್ಟುನಿಟ್ಟಾಗಿ ಪಾಲಿಸುವುದು:

1. ಇಲಾಖೆಯ ಎಲ್ಲಾ ಅಧಿಕೃತ ವ್ಯವಹಾರಗಳು ಮತ್ತು ಕಾರ್ಯವಿಧಾನಗಳಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು. ಪೊಲೀಸ್ ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನು ಗಮನಿಸದೇ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು.

2. ಸಾರ್ವಜನಿಕರ ಕುಂದುಕೊರತೆಗಳನ್ನು ತಾಳ್ಮೆಯಿಂದ ಆಲಿಸಿ ಮತ್ತು ಕಾನೂನಿನ ಪ್ರಕಾರ ಅನಗತ್ಯ ಕಾಲವಿಳಂಬವಿಲ್ಲದೇ ದೂರುಗಳನ್ನು ದಾಖಲಿಸುವುದು.

3. ಸಾರ್ವಜನಿಕರೊಂದಿಗೆ ಮಾತನಾಡುವಾಗ ಒರಟು ಭಾಷೆ ಅಥವಾ ವರ್ತನೆಯನ್ನು ತೋರದೆ ಯಾವಾಗಲೂ ಸೌಜನ್ಯ ಮತ್ತು ಘನತೆಯಿಂದ ವರ್ತಿಸಿ ಕಾನೂನು ಜಾರಿಗೊಳಿಸುವಲ್ಲಿ ದೃಢತೆಯನ್ನು ಪ್ರದರ್ಶಿಸುವುದು.

4. ಯಾವುದೇ ಸಂದರ್ಭದಲ್ಲೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ, ಯಾವುದೇ ರೀತಿಯ ಬೇಡಿಕೆ ಇಡುವುದರಿಂದ ಅಥವಾ ಯಾವುದೇ ಅಕ್ರಮ ಸಹಾಯ/ಲಾಭವನ್ನು ಸ್ವೀಕರಿಸುವುದರಿಂದ ಸಂಪೂರ್ಣವಾಗಿ ದೂರವಿರಬೇಕು.

5. ಕರ್ತವ್ಯದ ಸಮಯದಲ್ಲಿ/ಕರ್ತವ್ಯ ಮುಗಿದ ನಂತರವೂ ನೈತಿಕವಾಗಿ ಇತರರಿಗೆ ಮಾದರಿಯಾಗುವಂತೆ ಇದ್ದು ಇಲಾಖೆಯ ನೀತಿ ನಿಯಮಗಳನ್ನು ಎತ್ತಿಹಿಡಿಯಬೇಕು.

6. ಸ್ಟೇಷನ್ ಹೌಸ್ ಡೈರಿಗಳು ಮತ್ತು ಕೇಸ್ ಫೈಲ್ ಗಳಲ್ಲಿ ನಿಖರ ಮತ್ತು ಇಂದೀಕರಿಸಿದ ದಾಖಲೆಗಳನ್ನು ಕಾಯ್ದುಕೊಳ್ಳಬೇಕು ಮತ್ತು ಸಮಗ್ರವಾಗಿ ನಿರ್ವಹಿಸಬೇಕು.

7. ತನಿಖಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಮತ್ತು ಪ್ರತಿ ಹಂತದಲ್ಲೂ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕು. ಯಾವುದೇ ನಾಗರೀಕರಿಗೆ ಅನಗತ್ಯವಾಗಿ ತೊಂದರೆ ನೀಡಬಾರದು.

8. ಸಂತ್ರಸ್ಥರು, ಮಹಿಳೆಯರು, ಹಿರಿಯ ನಾಗರೀಕರು ಮತ್ತು ಮಕ್ಕಳೊಂದಿಗೆ ವಿಶೇಷ ಕಾಳಜಿಯಿಂದ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕು.

9. ಸಾರ್ವಜನಿಕರ ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರೀಕರಿಗೆ ಮಾಹಿತಿ ನೀಡಬೇಕು. ಕರ್ತವ್ಯಕ್ಕೆ ಹಾಜರಾಗುವುದು ಮತ್ತು ಅಧಿಕೃತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಸ್ತಿನಿಂದ ಸಮಯ ಪಾಲನೆ ಮಾಡಬೇಕು.

10. ಪೊಲೀಸ್–ಸಾರ್ವಜನಿಕ ಸಂವಹನದಲ್ಲಿ ನ್ಯಾಯಸಮ್ಮತೆಯನ್ನು ಎತ್ತಿಹಿಡಿಯಲು ಸಮವಸ್ತ್ರದ ಮೇಲೆ ಧರಿಸುವ ಕ್ಯಾಮೆರಾಗಳನ್ನು ಮತ್ತು ಲಭ್ಯವಿರುವ ತಂತ್ರಜ್ಞಾನಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು.
11. ಎಲ್ಲಾ ಅಧಿಕೃತ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರವನ್ನು ನೀಡಿ, ಶೋಧ, ಬಂಧನ ಅಥವಾ ವಿಚಾರಣೆಯ ಸಮಯದಲ್ಲಿ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಿ, ಅಧಿಕಾರದ ದುರುಪಯೋಗ ಅಥವಾ ದೌರ್ಜನ್ಯದಿಂದ ದೂರವಿರಿ ಮತ್ತು ಸದ್ವರ್ತನೆಗೆ ಮಾದರಿಯಾಗಿರಿ.
12. ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಪಾರದರ್ಶಕ, ಕಾನೂನುಬದ್ಧ ಮತ್ತು ಸಹಾನುಭೂತಿಯ ಪೊಲೀಸಿಂಗ್ ಅಭ್ಯಾಸಗಳ ಮೂಲಕ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು.
13. ಪೊಲೀಸ್ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಥವಾ ಭ್ರಷ್ಟಗೊಳಿಸುವ ಯಾವುದೇ ಪ್ರಯತ್ನಗಳು ಕಂಡುಬಂದಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿರಿ.
14. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರ.ವ. ವರದಿಯನ್ನು ದಾಖಲಿಸಿ ಆ ನಂತರ ವ್ಯಾಪ್ತಿಯ ಆಧಾರದ ಮೇಲೆ ಸಂಬಂಧಪಟ್ಟ ಠಾಣೆಗೆ ದೂರನ್ನು ವರ್ಗಾಯಿಸುವುದು.
15. ಮಹಿಳೆಯರನ್ನು ಸಂಜೆ 06:00 ಗಂಟೆಯ ನಂತರ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಅಥವಾ ಹೇಳಿಕೆಯನ್ನು ನೀಡಲು ಕರೆತರಬಾರದು.
16. ಮಹಿಳೆಯು ಒಂದು ವೇಳೆ ಸಂತ್ರಸ್ಥೆಯಾಗಿದ್ದಲ್ಲಿ ಆಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ, ಮಹಿಳೆಯ ವಾಸದ ಸ್ಥಳ/ಮನೆಯ ಬಳಿಯಲ್ಲಿಯೇ ವಿಚಾರಣೆ ಮಾಡಬೇಕು.
17. ಕ್ರಿಮಿನಲ್ ಪ್ರಕರಣಗಳಲ್ಲಿ ಮಹಿಳೆಯರು ಭಾಗಿಯಾದಾಗ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅವರಿಗೆ ಯಾವುದೇ ಅವಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಮತ್ತು ಅವರನ್ನು ಸಂಜೆ 06.00 ಗಂಟೆಯ ನಂತರ ಪೊಲೀಸ್ ಠಾಣೆಯಲ್ಲಿ ಇರಿಸಬಾರದು, ಬದಲಿಗೆ ಅವರನ್ನು ರಾಜ್ಯ ಗೃಹ (ಸ್ಟೇಟ್ ಹೋಮ್) ಆಶ್ರಯ ತಾಣಗಳಲ್ಲಿ ಇರಿಸಬೇಕು.
18. ಉತ್ತಮವಾಗಿ ನೀಟಾದ ಸಮವಸ್ತ್ರವನ್ನು/ಮಫ್ತಿ ಬಟ್ಟೆಗಳನ್ನು ಧರಿಸುವ ಪೊಲೀಸ್ ಅಧಿಕಾರಿಯು ಸಾರ್ವಜನಿಕರಿಂದ ಉತ್ತಮ ಗೌರವವನ್ನು ಪಡೆಯುತ್ತಾನೆ. ಅಧಿಕಾರಿ ಮತ್ತು ಸಿಬ್ಬಂದಿಗಳು ನೀಟಾದ Turn out ಹೊಂದಿರಬೇಕು. ಇದು ಪೊಲೀಸ್ ಅಧಿಕಾರಿಯ ವ್ಯಕ್ತಿತ್ವ ಹಾಗೂ ಕಾರ್ಯದಕ್ಷತೆಗಳನ್ನು

ಉತ್ತೇಜಿಸುತ್ತದೆ. ನೀಟಾದ ಸಮವಸ್ತ್ರವು ವೃತ್ತಿಪರತೆ ಮತ್ತು ಶಿಸ್ತಿನ ಪ್ರತಿಬಿಂಬ ಅಷ್ಟೇ ಅಲ್ಲ ಪರಿಣಾಮಕಾರಿ ಪೊಲೀಸ್ ಕಾರ್ಯನಿರ್ವಹಣೆಗೆ ಅತ್ಯಗತ್ಯ.

ಪ್ರತಿಯೊಬ್ಬ ಅಧಿಕಾರಿಯು ಸಾರ್ವಜನಿಕರ ವಿಶ್ವಾಸವು ಪೊಲೀಸ್ ಇಲಾಖೆಯ ಅತ್ಯಂತ ಮೌಲ್ಯಯುತ ಆಸ್ತಿಯೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ಸೂಚನೆಗಳಿಂದ ಯಾವುದೇ ವಿಚಲನವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಇಲಾಖಾ ನಿಯಮಗಳ ಪ್ರಕಾರ ವ್ಯವಹರಿಸಲಾಗುವುದು.

ಎಲ್ಲಾ ಘಟಕಾಧಿಕಾರಿಗಳು ಈ ಸುತ್ತೋಲೆಯ ಅಂಶಗಳನ್ನು ತಮ್ಮ ಅಧೀನದಲ್ಲಿ ಇರುವ ಎಲ್ಲಾ ಸಿಬ್ಬಂದಿಗಳಿಗೆ ತಿಳಿಸಬೇಕು ಮತ್ತು ಕಟ್ಟುನಿಟ್ಟಾದ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು.

13/10/25

(ಡಾ॥ ಎಂ.ಎ. ಸಲೀಂ, ಐ.ಪಿ.ಎಸ್)
ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪ್ರತಿ,
1) ಎಲ್ಲಾ ಪೊಲೀಸ್ ಆಯುಕ್ತರುಗಳಿಗೆ
2) ಎಲ್ಲಾ ವಲಯಾಧಿಕಾರಿಗಳಿಗೆ
3) ಎಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ

ANNEXURE-1								
SL NO	**UNITS**	**DYSP/ACP**	**PI/RPI**	**PSI/RSI**	**ASI/ARSI**	**CHC/AHC**	**CPC/APC**	**TOTAL**
1	COP., BENGALURU CITY	1	10	10	8	32	40	**101**
2	**IGP., CENTRAL RANGE, BENGALURU**	**0**	**0**	0	0	0	0	**0**
3	SP., BENGALURU DISTRICT	0	0	**0**	**1**	**2**	3	**6**
4	SP., TUMKURU DISTRICT	0	0	0	0	1	1	**2**
5	SP., KOLAR DISTRICT	0	0	0	0	3	5	**8**
6	SP., KGF DISTRICT	0	0	0	0	0	2	**2**
7	SP, RAMANAGAR DISTRICT	0	0	0	0	2	2	**4**
8	SP., CHIKKABALLPUR DISTRICT	0	0	0	0	3	2	**5**
9	**IGP., SOUTHERN RANGE, MYSURU**	**0**	**0**	0	0	0	0	**0**
10	**COP MYSURU CITY**	**0**	**0**	0	0	2	1	**3**
11	SP, MYSURU DISTRICT	0	0	**1**	**0**	**0**	2	**3**
12	SP., CHAMARAJANAGAR DISTRICT	0	0	1	0	2	3	**6**
13	SP., HASAN DISTRICT	0	0	2	3	4	5	**14**
14	SP., MANDYA DISTRICT	0	0	0	1	3	7	**11**
15	SP., KODAGU DISTRICT	0	0	0	0	0	4	**4**
16	**IGP., ER., DAVANAGERE**	**0**	**0**	6	0	0	5	**11**
17	**SP., DAVANAGERE**	**0**	**0**	**0**	**1**	**4**	2	**7**
18	SP., SHIMOGGA DISTRICT	0	0	**0**	**4**	**3**	3	**10**
19	SP., CHITRADURGA DISTRICT	0	0	0	1	4	4	**9**
20	SP., HAVERI DISTRICT	0	0	1	0	1	1	**3**
21	**IGP., WR., M'LURU**	**0**	**0**	0	0	0	0	**0**
22	**COP MANGALURU CITY**	**1**	**0**	0	0	1	2	**4**
23	SP., D.K. MANGALURU	0	0	**1**	**0**	**1**	2	**4**
24	SP., CHIKMAGALURU DISTRICT	0	0	0	0	0	3	**3**
25	SP., UDUPI DISTRICT	0	0	2	0	0	0	**2**

ANNEXURE-1								
SL NO	**UNITS**	**DYSP/ACP**	**PI/RPI**	**PSI/RSI**	**ASI/ARSI**	**CHC/AHC**	**CPC/APC**	**TOTAL**
26	SP., UK., KARWAR DISTRICT	0	0	1	0	3	1	**5**
27	**IGP., NR., BELGAUM**	**0**	**1**	1	0	0	0	**2**
28	**COP BELGAVI**	**0**	**0**	0	0	0	3	**3**
29	**COP HUBBALI DHARWAD**	**0**	**0**	0	1	3	1	**5**
30	SP., BELGAUM DISTRICT	0	0	**0**	**1**	**1**	5	**7**
31	SP., GADAG DISTRICT	0	1	1	2	0	5	**9**
32	SP., DHARWAD DISTRICT	0	0	0	0	0	0	**0**
33	SP., VIJAYPUR DISTRICT	0	0	0	0	1	6	**7**
34	SP., BAGALKOTE DISTRICT	0	0	0	0	3	1	**4**
35	**IGP., NER., KALBURGI**	**0**	**0**	0	0	0	0	**0**
36	**COP KALABURAGI**	**0**	**0**	0	0	0	2	**2**
37	SP., KALBURGI DISTRICT	0	0	**0**	**0**	**2**	0	**2**
38	SP., BIDAR DISTRICT	0	0	0	0	1	3	**4**
39	SP., YADAGIRI DISTRICT	0	0	0	0	0	6	**6**
40	**IGP., BALLARY RANGE**	0	0	0	0	0	0	**0**
41	SP., BALLARY DISTRICT	0	0	**0**	**0**	**4**	2	**6**
42	SP, RAICHUR DISTRICT	0	1	1	2	3	9	**16**
43	SP., KOPPAL DISTRICT	0	0	0	0	4	2	**6**
44	SP, VIJYANAGAR DISTRICT	0	0	0	0	3	9	**12**
45	CSP UDUPI	0	0	0	0	0	2	**2**
46	II BN KSRP., BELGAUM	0	0	0	0	0	1	**1**
47	IV BN KSRP., BENGALURU	0	0	0	0	1	0	**1**
48	V BN KSRP., MYSURU	0	0	0	0	1	0	**1**
49	VII BN KSRP., MANGALURU	0	0	0	1	1	1	**3**
50	IX BN KSRP., BENGALURU	0	0	0	0	0	1	**1**

ANNEXURE-1								
SL NO	**UNITS**	**DYSP/ACP**	**PI/RPI**	**PSI/RSI**	**ASI/ARSI**	**CHC/AHC**	**CPC/APC**	**TOTAL**
51	XI I BN KSRP., TUMKURU	0	0	0	0	1	0	**1**
52	COMMANDANT IRB VIJAYAPURA	0	0	0	0	0	1	**1**
53	SP., WIRELESS	0	0	1	2	1	0	**4**
54	KSISF., 1RD BTLN, YALAHANKA	0	0	0	0	1	2	**3**
55	KSISF., 3RD BTLN, DHARWAD	0	1	1	1	0	1	**4**
TOTAL		**2**	**14**	**30**	**29**	**102**	**163**	**340**

ANNEXURE-2								
SL NO	**UNITS**	**DYSP/ACP**	**PI/RPI**	**PSI/RSI**	**ASI/ARSI**	**CHC/AHC**	**CPC/APC**	**TOTAL**
1	COP., BENGALURU CITY	2	10	19	5	24	36	**96**
2	**IGP., CENTRAL RANGE, BENGALURU**	**0**	**0**	0	0	0	0	**0**
3	SP., BENGALURU DISTRICT	0	0	**0**	**1**	**3**	3	**7**
4	SP., TUMKURU DISTRICT	0	0	0	0	1	1	**2**
5	SP., KOLAR DISTRICT	0	0	0	0	3	5	**8**
6	SP., KGF DISTRICT	0	0	0	0	0	2	**2**
7	SP, RAMANAGAR DISTRICT	0	0	0	0	2	2	**4**
8	SP., CHIKKABALLPUR DISTRICT	0	0	0	0	3	2	**5**
9	**IGP., SOUTHERN RANGE, MYSURU**	**0**	**0**	0	0	0	0	**0**
10	**COP MYSURU CITY**	**0**	**0**	0	0	2	1	**3**
11	SP, MYSURU DISTRICT	0	0	**1**	**0**	**0**	3	**4**
12	SP., CHAMARAJANAGAR DISTRICT	0	0	1	0	2	3	**6**
13	SP., HASAN DISTRICT	0	0	1	1	4	3	**9**
14	SP., MANDYA DISTRICT	0	0	0	1	3	7	**11**
15	SP., KODAGU DISTRICT	0	0	0	0	0	4	**4**
16	**IGP., ER., DAVANAGERE**	**0**	**0**	6	0	0	5	**11**
17	**SP., DAVANAGERE**	**0**	**0**	**1**	**1**	**4**	2	**8**
18	SP., SHIMOGGA DISTRICT	0	0	**0**	**5**	**3**	3	**11**
19	SP., CHITRADURGA DISTRICT	0	0	0	1	4	5	**10**
20	SP., HAVERI DISTRICT	0	0	1	0	3	2	**6**
21	**IGP., WR., M'LURU**	**0**	**0**	0	0	0	0	**0**
22	**COP MANGALURU CITY**	**0**	**1**	0	0	4	3	**8**
23	SP., D.K. MANGALURU	0	0	**1**	**0**	**1**	2	**4**
24	SP., CHIKMAGALURU DISTRICT	0	0	0	0	0	3	**3**
25	SP., UDUPI DISTRICT	0	0	1	1	0	0	**2**
26	SP., UK., KARWAR DISTRICT	0	0	0	1	3	1	**5**
27	**IGP., NR., BELGAUM**	**0**	**1**	1	0	0	0	**2**

28	**COP BELGAVI**	**0**	0	0	0	0	3	**3**
29	**COP HUBBALI DHARWAD**	**0**	**0**	0	1	3	1	**5**
30	SP., BELGAUM DISTRICT	0	0	**0**	**1**	**1**	5	**7**
31	SP., GADAG DISTRICT	0	1	1	2	0	5	**9**
32	SP., DHARWAD DISTRICT	0	0	0	0	0	0	**0**
33	SP., VIJAYPUR DISTRICT	0	0	0	0	1	6	**7**
34	SP., BAGALKOTE DISTRICT	0	0	0	0	3	1	**4**
35	**IGP., NER., KALBURGI**	**0**	**0**	0	0	0	0	**0**
36	**COP KALABURAGI**	**0**	**0**	0	0	0	2	**2**
37	SP., KALBURGI DISTRICT	0	0	**0**	**0**	**2**	0	**2**
38	SP., BIDAR DISTRICT	0	0	0	0	1	3	**4**
39	SP., YADAGIRI DISTRICT	0	0	0	0	0	6	**6**
40	**IGP., BALLARY RANGE**	0	0	0	0	0	0	**0**
41	SP., BALLARY DISTRICT	0	0	**0**	**0**	**4**	2	**6**
42	SP, RAICHUR DISTRICT	0	0	0	1	0	6	**7**
43	SP., KOPPAL DISTRICT	0	0	0	0	1	0	**1**
44	SP, VIJYANAGAR DISTRICT	0	0	0	0	2	3	**5**
45	CSP UDUPI	0	0	0	0	0	2	**2**
46	II BN KSRP., BELGAUM	0	0	0	0	0	1	**1**
47	VII BN KSRP., MANGALURU	0	0	0	1	1	1	**3**
48	IX BN KSRP., BENGALURU	0	0	0	0	0	1	**1**
49	KSISF., 1RD BTLN, YALAHANKA	0	0	0	0	1	2	**3**
50	COMMANDANT IRB VIJAYAPURA	0	0	0	0	0	1	**1**
51	SP., WIRELESS	0	0	1	2	1	0	**4**
52	KSISF., 3RD BTLN, DHARWAD	0	1	1	1	0	1	**4**
TOTAL		**2**	**14**	**36**	**26**	**90**	**150**	**318**

<u>ಅನುಬಂಧ–1</u>

ಕಳೆದ 02 ವರ್ಷಗಳಲ್ಲಿ ಅಧಿಕಾರಿ/ ಸಿಬ್ಬಂದಿಗಳ ವಿರುದ್ದ ಎಫ್ಐಆರ್ ದಾಖಲಾದ ಅಂಕಿ ಅಂಶಗಳು:

ವೃಂದ	**ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ**
ಡಿವೈಎಸ್ಪಿ/ಎಸಿಪಿ	02
ಪಿಐ/ಆರ್ಪಿಐ	14
ಪಿಎಸ್ಐ/ಆರ್ಎಸ್ಐ	30
ಎಎಸ್ಐ/ ಎಆರ್ಎಸ್ಐ	29
ಸಿಹೆಚ್ಸಿ/ ಎಹೆಚ್ಸಿ	102
ಸಿಪಿಸಿ/ ಎಪಿಸಿ	163
ಒಟ್ಟು	**340**

ಪೊಲೀಸ್ ಆಯುಕ್ತರು, ಬೆಂಗಳೂರು ನಗರ

ಕ್ರ. ಸಂ	ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಅಧಿಕಾರಿ/ ಸಿಬ್ಬಂದಿ ಹೆಸರು ಮತ್ತು ಹುದ್ದೆ	ಪ್ರಕರಣದ ವಿವರ			ಪ್ರಕರಣದ ಸಾರಾಂಶ	ಸದರಿ ಪ್ರಕರಣದಡಿಯಲ್ಲಿ ಬಂಧಿತರಾಗಿರುವರೇ? ಬಂಧಿತರಾಗಿದಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದ ಹೆಸರು, ಕರ್ತವ್ಯದ ಸ್ಥಳ ಮತ್ತು ಹುದ್ದೆ	ಬಂಧನದ ಅವಧಿ ಎಷ್ಟು	ಅಪರಾಧ ಪ್ರಕರಣದ ಪ್ರಸ್ತುತ ಹಂತ
		ಠಾಣಾ FIR ಸಂಖ್ಯೆ	ಕಲಂ	ದಾಖಲಾದ ದಿನಾಂಕ				
1.	ಎ1.ಬಸವರಾಜ, ಪಿಸಿ-21319, ಎ2.ಮಾಳಪ್ಪ, ಪಿಸಿ-20749 ಇಬ್ಬರೂ ಸೋಲದೇವನಹಳ್ಳಿ ಪೊಲೀಸ್ ಠಾಣೆ	ಸೋಲದೇವನಹಳ್ಳೀ ಪೊಲೀಸ್ ಠಾಣೆ, ಮೊ.ಸಂ.468/2024	ಕಲಂ 21, 462, 354, 354(ಎ)(i), 309, 34 ಐಪಿಸಿ, 75 ಜೆಜೆ ಆಕ್ಟ್ ಮತ್ತು 7, 8, 9(ಜೆ), 10, 11(ಜೆ), 12 ಪೊಕ್ಸೋ ಆಕ್ಟ್	01-12-2024	ದಿನಾಂಕ:-24.12.2023 ರಂದು ಮದ್ಯಾಹ್ನ 02 ಗಂಟೆಯಲ್ಲಿ ಸೋಲದೇವನಹಳ್ಳಿಯ ಅಚ್ಯುತನಗರದ ಒಂದು ರೂಮಿನಲ್ಲಿ ಪಿರ್ಯಾದಿಯ ಸ್ನೇಹಿತೆಯರು ಹಿಸುಕಿದ್ದಾರೆಂದು ಈ ಕ್ರಮಕ್ಕಾಗಿ ನೀಡಿದ ದೂರು.	ಪೊಲೀಸ್ ಅಧಿಕಾರಿಗಳು ಬಂಧಿತರಾಗಿರುವುದಿಲ್ಲ	-	ಸಕ್ಷಮ ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ
2.	**"ಗಿರೀಶ್ ಕೆಡಿ ನಂ-208 ಎ ಬ್ಲಾಕ್ ನ್ಯೂ ಪೊಲೀಸ್ ಕ್ವಾರ್ಟರ್ಸ್ ವಳಗೇರಹಳ್ಳಿ ಕೆಂಗೇರಿ**, HC - **8809"**	ಕೆಂಗೇರಿ ಪಿ.ಎಸ್ 257/2024	ಕಲಂ.498(A), 504,506 ಐಪಿಸಿ	20.05.2024	**ಪಿರ್ಯಾದುದಾರ ಗಂಡ** ಕರ್ನಾಟಕ **ಪೊಲೀಸ್ ಇಲಾಖೆಯಲ್ಲಿ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್ ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದು, ಒಂದು ವರ್ಷದಿಂದ ಮನೆಗೆ ಸರಿಯಾಗಿ ಬರದೇ ಮನೆಗೆ ದಿನಸಿ ಸಾಮಾನುಗಳನ್ನು ಮನೆಗೆ ತರದೆ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೆ ತೊಂದರೆ ಮಾಡುತ್ತಿರುತ್ತಾನೆ. ಈ ವಿಚಾರವಾಗಿ ಕೇಳಿದಾಗ ಆತ ನನಗೆ ಅವಾಚ್ಯವಾಗಿ**	ದಸ್ತಗಿರಿಪಡಿಸಿರುವುದಿಲ್ಲ	_	ಬಿ ಅಂತಿಮ ವರದಿಯನ್ನು ಸಲ್ಲಿಸಿದೆ.

	ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ				**ಬೈಯುವುದು ಕೊಲೆ ಬೆದರಿಕೆ ಹಾಕುವುದು ಮಾಡುತ್ತಿರುತ್ತಾನೆ..ಆದ್ದರಿಂದ ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿ ಅವಾಚ್ಯವಾಗಿ ಬೈದು ಕೊಲೆ ಬೆದರಿಕೆ ಹಾಕಿ ನಮ್ಮ ಸಂಸಾರಕ್ಕೆ ಕಾರಣವಾಗಿರುವ ಮಧು ಎಂಬ ಹುಡುಗಿ ಕಾರಣರಾಗಿದ್ದು ಸದರಿಯವರ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಪಿರ್ಯಾದಿ ಕೊಟ್ಟ ದೂರು ಇತ್ಯಾದಿ**.			
3.	Kadugodi PS	Nataraj HC 10503	420/2024 u/s 85 R/w 3(5) BNS	31/07/ 2024	ಪಿರ್ಯಾದುದಾರರನ್ನು ದಿನಾಂಕ:೦೯-೦೧-೨೦೧೪ ರಂದು ನಟರಾಜ್ ಎಂಬುವವರನ್ನು ರಿಜಿಸ್ಟರ್ ಮದುವೆ ಆಗಿರುತ್ತದೆ. ಮದುವೆಯಾದ ನಂತರ ೩ ವರ್ಷಗಳು ಚೆನ್ನಾಗಿದ್ದೇವು. .ನನಗೆ ವರದಕ್ಷಿಣೆಗಾಗಿ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿರುವ ನನ್ನ ಗಂಡ ನಟರಾಜ್, ಅತ್ತೆ, ಕೋಟ್ರಮ್ಮ, ಮಾವ ಕೋಟ್ರೇಶ್, ಮೈದುನ ಮೌನೇಶ್, ಹಾಗೂ ಪ್ರಿಯಾ ರವರ ವಿರುದ್ದ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.	Not Arrested Court Bail		
4.	ಆನಂದ ಪಾಟೀಲ್, ಪಿಸಿ-14053 ಗೋವಿಂದ ಪುರ ಪೊಲೀಸ್ ಠಾಣೆ	98/2024	354(B),506,3 24,341,504) IPC	22.03.2 024	ಈ ಕೇಸಿನ ಸಾರಾಂಶವೇನೆಂದರೆ, ನಾನು ನನ್ನ ತಂದೆ ತಾಯಿ ಮತ್ತು ತಮ್ಮನೊಂದಿಗೆ ಮೇಲ್ಕಂಡ ವಿಳಾಸದಲ್ಲಿ ವಾಸ ಮಾಡಿಕೊಂಡಿದ್ದು, ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಹಿಳಾ ಕಾನ್ಸ್ಟೇಬಲ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ದಿನಾಂಕ:11.03.2024 ರಂದು ಗೋವಿಂದಪುರ ಪೊಲೀಸ್ ಠಾಣೆಗೆ ನಾನು ಬಂದಿದ್ದು, ಬೆಳಿಗ್ಗೆ 11.00 ಗಂಟೆ ಸಮಯಕ್ಕೆ ಗೋವಿಂದಪುರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ಪೆಕ್ಟರ್ ರವರನ್ನು ಭೇಟಿ ಮಾಡಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಬಂದ ದೂರು ಅರ್ಜಿಯ ಬಗ್ಗೆ ಮಾಹಿತಿ	-	-	ಬಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ.

					ಪಡೆದುಕೊಂಡಿರುತ್ತೇನೆ. ಅದೇ ದಿನ ದಿನಾಂಕ:11.03.2024 ರಂದು ಎಪಿಜೆ ಅಬ್ದುಲ್ ಕಲಾಂ ರಸ್ತೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕಿಂತ ಹಿಂಭಾಗ (ಗೋವಿಂದಪುರ ಪೊಲೀಸ್ ಠಾಣೆ ಹತ್ತಿರ) ಆನಂದ್ ಬಿ ಪಾಟೀಲ್ ರವರು ನನ್ನನ್ನು ಉದ್ದೇಶಿ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ನನ್ನನ್ನು ಅಡ್ಡಗಟ್ಟಿ ದೊಣ್ಣೆಯನ್ನು ತೆಗೆದುಕೊಂಡು ನನ್ನ ಬೆನ್ನಿಗೆ ಹೊಡೆದು ಹಾಗೂ ನಾನು ಧರಿಸಿದ್ದ ವೇಲ್ನ್ನು ಎಳೆದು ನನ್ನ ಮಾನಹಾನಿ ಮಾಡಿದರು. ನಿನ್ನನ್ನು ಇಷ್ಟಕ್ಕೆ ಸುಮ್ಮನೆ ಬಿಡುವುದಿಲ್ಲವೆಂದು ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿದರು. ಆನಂದ್ ಬಿ ಪಾಟೀಲ್ ರವರು ನಾನು ನೆಮ್ಮದಿಯಾಗಿ ಬದುಕಲು ಬಿಡುತ್ತಿಲ್ಲ ಆದ್ದರಿಂದ ಆನಂದ್ ಬಿ ಪಾಟೀಲ್ನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ನೀಡಿದ ದೂರು ಇತ್ಯಾದಿ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವಿಶ್ರಾಂತಿ ಪಡೆದುಕೊಂಡು ತಡವಾಗಿ ದೂರು ನೀಡಿರುತ್ತೇನೆ.			
5.	ಆನಂದಕುಮಾರ್ ಮೋಪಗಾರ, ಪಿ.ಎಸ್.ಐ ಗೋವಿಂದಪುರ ಪೊಲೀಸ್ ಠಾಣೆ	320/2024	167 IPC	23.09.2024	ಈ ಕೇಸಿನ ಸಾರಾಂಶವೇನೆಂದರೆ, ಫಿರ್ಯಾದುದಾರರು ದಿನಾಂಕ-11.09.2024 ರಂದು ಸ್ನೇಹಿತನ ಹುಟ್ಟು ಹಬ್ಬವನ್ನು ಮುಗಿಸಿಕೊಂಡು ಸುಮಾರು ಮದ್ಯರಾತ್ರಿ 01.00 ಗಂಟೆಯ ಸಮಯದಲ್ಲಿ ಶಂಕರ ಬಾರ ಆಂಡ್ ರೆಸ್ಟುರೆಂಟ್ ಬಳಿ ಬಂದು ಲಿಕರ್ ಸಿಗುತ್ತದೆ ಎಂದು ಹೋಗಿ ನೋಡಿದಾಗ, ಲಿಕರ್ ತೆಗೆದುಕೊಳ್ಳುವ ವಿಚಾರವಾಗಿ ಗಲಾಟೆಯಾಗಿ ಸುಮಾರು 7ರಿಂದ 8 ಜನ ಸೇರಿ ಫಿರ್ಯಾದುದಾರರ ಹಿಂಭಾಗದಿಂದ ಬಂದು ಬಿಯರ್ ಬಾಟಲಿಯಿಂದ ತಲೆಗೆ ಹೊಡೆದಾಗ ಫಿರ್ಯಾದುದಾರರು ಕೇಳಗಡೆ ಬಿದಿದ್ದು, ನಂತರ	-	-	ಬಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ.

					ಎದು ಹೋಗುವಾಗ ಚುಪಾದ ಕಬ್ಬಿನದ ವಸ್ತುವಿನಿಂದ ಫಿರ್ಯಾದುದಾರರ ಸೊಂಟದ ಹಿಂಭಾಗಕ್ಕೆ ಚುಚಿರುತ್ತಾರೆ. ಈ ವಿಚಾರವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ದಿನಾಂಕ-14.09.2022 ರಂದು ಗೋವಿಂದಪುರ ಠಾಣೆಯ ಮೊ ಸಂ-138/2022 ರಿತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದ ತನಿಖಾಧಿಕಾರಿಗಳು ದೂರನ್ನು ಟೈಪ್ ಮಾಡಿ ಫಿರ್ಯಾದುದಾರರಿಗೆ ತೋರಿಸಿ, ಕೇಳದೇ ಹಾಗೆ ಸಹಿಯನ್ನು ಪಡೆದುಕೊಂಡಿದ್ದು, ದೂರಿನಲ್ಲಿ ಸತ್ಯಾಂಶವನ್ನು ಪಡೆಯದೇ ಆರೋಪಿಗಳಿಗೆ ಸಹಾಯವಾಗುವಂತೆ 324 ಐಪಿಸಿ ಸೆಕ್ಷನ್ ನನ್ನು ಹಾಕಿದ್ದು, ತನಿಖಾಧಿಕಾರಿಗಳು ಮೇಲೆ 167 ಐಪಿಸಿ ರಿತ್ಯಾ ಆರೋಪ ಮಾಡಿರುತ್ತಾರೆಂದು ಸದರಿಯವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಮಾನ್ಯ 11ನೇ ಎ.ಸಿ.ಎಮ್.ಮ್ ನ್ಯಾಯಲಯದಲ್ಲಿ ಪಿ.ಸಿ.ಆರ್-57276/2022 ರಲ್ಲಿ ದೂರು ದಾಖಲಿಸಿರುತ್ತಾರೆ.			
6.	ಶ್ರೀ.ದಿವಾಕರ್, ಪೊಲೀಸ್ಇನ್ಸ್ಪೆಕ್ಟರ್, ಹಲಸೂರು ಪಿ.ಎಸ್ (ಪ್ರಸ್ತುತಕೊಳ್ಳೆಗಾಲ.ಪಿ.ಎಸ್)	96/2024,	ಕಲಂ: 108,499,464,463, 322,119,116, 503,192, 191,344,342, 336,471,470, 468,465,201, 188,120B, 204,203,34,341,196, 500,211,466, 209,195,	17.03.2024	ಪಿರ್ಯಾದುದಾರರಾದ ಶ್ರೀ ಧನಂಜಯ್ ಅವರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಅಸ್ಟ್ರೋಫಿಜಿಕ್ಸ್ನಲ್ಲಿ 2003 ರಿಂದ ಇಂಜಿನಿಯರ್/ ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದರು. ಸಂಸ್ಥೆಯನರ್ವಹಣಾ ಸಮಿತಿಯು ಸುಮಾರು ₹೨೦೦೦ಕೋಟಿ ಸರ್ವಜನಿಕ ನಿಧಿ ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿ ಅವರು ವಿವಿಧ ನ್ಯಾಯಾಲಯಗಳಲ್ಲಿ (ಔ.ಂ., W.P.) ಮತ್ತು ಪೊಲೀಸರಿಗೆ ದೂರು ನೀಡಿದ್ದಾರೆ. ಇದರಿಂದ ಸಂಸ್ಥೆಯ ಮಾಜಿನರ್ದೇಶಕ ಶ್ರೀ ಕುಮಾರ್ಹಾಗೂಡಾ. ಕೆ.ಬಿ. ಸುರೇಶ್ ಅವರ ಸಹಕಾರದಿಂದ ಪರ್ಯಾದುದಾರರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಸರಿಯಾದ ವಿಚಾರಣೆ			ಬಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ.

			166,107,217, 166(a)		ಹಾಗೂ ವರದಿ ಇಲ್ಲದೆ ೨೨-೦೫-೨೦೧೮ ರಂದು ಕೆಲಸದಿಂದ ವಜಾಗೊಳಿಸಲಾಗಿದೆ ಎಂದು ಆರೋಪಿಸಲಾಗಿದೆ. ಪರ್ಯಾದುದಾರರು ಹೈಕರ್ಟ್ ನಲ್ಲಿ ತನಿಖೆಗೆ ಮನವಿ ಮಾಡಿದ್ದಾರೆ. ಕೆಲಸ ವಾಪಸು ಪಡೆಯಲು ಅಗತ್ಯ ದಾಖಲೆಗಳನ್ನು ಆರ್‌ಟಿಐ ಕಾಯ್ದೆಯಡಿ ಕೇಳಿದರೂ, ಅಧಿಕಾರಿಗಳು ಮಾಹಿತಿ ನೀಡದೆ ಕರ್ತವ್ಯ ಲೋಪ ಮಾಡಿದ್ದಾರೆ. ನಂತರ ಸುಳ್ಳುಈಖ (ಅಡಿ.ಓಂ.೨೨೮/೨೦೧೯, IPಅಖಖಖ, ಖಂಟ) ದಾಖಲಿಸಿ, ಪರ್ಯಾದುದಾರರನ್ನು ಯಾವುದೇ ಸರ್ಪಕ ಕಾರಣವಿಲ್ಲದೆ ಬಂಧಿಸಿ, ೩೮ ದಿನ ಜೈಲಿನಲ್ಲಿ ಇರಿಸಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಆರೋಪಿಗಳು ಅಧಿಕಾರ ದುರುಪಯೋಗ ಮಾಡಿಕೊಂಡು ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದ್ದಾರೆ ಎಂಬುದು ಪಿಸಿ ಆರ್ಡರಿನ ಮುಖ್ಯ ಅಂಶವಾಗಿದೆ.			
7.	ಶ್ರೀ ವೆಂಕಟೇಶ್ ಬಿನ್ ತಿಮ್ಮಯ್ಯ .ಎ.ಎಹಚ್. ಸಿ 52	ಮಹಾ ಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಯ ಮೊ.ಸಂ 335/2024	ಕಲಂ 3(1)(ಆರ್) (ಎಸ್) ಎಸ್.ಸಿ.ಎಸ್.ಟಿಆಕ್ಟ್ ಮತ್ತು 504, 506, 420 ರೆ/ವಿ 34 ಐಪಿಸಿ	09/12/2024	ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ, ಪಿರ್ಯಾದುದಾರರು ಲಂಬಾಣಿ ಜನಾಂಗದ ಎಸ್ ಸಿ ಜಾತಿಗೆ ಸೇರಿದವರಾಗಿದ್ದು, ಫರ್ಯಾದುದಾರರಿಗೆ ಚಂದನ 25 ರ್ಷ, ಚಿಂತನ 24 ರ್ಷ ಮತ್ತು ಚೇತನ 18 ರ್ಷ ಎಂಬ 3 ಜನ ಮಕ್ಕಳಿದ್ದು, ಸದರಿ ಇಬ್ಬರು ಹೆಣ್ಣು ಮಕ್ಕಳು ಇಂಜಿನಿಯರಿಂಗ್ ಓದಿದ್ದು, ಓದಿದ ನಂತರ ಕೆಲಸಕ್ಕಾಗಿ ಹುಡುಕುತ್ತಿದ್ದಾಗ 2022 ಇಸವಿಯಲ್ಲಿ ನೆಲಮಂಗಲದ ಆಗಿನ ಶಾಸಕರ ಬಳಿ ಸಹಾಯಕ್ಕಾಗಿ ಹೋಗಿದ್ದಾಗ ಅವರ ಗನ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ	ಸದರಿ ಆರೋಪಿಯು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದಿರುತ್ತಾರೆ. ಬೆಂಗಳೂರು ಗ್ರಾಮಾಂತರ ಪೊಲೀಸ್ ಅಧೀಕ್ಷರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.	ಇಲ್ಲ	ಬಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದ

					ವೆಂಕಟೇಶ್.ಟಿ [ಎಪಿಸಿ-193] ರವರು ಫರ್ಯಾದುದಾರರನ್ನು ಮಾತನಾಡಿಸಿ ನೀವು ಎಸ್.ಸಿ ಕ್ಯಾಟಗರಿಗೆ ಬರುತ್ತೀರ, ರ್ಯಾಂಕ್ ಕೆಲಸ ಅಥವಾ ಒಂದು ದೊಡ್ಡ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಪ್ರಯತ್ನಿಸಬಹುದು ನಾನು ನಿಮಗೆ ಸಹಾಯ ಮಾಡುತ್ತೇನೆ ಎಂದು ಹೇಳಿದ್ದು, ನಂತರ ಒಂದೆರೆಡು ತಿಂಗಳು ಕಳೆದ ಮೇಲೆ ಫರ್ಯಾದುದಾರರಿಗೆ ಫೋನ್ ಮಾಡಿ ನಿಮ್ಮ ಮಕ್ಕಳಿಗೆ ಒಂದು ಒಳ್ಳೆ ಕಡೆ ಕೆಲಸ ನೋಡಿದ್ದೆನೆ ಈಗ ಅವರಿಗೆ ಅವಸರವಾಗಿ ಹಣ ನೀಡಿ ಕೆಲಸವನ್ನು ಖಾತರಿ ಮಾಡಿಕೊಳ್ಳಬೇಕು ಎಂದು ಹೇಳಿ ಫರ್ಯಾದುದಾರರಿಂದ 2,50,000/- ರೂ ಹಣ ಪಡೆದುಕೊಂಡನು. ಅನಂತರ ಫರ್ಯಾದುದಾರರ ಇಬ್ಬರು ಮಕ್ಕಳ ಫೋನ್ ಪೇ ಮೂಲಕ 16,50,000/- ರೂ ಹಣವನ್ನು ಪಡೆದುಕೊಂಡಿರುತ್ತಾನೆ, ನಂತರ ಫರ್ಯಾದುದಾರರ ಮಕ್ಕಳಿಗೆ ಯಾವುದೇ ಕೆಲಸ ಕೊಡಿಸದೇ ಇದ್ದಾಗ ಅನುಮಾನ ಬಂದು ಮಕ್ಕಳಿಗೆ ಕೆಲಸ ಕೊಡಿಸು ಇಲ್ಲವಾದಲ್ಲಿ ನಮ್ಮ ಹಣವನ್ನು ಹಿಂತಿರುಗಿಸು ಎಂದು ಒತ್ತಾಯ ಮಾಡಿದಾಗ ವೆಂಕಟೇಶ್ ಈತನು ಆಗೊಮ್ಮೆ ಇಗೊಮ್ಮೆ ಹಣ ಕೊಡುತ್ತಾ 8,70,000/- ರೂ ಹಣವನ್ನು ನೀಡಿ ಇನ್ನು ಉಳಿದ 7,80,000/-ರೂ ಕೊಡಬೇಕಾಗಿದ್ದು, ಸದರಿ ಹಣ ಕೊಡದೇ ಇದ್ದಾಗ ಫರ್ಯಾದುದಾರರು ಅವನ್ನನ್ನು ಹುಡುಕಿಕೊಂಡು ದಿನಾಂಕ:_08/07/2023 ರಂದು ಸಂಜೆ 6.00 ಗಂಟೆಗೆ ನಂದಿನಿಲೇಔಟ್ ನ ಸರಸ್ವತಿಪುರಂ ನಲ್ಲಿರುವ ಅವನ ಮನೆಗೆ ಹೋದಾಗ ಅವನ ಹೆಂಡತಿ ಪರ್ವತಿ (ಪಾರು) ರವರು ನನ್ನ ಗಂಡ ವೆಂಕಟೇಶ್ ಯಾವಾಗಲೂ ರಾತ್ರಿ 11.00 ಗಂಟೆಗೆ ಬರುತ್ತಾರೆ. ನೀವು ಆಗ			

					ಬಂದು ಭೇಟಿ ಮಾಡಿ ಎಂದು ಹೇಳಿದರು. ಆಗ ಫರ್ಯಾದುದಾರರು ವಾಪಸ್ಸು ಬಂದು ನಂತರ ರಾತ್ರಿ 11.00 ಗಂಟೆಗೆ ಹೋದಾಗ ವೆಂಕಟೇಶ್ ಮನೆಯಲ್ಲಿ ಇದ್ದು ಫರ್ಯಾದುದಾರರು ಬಾಗಿಲು ತಟ್ಟಿದಾಗ ವೆಂಕಟೇಶ್ ಮತ್ತು ಅವನ ಹೆಂಡತಿ ಬಂದು ಫರ್ಯಾದುದಾರರನ್ನು ನೋಡಿ ಹೊರಗೆ ನಿಲ್ಲಿಸಿ ಮಾತನಾಡಿಸಿದ್ದು, ಫರ್ಯಾದುದಾರರು ಅವರನ್ನು ಕಾಡಿ ಬೇಡಿ ನಿಮ್ಮ ದಮ್ಮಯ್ಯ ನಮ್ಮ ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿದಾಗ ಅವನು ''ಬಂಜಾಲಿ ಮುಂಡೆಯರ ನಾವು ಒಕ್ಕಲಿಗರು ನಮ್ಮ ಮನೆಯವರೆಗು ಬರುವಂಗೆ ಆಗಿದ್ದಿರ ನಮ್ಮ ರೋಡು ಸೂಳೆ ಮುಂಡೆ ಎಂದು ಬೈಯುತ್ತಿರುವಾಗ ಅವನ ಹೆಂಡತಿಯು ವಲೆಮಾದಿಗರನ್ನೆಲ್ಲ ಮನೆ ಹತ್ತಿರ ಬರುವವರೆಗು ನೀವು ಯಾಕೆ ಬಿಟ್ಟುಕೊಳ್ಳುತ್ತೀರ ನಿಮ್ಮ ಆಫೀಸರ್ ಲೆವೆಲ್ನಲ್ಲಿ ಹೇಳಿ ಇವರ ಬಾಯಿ ಮುಚ್ಚಿಸಲು ಆಗೋದಿಲ್ಲವ ಬಂಜಾಲಿಗ ಮುಂಡೆರ ಇನ್ನೊಂದು ಸಾರಿ ಬಂದರೆ ನಿಮಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೀನಾ ಮಾನವಾಗಿ ಬೈದು ಇನ್ನೊಂದು ಪೈಸೆ ದುಡ್ಡು ಕೊಡುವುದಿಲ್ಲ ಏನು ಕಿತ್ತುಕೊಳ್ಳುತ್ತೀಯಾ ಕಿತ್ತುಕೋ ಎಂದು ಬೆದರಿಕೆ ಹಾಕಿ ಜಾತಿ ನಿಂದನೆ ಮಾಡಿದ್ದು, ನಂತರ ಪರ್ವತಿ ರವರು ಇಬ್ಬರೂ ಹಣ್ಣು ಮಕ್ಕಳಿದ್ದಾರೆ ಅವರ ಜೀವನ ಹಾಳು ಮಾಡುತ್ತೇನೆಂದು ಬೆದರಿಕೆ ಹಾಕಿರುತ್ತಾರೆ. ನಂತರ ವೆಂಕಟೇಶನು ನಮ್ಮಿಬ್ಬರನ್ನು ಗೇಟಿನ ಹೊರಗೆ ದಬ್ಬಿದ್ದು ಗೇಟಿನ ಬೀಗವನ್ನು ಹಾಕಿಕೊಂಡಿರುತ್ತಾನೆಂದು ಆದ್ದರಿಂದ ಫರ್ಯಾದುದಾರರ ಮಕ್ಕಳಿಗೆ ಕೆಲಸ ಕೊಡಿಸುತ್ತೇನೆಂದು ನಂಬಿಸಿ ಹಣವನ್ನು ತೆಗೆದುಕೊಂಡು ವಂಚನೆ ಮಾಡಿ ಜಾತಿ ನಿಂದನೆ			

					ಮಾಡಿದ ವೆಂಕಟೇಶ್ ಮತ್ತು ಇತನ ಹೆಂಡತಿಯಾದ ಪರ್ವತಿ ರವರ ವಿರುದ್ದ ಮುಂದಿನ ಕ್ರಮಕ್ಕಾಗಿ ನೀಡಿದ ದೂರನ್ನು ಪಡೆದುಕೊಂಡು ದಿನಾಂಕ 04-12-2024 ರಂದು 17-35 ಗಂಟೆಗೆ ನಂದಿನಿಲೇಔಟ್ ಪೊಲೀಸ್ ಠಾಣೆಯ ಪೊಲೀಸರು ಮೊ.ಸಂ. 379/2024 ಕಲಂ 3(1) (r) (s) SC And ST (Prevention of attrocities) Act 1989. ಮತ್ತು 504, 506, 420 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವನ್ನು ದಾಖಲಿಸಿ, ತನಿಖೆ ಕೈಗೊಂಡು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ದಿನಾಂಕ 07-12-2024 ರಂದು ಮಾನ್ಯ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು ನಗರ ರವರ ಆದೇಶ ಸಂಖ್ಯೆ:ಅಪರಾಧ-1/ರಾ.ನ./94/ಡಿಸಿಪಿ(ಉ)/2024, ಅನ್ವಯ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಸಲುವಾಗಿ ರಾ.ನವಣೆ ನೀಡಿದ್ದು, ದಿನಾಂಕ 07-12-2024 ರಂದು ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿ ಸದರಿ ಕಡತದಲ್ಲಿ ಮಾನ್ಯ ಸಿ.ಸಿ.ಹೆಚ್-71ನೇ ನ್ಯಾಯಾಲಯದ ಅನುಮತಿ ಪತ್ರ ಇಲ್ಲದ ಕಾರಣ ಹಾಗೂ ಪೊಲೀಸ್ ಐ ಟಿ ತಂತ್ರಾಂಶದಲ್ಲಿ ರಾ.ನವಣೆ ಕೊಡದೇ ಇರುವ ಕಾರಣ ಕಾಯ್ದಿರಿಸಿ, ಸದರಿ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಈ ದಿನ ದಿನಾಂಕ 09-12-2024 ರಂದು ಸಂಜೆ ಸುಮಾರು 16-20 ಗಂಟೆಗೆ ನಂದಿನಿಲೇಔಟ್ ಪೊಲೀಸ್ ಠಾಣೆಯ ಹೆಚ್.ಸಿ-9007 ಶ್ರೀ ವೆಂಕೋಬಾ ರವರು ಮಾನ್ಯ ಸಿ.ಸಿ.ಹೆಚ್-71ನೇ ನ್ಯಾಯಾಲಯದಿಂದ ಸದರಿ ಪ್ರಕರಣ ನಂದಿನಿಲೇಔಟ್ ಪೊಲೀಸ್ ಠಾಣೆಯಿಂದ ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆಗೆ			

					ರ್ಾವಣೆಯ ಬಗ್ೆ ಅನುಮತಿ ಪತ್ರ ತಂದು ಹಾಜರು ಪಡಿಸಿದರ ಮೇರೆಗೆ ಈ ದಿನ ದಿನಾಂಕ 09-12-2024 ರಂದು ಸಂಜೆ ಸುಮಾರು 16-30 ಗಂಟೆಗೆ ಠಾಣಾ ಮೊ.ಸಂ. 335/2024 ಕಲಂ 3(1) (r) (s) SC And ST (Prevention of attrocities) Act 1989. ಮತ್ತು 504, 506, 420 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಿಸಿರುತ್ತದೆ.			
8.	ಶ್ರೀಪ್ರಶಾಂತ್ ಕುಮಾರ್ ಹೆಚ್.ಆರ್. ಎಹೆಚ್‌ಸಿ-	ನಂದಿನಿ ಲೇಔಟ್ ಪೊಲೀಸ್ ಠಾಣೆ ಮೊ.ಸಂ. 320/2024	ಕಲಂ 420, 504, 506 ರೆ/ವಿ 34 ಐಪಿಸಿ	21/09/2024	ಈ ಮೇಲ್ಕಂಡ ವಿಳಾಸದಲ್ಲಿ ಕುಟುಂಬ ಸಮೇತ ವಾಸವಾಗಿದ್ದುಕೊಂಡು, ಗೃಹಿಣಿಯಾಗಿರುತ್ತೇನೆ, ನಾನು ೨೦೨೦ ರಿಂದ ೨೦೨೪ ರ ಅಗಷ್ಟ ವರೆಗೆ ನಂ: ೫೨, ೪ ನೇ ಕ್ರಾಸ್, ಗಣೇಶ್ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು ನಗರ-೯೬ ರಲ್ಲಿ ವಾಸವಾಗಿದ್ದೇವು. ನಮ್ಮ ಸ್ವಂತಊರು ನಿಲಕನಹಳ್ಳಿ ಗ್ರಾಮ, ಬಿದ್ನಿಗೆರೆ ಪೋಸ್ಟ್, ಕೊತ್ತಗೆರೆ ಹೋಬಳಿ, ಕುಣಿಗಲ್‌ತಾ||, ತುಮಕೂರುಜಿಲ್ಲೆಯಾಗಿದ್ದು, ನನ್ನಗಂಡ ಮುದ್ದೇಗೌಡ ರವರು ಪ್ರೆöÊವೆಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ, ನಮಗೆ ಇಬ್ಬರು ಮಕ್ಕಳಿದ್ದು, ೧] ದಿವ್ಯ ಎಂ ೩೬ ವರ್ಷ ೨] ಕಾರ್ತಿಕ್ ಎಂ ೩೦ ವರ್ಷಆಗಿರುತ್ತಾರೆ, ಸದರಿಯವರು ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸುತ್ತಿದ್ದಾಗ, ನವೆಂಬರ್೨೦೨೧ ರಲ್ಲಿ ನಮ್ಮಊರಿನವರಾದ ಸಿ.ಎ.ಆರ್ ಪೊಲೀಸ್ ವಿಭಾಗ ಚಾಮರಾಜಪೇಟೆಯಲ್ಲಿ ಪೊಲೀಸ್ ಹೆಡ್‌ಕಾನ್ಸ್ ಸ್ಟೆಬಲ್ ಆಗಿ ಕೆಲಸ ಮಾಡುತ್ತಿರುವ ಪ್ರಶಾಂತ್ ಕುಮಾರ್ ಹೆಚ್ ಆರ್ ರವರು ಪರಿಚಯವಾಗಿದ್ದು, ನಾನು ನನ್ನ ಮಕ್ಕಳ ಸರ್ಕಾರಿ ಕೆಲಸ ಬಗ್ೆ ಸದರಿಯವರಿಗೆ ವಿಚಾರ ಮಾಡಲಾಗಿಆತ ನಾನು ಸದ್ಯಎಡಿಜಿಪಿ ಶ್ರೀ ಉಮೇಶ್ ಕುಮಾರ್ ರವರ ಕಾರ್‌ಡ್ರೆöÊವರ್ ಆಗಿ ಕೆಲಸ ಮಾಡುತ್ತಿದ್ದು, ನನಗೆ ಹಲವಾರು ಜನ	ಸದರಿಸಿಬ್ಬಂದಿಯುಅಮಾನತ್ತಿನಲ್ಲಿದ್ದು, ಮಾನ್ಯ ಡಿಸಿಪಿ ಸಿ.ಎ.ಆರ್ ಕೇಂದ್ರರವರ ಆದೇಶ ಸಂಖ್ಯೆ: 87/ಡಿಇ/ಆರ್-6/ಡಿಸಿಪಿ/ ಸಿಎಆರ್ (ಕೇ)/2024. ದಿ: 30.10.2025 ರಲ್ಲಿಇಲಾಖಾ ವಿಚಾರಣೆ ನಡೆಯುತ್ತಿರುತ್ತದೆ.	ಇಲ್ಲ	ತನಿಖೆಯಲ್ಲಿರುತ್ತದೆ.

					ಸರ್ಕಾರಿ ಅಧಿಕಾರಿಗಳು ಮತ್ತು ಕೆ.ಪಿ.ಎಸ್.ಸಿ ಯಲ್ಲಿ ಪರಿಚಯದವರಿದ್ದು ನಾನು ನಿಮ್ಮ ಇಬ್ಬರು ಮಕ್ಕಳಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿರುತ್ತಾನೆ, ಈ ಬಗ್ಗೆ ಮಾತನಾಡಲುಅವರ ಮನೆಗೆ ಬರುವಂತೆ ತಿಳಿಸಿದ್ದು, ನಂತರ ನಾನು ಮತ್ತು ನಮ್ಮಯಜಮಾನರು ಪ್ರಶಾಂತ್ ಕುಮಾರ್ ರವರು ವಾಸಿಸುತ್ತಿದ್ದ ಬ್ಯಾಡರಹಳ್ಳಿ ಸಮೀಪ ಭರತ್ ನಗರದಅವರ ಮನೆಗೆ ಹೋಗಿದ್ದು, ಅಲ್ಲಿ ಪ್ರಶಾಂತ್ ಮತ್ತು ಅವರ ಹಂಡತಿ ದೀಪಾ ಮೊ ನಂ: ೯೬೮೬೬೪೪೪೪೪೪೧ ರವರು ನಮ್ಮೊಂದಿಗೆ ಮಾತನಾಡಿ ನಿಮ್ಮ ಮಗನಿಗೆ ಎಸ್ ಡಿ ಎ ಮತ್ತು ಮಗಳಿಗೆ ಎಫ್ ಡಿ ಎ ಸರ್ಕಾರಿ ಹುದ್ದೆಯನ್ನು ೩ ತಿಂಗಳಲ್ಲಿ ನೇರ ನೇಮಕಾತಿ ಮೂಲಕ ಕೊಡಿಸುವುದಾಗಿ ಹೇಳಿದ್ದು, ಮಗನಿಗೆ ೧೫ ಲಕ್ಷ ಮತ್ತು ಮಗಳಿಗೆ ೨೫ ಲಕ್ಷರೂಕೊಡುಬೇಕಾಗುತ್ತದೆಂದು ಹೇಳಿರುತ್ತಾರೆ ಅವರ ಮಾತನ್ನು ನಂಬಿ ಹಣಕೊಡುಲುಒಪ್ಪಿಕೊಂಡಿರುತ್ತೇವೆ. ಮುಂಗಡವಾಗಿ ಹಣನೀಡುವಂತೆ ಹೇಳಿದ್ದರಿಂದ ಮೂರ್ನಾಲ್ಕು ದಿನಗಳ ಬಳಿ ಮತ್ತೆಅವರ ಮನೆಗೆ ನಾನು ಮತ್ತು ನನ್ನ ಮಗ ಕಾರ್ತಿಕ್ ರವರು ಹೋಗಿ ೩.೫ ಲಕ್ಷ ರೂಗಳ ನಗದು ಹಣವನ್ನು ಪ್ರಶಾಂತ್ ರವರಿಗೆ ನೀಡಿದ್ದು, ಆಗ ಅವರ ಹೆಂಡತಿಯು ಸಹ ಇರುತ್ತಾರೆ, ನಂತರ ನನ್ನ ಮೊ ನಂ: ೮೧೨೩೯೭೨೧೩೩೩ ಗೆ ಪ್ರಶಾಂತ್ ರವರು ತಮ್ಮ ಮೊ ನಂ: ೯೮೮೬೮೮೬೧೬೨೬, ೯೫೩೫೫೧೫೧೧೬೬, ೯೯೧೬೬೬೮೮೮೬೧ ಗಳಿಂದ ಪದೇ-ಪದೇ ಫೋನ್ ಮಾಡಿ ಉಳಿದ ಹಣವನ್ನು ಬೇಗ ನೀಡಬೇಕು ನಿಮ್ಮ ಕೆಲಸ ಮಾಡುತ್ತಿರುತ್ತೇನೆಂದು ಹೇಳಿರುತ್ತಾನೆ, ನಂತರ			

					ಪ್ರಶಾಂತ್ ರವರು ತನಗೆ ಪರಿಚಯದವನ್ನು ನಮ್ಮ ಮನಗೆ ಕಳುಹಿಸಿ ೨ ಲಕ್ಷರೂ ನಗದು ಹಣವನ್ನು ಪಡೆದುಕೊಂಡಿರುತ್ತಾ , ಈ ನಡುವೆ ಪ್ರಶಾಂತ್ ಕುಮಾರ್ ರವರು ಪ್ರಶಾಂತ್ ಡಿ ಮೊ ನಂ: ೯೮೪೫೭೩೦೫೬೯, ೮೬೦೮೪೪೨೦೦೬, ೯೪೪೮೦೧೯೯೧೦ ಎಂಬುವವರನ್ನು ಪರಿಚಯಿಸಿ ಇವರು ಮಂಜುನಾಥ್ ಪ್ರಸಾದ್ ರವರ ಪಿಎ ಆಗಿದ್ದು, ನಿಮ್ಮ ಮಕ್ಕಳಿಗೆ ಕೆಲಸ ಕೊಡಿಸುವ ವಿಚಾರದಲ್ಲಿ ಸಹಾಯ ಮಾಡುತ್ತಾರೆಂದು ಹೇಳಿ ಹಣ ನೀಡುವಂತೆಒತ್ತಾಯ ಮಾಡಿದ್ದು, ಆಗ ನಾನು ಮಲ್ಲೇಶ್ವರಂ ಶ್ರೀರಾಮ ಕೋ ಆಪರೆಟಿವ್ ಬ್ಯಾಕ್ ನಲ್ಲಿ ಯಜಮಾನರ ಹೆಸರಿನಲ್ಲಿ ೩೦ ಲಕ್ಷರೂ ಲೋನ್ ಮಾಡಿಸಿ ಅದರಲ್ಲಿನ ೧೦ ಲಕ್ಷ ರೂಗಳನ್ನು ನನ್ನ ಮಗಳಾದ ದಿವ್ಯ ರವರ ಬ್ಯಾಂಕ್‌ಖಾತೆಗೆ ಹಾಕಿದ್ದು, ನಂತರ ದಿವ್ಯ ರವರ ಆಕ್ಸಿಸ್ ಬ್ಯಾಂಕ್‌ಚೆಕ್ ನಂ: ೧೫೭೭೨೫ ರಲ್ಲಿ ೧೦ ಲಕ್ಷ ರೂಗಳ ಚೆಕ್ ಅನ್ನು ಪ್ರಶಾಂತ್ ಕುಮಾರ್ ಮತ್ತು ದೀಪಾ ರವರಿಗೆ ನಮ್ಮ ಮನೆಯಲ್ಲಿಯೇ ನೀಡಿದ್ದು, ಅವರುಇದಕ್ಕೆ ಸ್ಯೂರಿಟಿಯಾಗಿ ದೀಪಾ ಹೆಚ್ ಆರ್ ರವರ ಎಸ್ ಬಿ ಐ ಬ್ಯಾಂಕ್‌ಖಾತೆ ನಂ: ೬೪೦೭೭೭೬೫೭೨೬ ರ ಚೆಕ್ ನಂ: ೬೩೮೪೭೫ ರಲ್ಲಿ ೧೦,೦೦,೦೦೦/- ರೂಗಳನ್ನು ನಮೂದಿಸಿ ನಮಗೆ ನೀಡಿ, ನಮ್ಮಚೆಕ್ ಪಡೆದುಕೊಂಡು ಹೋಗಿ ದಿನಾಂಕ: ೨೬.೦೮.೨೦೨೨ ರಂದು ಮಹೇಶ್‌ಎಂಬುವವರಆಕ್ಸಿಸ್ ಬ್ಯಾಂಕ್‌ಖಾತೆ ನಂ: ೯೧೭೦೧೦೦೮೬೫೫೫೫೪೭೨ ಗೆ ಹಣವನ್ನು ವರ್ಗಾಯಿಸಿಕೊಂಡಿರುತ್ತಾರೆ, ಮತ್ತೆ ನಾವು ನಂದಿನಿಲೇಔಟ್ ಎಸ್ ಬಿ ಐ ಬ್ಯಾಂಕ್ ನಲ್ಲಿ ಅಡಮಾನಇಟ್ಟಿದ್ದ ೯೧೫ ಗ್ರಾಂಚಿನ್ನದ			

					ಒಡವೆಗಳನ್ನು ಪ್ರಶಾಂತ್ ಕುಮಾರ್, ದೀಪಾ ರವರು ತಮ್ಮ ಸ್ನೇಹಿತರಾದ ನಾರಾಯಣಸ್ವಾಮಿ ರವರ ಸಮಕ್ಷಮ ದಿನಾಂಕ ೦೫.೦೧.೨೦೨೩ ರಂದು ೨೫ ಲಕ್ಷ ರೂಗಳನ್ನು ತಾವೇ ಬ್ಯಾಂಕ್ ಗೆ ಕಟ್ಟಿ ಸದರಿ ಒಡವೆಗಳನ್ನು ಬಿಡಿಸಿಕೊಂಡು ೫೮ ಗ್ರಾಂಚಿನ್ನದಒಡವೆಯನ್ನು ನನಗೆ ವಾಪಸ್ ನೀಡಿ ೮೫೭ ಗ್ರಾಂಚಿನ್ನದಒಡವೆಯನ್ನು ತೆಗೆದುಕೊAಡು ಹೋಗಿರುತ್ತಾರೆ. ಈ ಬಗ್ಗೆ ನಾನು ಮತ್ತು ದೀಪಾ ರವರು ಒಂದು ಹಾಳೆಯಲ್ಲಿ ಸಹಿ ಮಾಡಿರುತ್ತೇವೆ. ನಂತರ ಪ್ರಶಾಂತ್ ಕುಮಾರ್ ರವರು ರಾಕೇಶ್ಎಂಬುವವರನ್ನು ನಮ್ಮ ಮನೆಗೆ ಕಳುಹಿಸಿದ್ದು ನಾವು ಅವರಿಗೆ ಬಾಡಿಗೆಗಿದ್ದಜಯಲಕ್ಷ್ಮಿಂ್ಮಎಂಬುವವರ ಸಮಕ್ಷಮ ೧೦ ಲಕ್ಷ ರೂಗಳನ್ನು ನಗದುರೂಪದಲ್ಲಿ ನೀಡಿರುತ್ತೇವೆ. ಆನಂತರ ಪ್ರಶಾಂತ್ ಡಿ ರವರು ನಿಮ್ಮ ಕೆಲಸ ನಡೆಯುತ್ತಿದೇ ನೀವು ಬೇಗನೆ ಹಣವನ್ನು ನೀಡುವಂತೆಒತ್ತಾಯ ಮಾಡಿದ್ದು, ಆಗ ನಾವು ಪಕ್ಕದ ಮನೆಯ ನಿರ್ಮಲ್ ಮೊ ನಂ ೯೯೭೨೭೫೭೫೨೦ ಎಂಬುವವರಿAದ ಫೋನ್ ಪೇ ಮೂಲಕ ದಿನಾಂಕ: ೨೭.೧೨.೨೦೨೩ ರಂದು ೧ ಲಕ್ಷ ರೂಗಳನ್ನು ಪ್ರಶಾಂತ್ ಡಿ ರವರ ಅಕ್ಕ ಸುಜಾತ ಡಿ ರವರಿಗೆ ವರ್ಗಾಯಿಸಿರುತ್ತೇವೆ ಮತ್ತು ದಿನಾಂಕ: ೧೮.೧೨.೨೦೨೩ ರಂದು ನನ್ನಖಾತೆಯಿಂದ ಸುಜಾತ ಡಿ ರವರಿಗೆ ಗೂಗಲ್ ಪೇ ಮೂಲಕ ೨೫,೦೦೦/- ಹಾಗೂ ದಿನಾಂಕ ೧೯.೧೨.೨೦೨೩ ರಂದು ೨೫,೦೦೦/- ರೂಗಳನ್ನು ವರ್ಗಾಯಿಸಿರುತ್ತೇನೆ. ಮತ್ತೆ ಹಣವನ್ನು ನೀಡುವಂತೆ ಪ್ರಶಾಂತ್ ಕುಮಾರ್ ರವರು ಒತ್ತಾಯ ಮಾಡಿದಾಗ ನಾವು ತೆಗೆದುಕೊಂಡಿದ್ದ ಬ್ಯಾಂಕ್ ಲೋನ್ ಹಣದಲ್ಲಿ ೨೦ ಲಕ್ಷ			

					ರೂಗಳನ್ನು ನಗದುರೂಪದಲ್ಲಿ ಮಂಜುನಾಥ ಮತ್ತು ಜಯಲಕ್ಷ್ಮಿÃಎಂಬುವವರ ಸಮ್ಮುಖದಲ್ಲಿ ನಾನು ಎಂ ಎಸ್ ಬಿಲ್ಡಿಂಗ್ ಬಳಿ ಪ್ರಶಾಂತ್ ಡಿ ರವರಿಗೆ ಕೊಟ್ಟಿರುತ್ತೇನೆ. ನಂತರ ಪ್ರಶಾಂತ್ ಕುಮಾರ್ ರವರು ನನ್ನ ಮಗನ ಹೆಸರುಇರುವಒಂದು ನೀರಾವರಿ ಇಲಾಖೆÉಗೆ ಸಂಬAಧಿಸಿದ ಕೆ ಪಿ ಎಸ್ ಸಿ ಸೂಚನಾ ಪತ್ರದ ಅಸಲು ಪ್ರತಿಯನ್ನು ನೀಡಿರುತ್ತಾನೆ. ದಿನಾಂಕ: ೦೬.೦೪.೨೦೨೪ ರಂದು ಪ್ರಶಾಂತ್ ಡಿ ರವರು ನನ್ನನ್ನು ವಿಧಾನಸೌಧದ ಹತ್ತಿರ ಎಂ ಎಸ್ ಬಿಲ್ಡಿಂಗ್ ಬಳಿ ಕರೆಯಿಸಿಕೊಂಡು ನಿಮ್ಮ ಇಬ್ಬರು ಮಕ್ಕಳ ಹೆಸರುಇದರಲ್ಲಿಇದೆಎಂದು ಹೇಳಿ ಎಸ್ ಡಿ ಎ ಹುದ್ದೇಗಳಿಗೆ ಟಿಪ್ಪಣಿಆಗಿದೆಎಂದು ನಮ್ಮ ಮಕ್ಕಳ ಹೆಸರುಇರುವಒಂದು ಪತ್ರವನ್ನು ನೀಡುರುತ್ತಾರೆ, ನಂತರ ಸಂಬAಧಪಟ್ಟ ದಾಖಲಾತಿಗಳನ್ನು ಮನೆ ಬಳಿ ಬಂದುತೆಗೆದುಕೊAಡು ಹೋಗಿರುತ್ತಾನೆ. ನಂತರ ದಿನಾಂಕ; ೧೨.೦೬.೨೦೨೪ ರಂದು ಪ್ರಶಾಂತ್ ಡಿ ರವರು ನಮ್ಮ ಮನೆಗೆ ಬಂದು ನನ್ನಇಬ್ಬರು ಮಕ್ಕಳ ಹೆಸರುಇರುವ ಕೆ ಪಿ ಎಸ್ ಸಿ ಯ ೨ ನೇ ಹೆಚು ವರಿಆಯ್ಕೆಪಟ್ಟಿಎಂದುಒAದು ಪ್ರತಿಯನ್ನು ನೀಡಿರುತ್ತಾನೆ. ನಂತರ ಮತ್ತೆ ೫ ಲಕ್ಷರೂ ಹಣವನ್ನು ನೀಡುವಂತೆಒತ್ತಾಯ ಮಾಡಿದಾಗ ನಾವುಗಳು ಆತ ನೀಡಿದ ದಾಖಲಾತಿಗಳನ್ನು ಪರಿಶೀಲಿಸಿದಾಗ ಯಾವುದೇ ಹುದ್ದೆಗೆ ನನ್ನ ಮಕ್ಕಳು ನೇಮಕ ಆಗದೆಇರುವ ಬಗ್ಗೆ ಕಂಡು ಬಂದಿದ್ದು, ನಂತರ ಅವುರುಗಳಿಗೆ ಈ ಬಗ್ಗೆ ವಿಚಾರ ಮಾಡಲಾಗಿ ಪ್ರಶಾಂತ್ ಕುಮಾರ್ ಹೆಚ್ ಆರ್ ಮತ್ತು ಪ್ರಶಾಂತ್ ಡಿ ಹಾಗೂ ದೀಪಾ ರವರು ೫೮ ಲಕ್ಷ ರೂಗಳಿಗೆ ಚೆಕ್			

					ಗಳನ್ನು ನನಗೆ ನೀಡಿರುತ್ತಾರೆ. ನಂತರ ನಾನು ಪ್ರಶಾಂತ್ ಕುಮಾರ್ ಹೆಚ್ ಆರ್ ರವರು ನೀಡಿದಚೆಕ್ ಅನ್ನು ಬ್ಯಾಂಕ್ ಗೆ ಹಾಕಿದಾಗಚೆಕ್ ಬೌನ್ಸ್ಆಗಿರುತ್ತದೆ. ಈ ಬಗ್ಗೆ ವಿಚಾರಮಾಡಲಾಗಿ ನಿಮಗೆ ನಾವು ಯಾವುದೇ ಹುದ್ದೇಯನ್ನುಕೊಡಿಸುವುದಿಲ್ಲ ನೀವು ನೀಡಿದ ಹಣವನ್ನು ಸಹ ಕೊಡುವುದಿಲ್ಲ ಏನೋ ಬೇಕಾದರು ಮಾಡಿಕೊಳ್ಳಿ ಎಂದು ಅವಾಚ್ಯ ಶಬ್ದಗಳಿಂದ ಬೈದುಜೀವ ಬೆದರಿಕೆ ಹಾಕಿರುತ್ತಾರೆ. ನನ್ನಿಂದ ಹಂತ-ಹAತವಾಗಿಒಟ್ಟು ೪೭,೦೦,೦೦೦/- ರೂಗಳನ್ನು ಹಾಗೂ ಲಕ್ಷ ಗ್ರಾಂಚಿನ್ನದ ಒಡವೆಗಳನ್ನು ತೆಗೆದುಕೊಂಡು ಹೋಗಿ ವಾಪಸ್ ನೀಡದೆ ಮೋಸ ಮಾಡಿ ಕೆಲವು ದಾಖಲಾತಿಗಳನ್ನು ನಮಗೆ ನೀಡಿ ಅವಾಚ್ಯ ಶಬ್ದಗಳಿಂದ ಬೈದುಜೀವ ಬೆದರಿಕೆ ಹಾಕಿರುವ ಸದರಿ ಪ್ರಶಾಂತ್ ಕುಮಾರ್ ಹೆಚ್ ಆರ್, ಪ್ರಶಾಂತ್ ಡಿ ಮತ್ತು ದೀಪಾ ಹೆಚ್ ಆರ್ ರವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದುತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.			
9.	ಸಿದ್ದರಾಜು ಎಂ ಹೆಚ್.ಸಿ – 12193	ದಕ್ಷಿಣ ಮಹಿಳಾ ಪೊಲೀಸ್ ಠಾಣೆ ಮೊ,ಸಂ 80/2024	ಕಲಂ:498(ಎ), 504, 506 ಐ.ಪಿ.ಸಿ ಮತ್ತು 4 ಡಿ.ಪಿ ಆಕ್ಟ್	31-05-2024	ಪಿರ್ಯಾದುದಾರರು ಅವರ ಗಂಡ ಹಾಗೂ ಗಂಡನ ಮನೆಯವರ ವಿರುದ್ಧ ದೈಹಿಕ ಮತ್ತು ಮಾನಸಿಕ ಹಾಗೂ ವರದಕ್ಷಿಣೆ ಕಿರುಕುಳದ ವಿರುದ್ಧ ನೀಡಿರುವ ದೂರು	ಮಾನ್ಯ ಸಿ.ಸಿ.ಹೆಚ್. 46 ನೇ ನ್ಯಾಯಲಯದಿಂದ ದಿನಾಂಕ: 20.07.2024ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದಿದ್ದು, ದಸ್ತಗಿರಿ ಕ್ರಮ ಕೈಗೊಂಡು ಬಿಡುಗಡೆ ಮಾಡಿರುತ್ತದೆ. ಸಿದ್ದರಾಜು ಎಂ ಹೆಚ್.ಸಿ - 12193	-	ಮಾನ್ಯ 37ನೇ ಎಸಿಜೆ ಎಂ ನ್ಯಾಯಾಲಯದ ಸಿ.ಸಿ ನಂ 37733/2024 ರಲ್ಲಿ ವಿಚಾರ

								ಣೆಯ ಲ್ಲಿರುತ್ತ ದೆ.
10.	ಶ್ರೀ ಬಾಬು ಪಿ ಎಂ ನಂ. 104, ಮಿಗ್, ಬಿ-4, 1ನೇ ಮಹಡಿ, ಕೆಹೆಚಬಿ ಅಪಾರ್ಟ ಮೇಂಟ್, ಸುರ್ಯನಗರ 1ನೇ ಫೇಸ್, ಅತ್ತಿಬೆಲೆ ಹೊಬಳಿ, ಆನೆಕಲ್ ತಾಲ್ಲೂಕು, ಬೆಂಗಳೂರು. ಹೆಚ್.ಸಿ ಹುದ್ದೆ	ಗಿರಿನಗರ ಪೊಲೀಸ್ ಠಾಣೆ ಮೊ.ಸಂ - 218/2024	ಕಲಂ- 354(ಡಿ), 504, 354, ಐಪಿಸಿ.	10/06/2024	ಪಿರ್ಯಾದುದಾರರಾದ ಶ್ರೀಮತಿ ಎಲ್ ಮಂಜು ರವರು, ಪಿ.ಎಂ. ಬಾಬು ಎಂಬುವವರು ನನ್ನನ್ನು ಪರಿಚಯ ಮಾಡಿಕೊಂಡು, ನನಗೆ ಏ ಸೂಳೆ ಮುಂಡೆ ಹೋರಗೆ ಬಾ ಎಂದು ಕೆಟ್ಟ ಕೆಟ್ಟ ಪದಗಳಿಂದ ಬೈಯುತ್ತಿದ್ದನು ಆಗ ನಾನು ಮನೆಯಿಂದ ಹೋರಗಡೆ ಬಂದಾಗ ಬಾಬು ನನ್ನ ಕೈಯನ್ನು ಹಿಡಿದು ಮೇಟ್ಟಿಲಿನ ಮೇಲೆ ಎಳೆದಾಡಿ ನೀನು ಸೂಳೆ ಮುಂಡೆ ನನ್ನ ಜೊತೆ ಮಲಗು ಬಾ ಎಂದು ಹೇಳಿ ನನ್ನ ಬಟ್ಟೆಯನ್ನು ಹಿಡಿದು ಏಳೆದಾಡಿ ಅಕ್ಕ ಪಕ್ಕದವರ ಮುಂದೆ ಅವಮಾನಿಸಿರುತ್ತಾನೆ	ಶ್ರೀ ಬಾಬು ಪಿ ಎಂ ನಂ. 104, ಮಿಗ್, ಬಿ-4, 1ನೇ ಮಹಡಿ, ಕೆಹೆಚಬಿ ಅಪಾರ್ಟಮೇಂಟ್, ಸುರ್ಯನಗರ 1ನೇ ಫೇಸ್, ಅತ್ತಿಬೆಲೆ ಹೊಬಳಿ, ಆನೆಕಲ್ ತಾಲ್ಲೂಕು, ಬೆಂಗಳೂರು. ಹೆಚ್.ಸಿ ಹುದ್ದೆ, ಸಿಟಿ ಎಸ್.ಬಿ (ಸಿಓಪಿ) ಕಛೇರಿ ಬೆಂಗಳೂರು ನಗರ.	ಅರೆಸ್ಟ್	ಪಿಟಿ
11.	ಎ1- ಪ್ರದೀಪ ಕುಮಾರ್ ಯಡಿಯೂರು ಪೊಲೀಸ್ ವಸತಿ ಗೃಹ ಪಿಸಿ-17334	ಜ ಜಯನಗರ ಪೊಲೀಸ್ ಠಾಣೆ 424/2024	U/s 4 D P ACT, 1961 & SC ST ACT, 1989 (U/s- 3(1)(r),3(1)(s))& 351(3)352,74,85 BNS -	29-12-2024	ಪಿರ್ಯಾದುದಾರರಾದ ಶ್ರೀಮತಿ ದಿವ್ಯ ಬಾಯಿ ಎಂ.ಕೆ ಕೋಂ ಪ್ರದೀಪ್ ಕುಮಾರ್, 27 ವರ್ಷರವರು ನೀಡಿರುವ ದೂರೇನೆಂದರೆ, ನಾನು ದಿನಾಂಕ: 03-03-2024 ರಂದು ಪ್ರದೀಪ್ ಕುಮಾರ್ ಎಂಬ ಹುಡಗನನ್ನು ಪ್ರಿತೀಸಿ ಗುರು ಹಿರಿಯರ ಸಮ್ಮುಖದಲ್ಲಿ ಮದುವೆಯಾಗಿರುತ್ತೇನೆ. ಮದುವೆಯಾದ ಒಂದು ತಿಂಗಳಿಗೆ ನನ್ನ ಗಂಡ ವರದಕ್ಷಿಣೆ ಕೇಳುವಂತೆ ದಹಿಕವಾಗಿ ಹಲ್ಲೆ ಮಾಡಿದರು. ನಂತರ ಅವರ	-	-	ಮಾನ್ಯ ಉಚ್ಚ ನ್ಯಾ ಯಾಲ ಯದ ಲ್ಲಿ ಕ್ವಾಶ್ ಆಗಿರು ತ್ತದೆ

					ಮನೆಯವರ ಮುಂದೆ ನೀನು ಕೀಳು ಜಾತಿಯವಳಾಗಿದ್ದರೂ ಸಹ ನಾನು ಮದುವೆಯಾಗಿದ್ದೆ ಎಂದು ಅಪಹಾಸ್ಯ ಮಾಡಿದ್ದನು. ಅವರ ತಾಯಿ ಪದ್ಮಾ ಹಾಗೂ ನನ್ನ ಗಂಡ ಇಬ್ಬರೂ ಸೇರಿ ದಿನ ನಿತ್ಯ ಕಿರುಕುಳ ನೀಡುತ್ತಿದ್ದರು. ಇದನ್ನು ಕೇಳಲು ಬಂದ ನಮ್ಮ ತಂದೆ ,ತಾಯಿ, ತಮ್ಮನನ್ನು ನೀವು ಕೀಳು ಜಾತಿ, ಕೆಟ್ಟ ಜಾತಿ, ಮನೆಯೊಳಗೆ ಬರಬೇಡಿ ಎಂದು ಬೈದಿರುತ್ತಾನೆ. ನಂತರ ತಮ್ಮ ಸಭಾಂಗಣದಿಂದ ಹೊರ ಹೋಗುವಂತೆ ನಮ್ಮ ಜಾತಿ ನಿಂದನೆ ಮಾಡಿರುತ್ತಾರೆ. ನಂತರ ನನ್ನ ತಂಗಿಯ ಮದುವೆಯ ದಿನದಂದು ಮದುವೆಗೆ ಹೋಗೋಣ ಎಂದು ಕರೆದಾಗಲೂ ಸಹ ನಿಮ್ಮ ಕೆಳ ಜಾತಿಯ ಮದುವೆಗೆ ಬರುವುದಿಲ್ಲ ಎಂದು ಹೇಳಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ. ಅದಲ್ಲದೇ ನನ್ನ ಬಂಗಾರದ ಸರವನ್ನು ಅಡವಿಟ್ಟಿರುತ್ತಾನೆ. ಹಾಗೂ 50000/- ರೂ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುತ್ತಾನೆ. ನಂತರ ದಿನಾಂಕ: 29-12-2024 ರಂದು ರಾತ್ರಿ ಸುಮಾರು 9-30 ರಿಂದ 10-00 ಗಂಟೆಯ ಸುಮಾರಿಗೆ ಮನೆಯಲ್ಲಿ ನನ್ನ ಗಂಡ ನನಗೆ ಹಲ್ಲೆ ಮಾಡಿ ರಸ್ತೆಯಲ್ಲಿ ತಂದು ಜುಟ್ಟು ಹಿಡಿದು ಎಳೆದಾಡಿ ನಿಮ್ಮ ಲಮಾಣಿ ಜಾತಿ ಕೀಳು ಜಾತಿ, ನೀವು ರಸ್ತೆಯಲ್ಲಿ ವಾಸಿಸುವ ಜಾತಿಯವರು ಎಂದು ಹೇಳಿ ಜಾತಿ ನಿಂದನೆ ಮಾಡಿರುತ್ತಾನೆಂದು ಸೂಕ್ತ ಕ್ರಮಕ್ಕಾಗಿ ಕೊಟ್ಟ ದೂರು ಇತ್ಯಾದಿ...			
12.	ಎ1: ಫಕೀರಪ್ಪ ಹಟ್ಟಿ, ಮಹದೇವ	ವಿಧಾನ ಸೌಧ ಮೊ.ಸಂ 36/2024	193, 200, 209 ಐಪಿಸಿ	16.04.2024	ಶಬನಾ ತಾಜ್ ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಫಿಟಿಷನ್ ನಂ. 151/2024 ರಲ್ಲಿ ಅರ್ಜಿ ಸಲ್ಲಿಸಿ ಆರೋಪಿಯು ಉಚ್ಚ ನ್ಯಾಯಾಲಯದ ಆಧೇಶವನ್ನು ಮರೆ			ವಿಚಾರಣಾ ಹಂತ C.C./27

	ಪುರ ಪಿಎಸ್	ಕಲಂ:			ಮಾಚಿ ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಮಂಜೂರು ಮಾಡಿಸಿಕೊಂಡಿರುವುದನ್ನು ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ ಆರೋಪಿಯು ಕರ್ನಾಟಕ ಉಚ್ಚ ನ್ಯಾಯಾಲಯದ ಆಧೇಶವನ್ನು ಮರೆಮಾಚಿ ವಿಚಾರಣಾ ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ನೀಡಿ ಜಾಮೀನು ಮಂಜೂರು ಮಾಡಿಸಿಕೊಂಡಿರುವುದು ದೃಡಪಟ್ಟಿದ್ದು, ಈ ಬಗ್ಗೆ ಸದರಿ ಆರೋಪಿ ಪಕೀರಪ್ಪ ಹಟ್ಟಿ ಈತನ ವಿರುದ್ದ ಕಾನೂನು ಕ್ರಮ ಜರುಗಿಸುವಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಅಧೇಶಿದ್ದು, ಅದರಂತೆ ಪಿರ್ಯಾದುದಾರರು ನೀಡಿದ ದೂರು ಇತ್ಯಾದಿ.			147/2024
13.	ಎ1: ಶ್ರೀಧರ್ ಪೂಜಾರಿ, ಡಿವೈಎಸ್‌ಪಿ	ವಿಧಾನ ಸೌಧ ಮೊ.ಸಂ 19/2024	506, 504, 307, 332, 353 ಐಪಿಸಿ	27.02.2024	ಸರ್ಕಾರಿ ಕೆಲಸವನ್ನು ನಿರ್ವಹಿಸಲು ಹೋದ ಸಮಯದಲ್ಲಿ ಶ್ರೀಧರ್ ಪೂಜಾರ್ ರವರು, ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಪ್ರಾಣ ಬೆದರಿಕೆ ಹಾಕಿ, ನನ್ನ ಸರ್ಕಾರಿ ಕರ್ತವ್ಯಗಳಿಗೆ ತಡೆ ಹೊಡ್ಡಿದ್ದರಲ್ಲದೆ ನನ್ನನ್ನು ಕೊಲ್ಲುವ ಉದ್ದೇಶದಿಂದಲೇ ತಮ್ಮ ಕಾರನ್ನು ನನ್ನ ಮೇಲೆ ಚಲಾಯಿಸಿ, ಕಾರಿನಿಂದ ಗುದ್ದಿ, ರಕ್ತಗಾಯವನ್ನುಂಟು ಮಾಡಿ ಕೊಲೆಗೆ ಪ್ರಯತ್ನಿಸಿರುತ್ತಾರೆಂದು ನೀಡಿದ ದೂರು	-	-	ವಿಚಾರಣಾ ಹಂತ C.C./43603/2024
14.	ಎ1-ಗೋಪಿ ನಾಯ್ಕ್, ಪಿಎಸ್‌ಐ ಕೆಂಗೇರಿ ಪೊಲೀಸ್ ಠಾಣೆ. ಎ2-ರಾಕೇಶ ಪಿಸಿ ಕಬ್ಬನ್	ಕಬ್ಬನ್ ಪಾರ್ಕ್ ಮೊ.ಸಂ : 53/2024	506, 34, 324, 504, 323, 342 ಐಪಿಸಿ	06.04.2024	ದಿನಾಂಕ: 25-03-2024 ರಂದು ಎಂ ಚಿನ್ನಸ್ವಾಮಿ ಸ್ಟೇಡಿಯಂ ನಲ್ಲಿ ನಡೆಯುತ್ತಿದ್ದ ಆರ್.ಸಿ.ಬಿ ಮತ್ತು ಕಿಂಗ್ಸ್-11 ಪಂಜಾಬ್ ತಂಡಗಳ ನಡುವೆ ನಡೆಯುತ್ತಿದ್ದ ಐ.ಪಿ.ಎಲ್ 20-20 ಕ್ರಿಕೆಟ್ ಪಂದ್ಯಾಟ ನೋಡಲು 5000/- ರೂ ಬೆಲೆಯ ಟಿಕೆಟ್ ಖರೀದಿ ಮಾಡಿ ಗೇಟ್ ನಂ: 6ಎ, "ಸಿ" ಸಾಲಿನ ಸೀಟ್ ನಂ: 113 ರಲ್ಲಿ ಕುಳಿತುಕೊಂಡು ಪಂದ್ಯಾಟ ನೋಡುವ ಖುಷಿಯಲ್ಲಿ ಕೆಲವು ಬಾರಿ	-	-	ತನಿಖಾ ಹಂತ

	ಪಾರ್ಕ್ ಪೊಲೀಸ್ ಠಾಣೆ				ನಿಂತುಕೊಂಡು ಕಿರುಚಾಡುತ್ತಿದ್ದಾಗ ಸಮಯ ರಾತ್ರಿ 10:00 ಗಂಟೆಗೆ ಅಲ್ಲಿಯೇ ಕರ್ತವ್ಯದಲ್ಲಿದ್ದ ಹೋಮ್ ಗಾರ್ಡ್ ಒಬ್ಬರು ಕುಳಿತುಕೊಂಡು ಮ್ಯಾಚ್ ನೋಡಿ, ಇಲ್ಲವಾದರೆ ಸ್ಟೇಡಿಯಂ ನಿಂದ ಹೊರಗೆ ಹೋಗಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದಲ್ಲದೇ ಇಬ್ಬರು ಪೊಲೀಸರನ್ನು ಕರೆದುಕೊಂಡು ಬಂದು ಆ ಇಬ್ಬರು ಪೊಲೀಸರು ನನ್ನ ಶರ್ಟಿನ ಕಾಲರ್ ಹಿಡಿದು ಎಳೆದುಕೊಂಡು ಡೈನಿಂಗ್ ಹಾಲ್ ಬಳಿ ಬಂದು ನನ್ನ ಮೇಲೆ ಕೈಯಿಂದ ಹಲ್ಲೆ ನಡೆಸಿರುವ ಬಗ್ಗೆ ನೀಡಿದ ದೂರು.			
15.	ಎ1,ಪೈಗಂಬರ್ ನದಾಫ್ ಸಿಪಿಸಿ-22793, ಭಾರತಿನಗರ ಪಿಎಸ್	ವಿಧಾನ ಸೌಧ ಮೊ.ಸಂ :113/2024 U/s	336(3), 340 BNS	10.12.2024	ಪಿಎಸ್ಐ ಹುದ್ದೆಗೆ ನಕಲಿ ಅಂಕಪಟ್ಟಿಯನ್ನು ನೀಡಿರುವ ಬಗ್ಗೆ	-	-	ತನಿಖೆಯಲ್ಲಿರುತ್ತದೆ
16.	ಎ1,ಕಾಶಿಲಿಂಗೇಗೌಡ ಪಿಎಸ್ಐ, ಬ್ಯಾಡರಹಳ್ಳಿ ಪಿಎಸ್	ವಿಧಾನ ಸೌಧ ಮೊ.ಸಂ 118/2024	198, 420, 465, 468, 471	24.12.2024	ಶ್ರೀ ಕಾಶಿಲಿಂಗೇಗೌಡ, ಪಿ.ಎಸ್.ಐ.,ಎಂಬುವವರು ಜನ್ಮ ದಿನಾಂಕವನ್ನು ತಪ್ಪಾಗಿ ನೀಡಿ ನೇಮಕ ಹೊಂದಿರುವ ಬಗ್ಗೆ	-	-	ತನಿಖೆಯಲ್ಲಿರುತ್ತದೆ
17.	ಶ್ರೀ. ದಿನೇಶ್, ಕೆ, ಹೆಚ್.ಸಿ-10257, ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆ	1) ಬಸವೇಶ್ವರನಗರ ಪೊ.ಠಾಣೆ ಮೊ.ಸಂ.	1) ಕಲಂ 406. 420 ರೆ/ವಿ 34 ಐಪಿಸಿ ರೀತ್ಯಾ 2) ಕಲಂ 406, 420 ರೆ/ವಿ 34 ಐಪಿಸಿ ರೀತ್ಯಾ	11-07-2024 11-07-2024	1) ಶ್ರೀ.ಸೆಂದಿಲ್‌ಕುಮಾರ್ ರವರು ಬಸವೇಶ್ವರನಗರ ಪೊ.ಠಾಣೆಯಲ್ಲಿ ದೂರು ನೀಡಿದ ಮೇರೆಗೆ ಠಾಣಾ ಮೊ.ಸಂ. 259/2024 ಕಲಂ 406. 420 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಸಾಲದ ಹಣದ ಬದಲಿಗೆ ನಿವೇಶನನ ನೀಡುತ್ತೇವೆ ಎಂದು ಹೇಳಿ ನಿವೇಶನವನ್ನು ನೀಡದೆ ಮೋಸ ಮಾಡಿರುವ ಸಂಬಂಧ	ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿರುತ್ತಾರೆ	-	ವಿಚಾರಣೆ

		259/2024 2) ಬಸವೇಶ್ವರನಗರ ಪೊ.ಠಾಣೆ ಮೊ.ಸಂ. 260/2024			ಶ್ರೀಮತಿ ಸುಜಾತ ರವರು ಬಸವೇಶ್ವರನಗರ ಪೊ.ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಸದರಿಯವರುಗಳ ವಿರುದ್ಧ ಮೊ.ಸಂ. 260/2024 ಕಲಂ 406, 420 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. 2) ಶ್ರೀಮತಿ ಸುಜಾತ ಎಂಬುವವರಿಂದ ಮತ್ತು ಅವರ ತಂದೆಯಿಂದ ಆ.ಪೊ.ಅ. ರವರು ತಮ್ಮ ಪತಿಯ ಮುರಿದ ಕಾಲಿನ ಚಿಕಿತ್ಸೆಗಾಗಿ ಆ.ಪೊಅ. ರವರು ಮತ್ತು ಅವರ ಪತಿ ಶ್ರೀ.ದಿನೇಶ್ ರವರುಗಳು ಒಟ್ಟು 12 ಲಕ್ಷ ರೂಗಳನ್ನು ಪಡೆದುಕೊಂಡು, ಶ್ರೀಮತಿ ಸುಜಾತ ರವರು ಹಣವನ್ನು ವಾಪಸ್ಸು ಕೇಳಿದಾಗ ರೂ. 1,50,000/-ಗಳಿಗೆ ಚೆಕ್ ನೀಡಿದ್ದು, ಸದರಿ ಚೆಕ್ ಬೌನ್ಸ್ ಆಗಿರುತ್ತದೆ. ಸಾಲದ ಹಣದ ಬದಲಿಗೆ ನಿವೇಶನನ ನೀಡುತ್ತೇವೆ ಎಂದು ಹೇಳಿ ನಿವೇಶನವನ್ನು ನೀಡದೆ ಮೋಸ ಮಾಡಿರುವ ಸಂಬಂಧ ಶ್ರೀಮತಿ ಸುಜಾತ ರವರು ಬಸವೇಶ್ವರನಗರ ಪೊ.ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಸದರಿಯವರುಗಳ ವಿರುದ್ಧ ಮೊ.ಸಂ. 260/2024 ಕಲಂ 406, 420 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.			
18.	ಶ್ರೀಮತಿ ಮಮತ ವೈ, ಮಪಿಸಿ-11799, ಎಸಿಪಿ, ವಿಜಯನಗರ ಉಪ ವಿಭಾಗ ಕಛೇರಿ	ಬಸವೇಶ್ವರನಗರ ಪೊ.ಠಾಣೆ ಮೊ.ಸಂ. 260/2024	ಕಲಂ 406, 420 ರೆ/ವಿ 34 ಐಪಿಸಿ ರೀತ್ಯಾ	11-07-2024	ಶ್ರೀಮತಿ ಸುಜಾತ ಎಂಬುವವರಿಂದ ಮತ್ತು ಅವರ ತಂದೆಯಿಂದ ಆ.ಪೊ.ಅ. ರವರು ತಮ್ಮ ಪತಿಯ ಮುರಿದ ಕಾಲಿನ ಚಿಕಿತ್ಸೆಗಾಗಿ ಆ.ಪೊಅ. ರವರು ಮತ್ತು ಅವರ ಪತಿ ಶ್ರೀ.ದಿನೇಶ್ ರವರುಗಳು ಒಟ್ಟು 12 ಲಕ್ಷ ರೂಗಳನ್ನು ಪಡೆದುಕೊಂಡು, ಶ್ರೀಮತಿ ಸುಜಾತ ರವರು ಹಣವನ್ನು ವಾಪಸ್ಸು ಕೇಳಿದಾಗ ರೂ. 1,50,000/-ಗಳಿಗೆ ಚೆಕ್ ನೀಡಿದ್ದು, ಸದರಿ ಚೆಕ್ ಬೌನ್ಸ್ ಆಗಿರುತ್ತದೆ. ಸಾಲದ ಹಣದ ಬದಲಿಗೆ ನಿವೇಶನನ ನೀಡುತ್ತೇವೆ ಎಂದು ಹೇಳಿ	ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿರುತ್ತಾರೆ	-	ಮಾನ್ಯ ನ್ಯಾಯಾಲಯದಲ್ಲಿ ತಡೆಯಾಜ್ಞೆಯಲ್ಲಿ ಇದೆ

					ನಿವೇಶನವನ್ನು ನೀಡದೆ ಮೋಸ ಮಾಡಿರುವ ಸಂಬಂಧ ಶ್ರೀಮತಿ ಸುಜಾತ ರವರು ಬಸವೇಶ್ವರನಗರ ಪೊ.ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಸದರಿಯವರುಗಳ ವಿರುದ್ದ ಮೊ.ಸಂ. 260/2024 ಕಲಂ 406, 420 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.			
19.	ಶ್ರೀ.ಶ್ರೀಕಾಂತ್ ಬನಾಕದಿನ್ನಿ, ಪಿಸಿ-18092 ಚಾಮರಾಜಪೇಟೆ ಪೊ.ಠಾಣೆ	ಗೋವಿಂದರಾಜನಗರ ಪೊಲೀಸ್ ಠಾಣಾ ಮೊ.ಸಂ. 372/2024	ಕಲಂ 85, 352, 351(2)(3), 316(5) ಬಿಎನ್ಎಸ್ ಕಾಯ್ದೆ & 4 ಡಿಪಿ ಆಕ್ಟ್, 42(2) ಟೆಲಿಕಮ್ಯೂನಿಕೇಷನ್ ಆಕ್ಟ್-2023, 72 ಐಟಿ ಆಕ್ಟ್	11-110-2024	ಆ.ಪೊ.ಅ. ರವರು ಈ ಹಿಂದೆ ಚಂದ್ರಲೇಔಟ್ ಪೊ.ಠಾಣೆಯಲ್ಲಿ ದಿನಾಂಕ:01/02/2012 ರಿಂದ 21/08/2021 ರವರೆಗೆ ಸುಮಾರು 09 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಅವಧಿಯಲ್ಲಿ ಸದರಿಯವರು ಠಾಣಾ ಅಪರಾಧ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ರೌಡಿ ಆಸಾಮಿಯಾದ ಪೂರ್ಣೇಶ್ @ ಪೂರ್ಣ ಈತನ ವಿರುದ್ದ ಚಂದ್ರಲೇಔಟ್ ಪೊಲೀಸ್ ಠಾಣೆಯಲ್ಲಿ 1) ಮೊ.ಸಂ.198/2014, 2)382/2014, 3) 58/2015, 4) 548/2015 ಪ್ರಕರಣಗಳ ಆರೋಪಿಯೆಂದು ತಿಳಿದಿದ್ದರೂ ಸಹ ಆರೋಪಿಯನ್ನು ದಸ್ತಗಿರಿ ಮಾಡಲು ಪ್ರಯತ್ನಿಸದೆ ತಲೆ ಮರೆಸಿಕೊಳ್ಳಲು ಅನುವು ಮಾಡಿಕೊಟ್ಟು, ಅಧಿಕಾರ ದುರುಪಯೋಗ	ಬಂಧಿಸಿರುವುದಿಲ್ಲ. ಜಾಮೀನು ಪಡೆದುಕೊಂಡಿರುತ್ತಾರೆ.	-	ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಸಿಸಿ ನಂಬರ್ ಬರಲು ಬಾಕಿ ಇರುತ್ತದೆ.
20.	ಶ್ರೀ ಜಯರಾಮ ಬಿ.ಕೆ, ಎ.ಎಸ್.ಐ, ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆ	ಮಾಗಡಿ ರಸ್ತೆ ಪೊ.ಠಾ ಮೊ.ಸಂ: 311/2024,	ಕಲಂ 420, 504, 506 ಐಪಿಸಿ	13-12-2024	ಶ್ರೀಮತಿ ಸುನಂದ ಬಾಯಿ ರವರ ಚೀಟಿ ಹಣವನ್ನು ವಾಪಸ್ಸು ಕೊಡದೆ ಮೋಸ ಮಾಡಿರುವ ಆರೋಪಗಳಿಗೆ ಮಾಗಡಿ ರಸ್ತೆ ಪೊ.ಠಾ ಮೊ.ಸಂ: 311/2024, ಕಲಂ 420, 504, 506 ಐಪಿಸಿ ರಲ್ಲಿ ದೋಷಾರೋಪಣೆಯನ್ನು 24ನೇ ಎಸಿಜೆಎಂ ನ್ಯಾಯಾಲಯಕ್ಕೆ 27.01.2026 ರಂದು ಸಲ್ಲಿಸಿರುವ ಬಗ್ಗೆ	ನೋಟೀಸ್ ನೀಡಿರುತ್ತದೆ	-	ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತೆ.
21.	ಶ್ರೀ.ಶಿವರಾಜ್, ಎಂ.ಜೆ.	ಕರ್ನಾಟಕ	ಕಲಂ 7(ಎ), 12		ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಠಾಣೆ ಮೊ.ಸಂ.22/2024 ಕಲಂ 7(ಎ), 12	ಶ್ರೀ.ಶಿವರಾಜ್, ಎಂ.ಜೆ. ಪಿ.ಎಸ್.ಐ.	17-05-2024	ಎಫ್.ಐ.ಆರ್

	ಪಿ.ಎಸ್.ಐ. ಬ್ಯಾಡರಹಳ್ಳಿ ಪೊಲೀಸ್ ಠಾಣೆ	ಲೋಕಾಯುಕ್ತ, ಬೆಂಗಳೂರು ನಗರ ಠಾಣೆ ಮೊ.ಸಂ.22/2024	ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988		ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988 ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ:18/05/2024ರಂದು ಸುಮಾರು 08-00 ಗಂಟೆಯ ಸಮಯದಲ್ಲಿ ತನಿಖಾ ಸಹಾಯಕರಾದ ಹೆಚ್.ಸಿ-8113 ರವರು ತನಿಖಾಧಿಕಾರಿಗಳ ಸೂಚನೆ ಮೇರೆಗೆ ಆರೋಪಿತರಿಗೆ ಠಾಣಾ ಜಾಮೀನು ನೀಡುವ ವೇಳೆಯಲ್ಲಿ ರೂ.5000/- ಲಂಚದ ಹಣವನ್ನು ಪಡೆದುಕೊಳ್ಳುವ ಸಮಯದಲ್ಲಿ ಲೋಕಾಯುಕ್ತ ದಾಳಿಗೆ ಒಳಗಾಗಿ ಬಂಧನಕ್ಕೆ ಒಳಪಟ್ಟಿರುತ್ತಾರೆ.	ಬ್ಯಾಡರಹಳ್ಳಿ ಪೊಲೀಸ್ ಠಾಣೆ, ನಿರೀಕ್ಷಣಾ ಜಾಮೀನು ಬಂಧಿತರಾಗಿರುತ್ತಾರೆ. ಶ್ರೀ.ನಿಂಗರಾಜೇಗೌಡ, ಹೆಚ್.ಡಿ, ಹೆಚ್.ಸಿ-8113, ಬ್ಯಾಡರಹಳ್ಳಿ ಪೊಲೀಸ್ ಠಾಣೆ	ರಿಂದ 19-07-2024 64 ದಿನಗಳು	. ಕ್ವಾಷ್ ಆಗಿದೆ
22.	ಶ್ರೀ. ನಿಂಗರಾಜೇಗೌಡ, ಹೆಚ್.ಡಿ, ಹೆಚ್.ಸಿ-8113, ಬ್ಯಾಡರಹಳ್ಳಿ ಪೊಲೀಸ್ ಠಾಣೆ	ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಠಾಣೆ ಮೊ.ಸಂ. 22/2024	ಕಲಂ 7(ಎ), 12 ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988		ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಠಾಣೆ ಮೊ.ಸಂ.22/2024 ಕಲಂ 7(ಎ), 12 ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988 ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ:18/05/2024ರಂದು ಸುಮಾರು 08-00 ಗಂಟೆಯ ಸಮಯದಲ್ಲಿ ತನಿಖಾ ಸಹಾಯಕರಾದ ಹೆಚ್.ಸಿ-8113 ರವರು ತನಿಖಾಧಿಕಾರಿಗಳ ಸೂಚನೆ ಮೇರೆಗೆ ಆರೋಪಿತರಿಗೆ ಠಾಣಾ ಜಾಮೀನು ನೀಡುವ ವೇಳೆಯಲ್ಲಿ ರೂ.5000/- ಲಂಚದ ಹಣವನ್ನು ಪಡೆದುಕೊಳ್ಳುವ ಸಮಯದಲ್ಲಿ ಲೋಕಾಯುಕ್ತ ದಾಳಿಗೆ ಒಳಗಾಗಿ ಬಂಧನಕ್ಕೆ ಒಳಪಟ್ಟಿರುತ್ತಾರೆ.	ಶ್ರೀ.ಶಿವರಾಜ್, ಎಂ.ಜೆ. ಪಿ.ಎಸ್.ಐ. ಬ್ಯಾಡರಹಳ್ಳಿ ಪೊಲೀಸ್ ಠಾಣೆ, ನಿರೀಕ್ಷಣಾ ಜಾಮೀನು ಬಂಧಿತರಾಗಿರುತ್ತಾರೆ. ಶ್ರೀ.ನಿಂಗರಾಜೇಗೌಡ, ಹೆಚ್.ಡಿ, ಹೆಚ್.ಸಿ-8113, ಬ್ಯಾಡರಹಳ್ಳಿ ಪೊಲೀಸ್ ಠಾಣೆ	17-05-2024 ರಿಂದ 19-07-2024 64 ದಿನಗಳು	ಎಫ್.ಐ.ಆರ್. ಕ್ವಾಷ್ ಆಗಿದೆ
23.	ಶ್ರೀ.ಕಾಶಿಲಿಂಗೇಗೌಡ, ಎಸ್.ಬಿ. ಪಿಎಸ್ಐ, ಬ್ಯಾಡರಹಳ್ಳಿ ಪೊಲೀಸ್ ಠಾಣೆ	ವಿಧಾನ ಸೌಧ ಪೊಲೀಸ್ ಠಾಣೆ ಮೊ.ಸಂ :118/2024	ಕಲಂ 198,420,465, 468,471 ಐಪಿಸಿ ರೀತ್ಯಾ		ದಿನಾಂಕ: 24/12/2024 ರಂದು ಶ್ರೀ. ರಾಘವೇಂದ್ರ ಹೆಚ್ ಇಟಗಿ, ವಕೀಲರು ಮತ್ತು ಶ್ರೀ ನಿಂಗರಾಜು ರವರು ನೀಡಿದ ದೂರಿನ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಮೊ.ಸಂ:118/2024 ಕಲಂ 198,420,465,468,471 ಐಪಿಸಿ ರೀತ್ಯಾ ಪ್ರಕರಣವನ್ನು ಸದರಿಯವರ ವಿರುದ್ದ ದಾಖಲಾಗಿದ್ದು, ಸುಳ್ಳು ಜನ್ಮ ದಿನಾಂಕದ ನಕಲಿ ದಾಖಲೆಗಳ ಮೂಲಕ ಪಿ.ಎಸ್.ಐ ಹುದ್ದೆಗೆ ನೇಮಕಾತಿ ಹೊಂದಿರುತ್ತಾರೆ.	ನಿರೀಕ್ಷಣಾ ಜಾಮೀನು Cases repeated	--	ಎಫ್.ಐ.ಆರ್. ಕ್ವಾಷ್ ಆಗಿದೆ
24.	ಕೃಷ್ಣಯ್ಯ ಹೆಚ್ ಬಿನ್	ಕಾಮಾಕ್ಷಿಪಾಳ್ಯ	ಕಲಂ 115(2),118(1	26.08.2024	ದಿನಾಂಕ: 26/08/2024 ರಂದು ಪರ್ಯಾದುದಾರರಾದ ಶ್ರೀಮತಿ ಗಂಗಾಂಬಿಕೆ	**ಮಾನ್ಯ ನ್ಯಾಯಾಲಯದ**	-	ಖುಲಾಸೆ ಸಿಸಿ

63.	ಮಂಡ್ಯ ಜಿಲ್ಲೆ, ಬೆಸಗರಹಳ್ಳಿ ಪೊಲೀಸ್ ಠಾಣೆ ಎ1-ದಿನೇಶ್	ಪಶ್ಚಿಮ ಮಹಿಳಾ ಪೊಲೀಸ್ ಠಾಣೆ 123/2025	123/2025 ಕಲಂ-85, 115(2), 351(2), 3(5), 352 ಬಿಎನ್‌ಎಸ್ 3 &	11/05/2025	ದಿನಾಂಕ:03/07/2025 ರಂದು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ, ತಾನು ದಿನಾಂಕ 04/07/2020 ರಂದು ಗುರುಹಿರಿಯರು ನಿಶ್ಚಯಿಸಿದಂತೆ ತನ್ನ ಅತ್ತೆ ನಾದಿನಿ ರವರ ಅಪೇಕ್ಷೆಯಂತೆ ಚಿನ್ನವನ್ನು ನೀಡಿ ಸುಮಾರು 20 ಲಕ್ಷ ಹಣ ರ್ಚು ಮಾಡಿ ಅದ್ಧೂರಿಯಾಗಿ ಮದುವೆಯಾಗಿರುತ್ತೇನೆ. ನಂತರದ	-	-	24ನೇ ಎಸಿಜೆಎಂ ನ್ಯಾಯಾಲಯದ ಸಿಸಿ ನಂ.35963/25 ರಲ್ಲಿ

	ಹೆಚ್. ಸಿಪಿಸಿ-5282		4 ಡಿಪಿ ಆಕ್ಟ್		ದಿನಗಳಲ್ಲಿ ಹೆಚ್ಚಿನ ವರದಕ್ಷಿಣೆಗೆ ಒತ್ತಾಯ ಮಾಡಿರುತ್ತಾರೆ ಎಂದು ಆರೋಪ			ವಿಚಾರಣಾ ಹಂತದಲ್ಲಿರುತ್ತದೆ.
64.	ಎ1-ಅಭಿನಂದನ್, ಎಹೆಚ್ ಸಿ-18756 ಸಿ.ಎ.ಆರ್. ಪಶ್ಚಿಮ	ಪಶ್ಚಿಮ ಮಹಿಳಾ ಪೊಲೀಸ್ ಠಾಣೆ 116/2025	ಕಲಂ–85, 115(2), 3(5), 352 ಬಿಎನ್ಎಸ್ 3 & 4 ಡಿಪಿ ಆಕ್ಟ್	12/06/2025	ದಿನಾಂಕ:25/06/2025 ರಂದು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ, ತಾನು ದಿನಾಂಕ 18/06/2018 ರಂದು ಗುರುಹಿರಿಯರು ನಿಶ್ಚಯಿಸಿದಂತೆ ತನ್ನ ಗಂಡ ಅತ್ತೆ ನಾದಿನಿ ರವರ ಅಪೇಕ್ಷೆಯಂತೆ 100 ಗ್ರಾಂ ಚಿನ್ನವನ್ನು ನೀಡಿ ಸುಮಾರು 04 ಲಕ್ಷ ಹಣ ಖರ್ಚು ಮಾಡಿ ಅದ್ದೂರಿಯಾಗಿ ಮದುವೆಯಾಗಿರುತ್ತೇನೆ. ನಂತರದ ದಿನಗಳಲ್ಲಿ ಹೆಚ್ಚಿನ ವರದಕ್ಷಿಣೆಗೆ ಒತ್ತಾಯ ಮಾಡಿರುತ್ತಾರೆ ಎಂದು ಆರೋಪ	-	-	24ನೇ ಎಸಿಜೆಎಂ ನ್ಯಾಯಾಲಯದ ಸಿಸಿ ನಂ.3888 29/25 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.
65.	ಎ1-ಸತೀಶ್ ಕೆಟಿ ಪೊಲೀಸ್ ಸಬ್ಇನ್ಸ್ಪೆಕ್ಟರ್, ಬಸವೇಶ್ವರ ನಗರ ಪೊಲೀಸ್ ಠಾಣೆ ಬೆಂಗಳೂರು ನಗರ	ಕಾಟನ್ ಪೇಟೆ Cr No 206/2025	ಕಲಂ,500, 506, 324, 499, 325, 34	13.10.2025	ಈ ದಿನ ದಿನಾಂಕ:-13-10-2025 ರಂದು ನ್ಯಾಯಾಲಯದ ಕರ್ತವ್ಯ ನಿರ್ವಹಿಸುತ್ತಿರುವ ಪಿ.ಸಿ-20517 ಸಂತೋಷ್ ಹುಣಸೀಕಟ್ಟಿ ರವರು ಮಾನ್ಯ 5ನೇ ಎ.ಸಿ.ಜೆ.ಎಂ ನ್ಯಾಯಾಲಯದಿಂದ ತಂದು ಠಾಣೆಗೆ ಹಾಜರುಪಡಿಸಿದ ಪಿ.ಸಿ.ಆರ್ 9114/2022 ರಲ್ಲಿನ ದೂರಿನ ಸಾರಾಂಶವೇನೆAದರೆ, ದೂರುದಾರರಾದ ಶ್ರೀ ಸುನೀಲ್ ಕುಮಾರ್ ರವರು ದಿನಾಂಕ:-16-11-2021 ರಂದು ತಮ್ಮ ಕಛೇರಿಯಲ್ಲಿ ವ್ಯವಹಾರದಲ್ಲಿ ತೊಡಗಿರುವಾಗ್ಗೆ ಬಸವೇಶ್ವರ ನಗರದ ಪೊಲೀಸ್ ಠಾಣೆಯ ಪಿ.ಎಸ್.ಐ ಸತೀಶ್ ಕೆ.ಟಿ ರವರು ಇಬ್ಬರು ಪೊಲೀಸ್ ಪೇದೆಯೊಂದಿಗೆ ತಮ್ಮ ಕಛೇರಿಗೆ ಬಂದಿರುತ್ತಾರೆ. ಎ1 ಆರೋಪಿ ಸತೀಶ್ ಪಿ.ಎಸ್.ಐ ರವರು ಹಾಗೂ ಜೊತೆಗಿದ್ದ ಇತರೆ ಇಬ್ಬರು ಕಾನ್ಸ್ ಟೇಬಲ್ಗಳು ಸಹ ಸರಿಯಾದ ಸಮವಸ್ತ್ರದಲ್ಲಿ ಇರುವುದಿಲ್ಲ. ನಂತರ ಕಛೇರಿಯಲ್ಲಿ ಪಾರ್ಸಲ್ ಸರ್ವೀಸ್ ಬಗ್ಗೆ ವಿಚಾರಿಸಿ ಇದ್ದಕ್ಕಿದ್ದಂತೆ ಯಾವುದೇ ಕಾರಣವಿಲ್ಲದೆ ದೂರುದಾರರ ಮುಖ ಮತ್ತು ದೇಹದ ಇತರ ಭಾಗಗಳ ಮೇಲೆ ಹಲ್ಲೆ ಮಾಡಲು ಪ್ರಾರಂಭಿಸಿದ್ದು, ದೂರುದಾರರನ್ನು ಎ1 ಆರೋಪಿಯು ಆಟೋದಲ್ಲಿ ಕರೆದುಕೊಂಡು	-	-	ತನಿಖಾ ಹಂತ

					ಬಸವೇಶ್ವರ ನಗರ ಪೊಲೀಸ್ ಠಾಣೆಗೆ ಹೋಗುತ್ತಿದ್ದ ಮಾರ್ಗ ಮಧ್ಯದಲ್ಲಿ ಠಾಣೆಗೆ ಕರೆದುಕೊಂಡು ಹೋಗುತ್ತಿರುವ ವಿಚಾರವನ್ನು ತಿಳಿಸಿರುತ್ತಾರೆ. ಈ ಹಿಂದೆ ದೂರುದಾರರು ಬಸವೇಶ್ವರ ನಗರ ಪೊಲೀಸ್ ಠಾಣೆಗೆ ಹೋಗಿದ್ದು, ಎ2-ಆರೋಪಿತೆ ಶೋಭಾ ಎನ್.ಎ ರವರು ದೂರುದಾರರ ವಿರುದ್ದ ಎನ್.ಸಿ.ಆರ್ ಸಂಖ್ಯೆ-182/2021 ದಿನಾಂಕ:-09-09-2021 ರಂದು ಸುಳ್ಳು ದೂರು ದಾಖಲಿಸಿದ್ದಾರೆ ಎಂದು ದೂರುದಾರರು ತಿಳಿದುಕೊಂಡಿದ್ದು, ಚೆಕ್ ಬೌನ್ಸ್ ಮತ್ತು ವಂಚನೆ ಪ್ರಕರಣಕ್ಕಾಗಿ ಶ್ರೀ ಸುನೀಲ್ ತಂದೆ ಶಿವಲಿಂಗೇಗೌಡ ಮತ್ತು ಆತನ ಸಹೋದರಿ ಶ್ರೀಮತಿ ದೀಪಾ @ ಸುಹಾಸಿನಿ ವಿರುದ್ದ ಪ್ರಕರಣ ದಾಖಲಿಸುವಾಗ ಎ2 ಆರೋಪಿಯು ದೂರುದಾರರ ಮೊಬೈಲ್ ಸಂಖ್ಯೆಯನ್ನು ತಪ್ಪಾಗಿ ನೀಡಿದ್ದು, ಎ2 ಆರೋಪಿಯನ್ನು ಸವೇಶ್ವರ ನಗರ ಠಾಣೆಗೆ ಕರೆಸಿ ಎ.ಎಸ್.ಐ ಶ್ರೀ ರುದ್ರಪ್ಪ ರವರು ವಿಚಾರಣೆ ಮಾಡಿದಾಗ ಎ2 ಆರೋಪಿಯು ದೂರುದಾರರೊಂದಿಗೆ ಯಾವುದೇ ಸಂಬAಧ ಹೊಂದಿರುವುದಿಲ್ಲ ಹಾಗೂ ಯಾವುದೇ ಹಣಕಾಸಿನ ವ್ಯವಹಾರದಲ್ಲಿ ಭಾಗಿಯಾಗಿಲ್ಲ ಎಂದು ತಿಳಿಸಿದ ನಂತರ ಫೈಲ್ ಅನ್ನು ಮುಕ್ತಾಯಗೊಳಿಸಿರುತ್ತಾರೆ. ಘಟನೆ ನಡೆದ ದಿನ ದೂರುದಾರರ ಕಣ್ಣುಗಳು ಸೇರಿದಂತೆ ಅವರ ದೇಹದ ಮೇಲೆ ಗಾಯಗಳಾಗಿದ್ದು, ಮಿಂಟೋ ಆಸ್ಪತ್ರೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಎ1 ಆರೋಪಿಯು ಮಾಡಿದ ಹಲ್ಲೆಯಿಂದಾಗಿ ದೂರುದಾರರು ತೀವ್ರ ಮಾನಸಿಕ ಆಘಾತ, ನೋವು, ಸಂಕಟ, ಆದಾಯ ನಷ್ಟ, ಸಮಾಜದಲ್ಲಿ ಹಾಗೂ ತಮ್ಮ ಕಛೇರಿಯಲ್ಲಿದ್ದ ಸಿಬ್ಬಂದಿ ಮುಂದೆ ಅವಮಾನ ಆಗಿರುತ್ತದೆ. & ದೂರುದಾರರಿಗೆ ಯಾವುದೇ ರೀತಿಯಲ್ಲಿ ಸರಿದೂಗಿಸಲಾಗದ ನಷ್ಟವನ್ನು ಅನುಭವಿಸಿರುತ್ತಾರೆ. ಎ2 ಆರೋಪಿಯು ನೀಡಿದ ಶಿಂವಲಿAಗೇಗೌಡರ ಪುತ್ರ ಸುನೀಲ್ ಎಂಬ ಹೆಸರಿನಿಂದ ಕಂಪ್ಲೀಟ್ ಮಾಡುವಾಗ ಮೊಬೈಲ್			

					ಸಂಖ್ಯೆಯನ್ನು ನೀಡುವಾಗ ಉದ್ದೇಶ ಪೂರ್ವಕವಾಗಿ ನೀಡಿರುತ್ತಾರೆ. ಆದ್ದರಿಂದ ದೂರುದಾರರು ಮೇಲ್ಕಂಡ ಆರೋಪಿತರ ವಿರುದ್ಧಸೂಕ್ತ ಕಾನೂನು ಕ್ರಮಕ್ಕಾಗಿ ನ್ಯಾಯಲಯದಲ್ಲಿ ಖಾಸಗಿ ದೂರನ್ನು ನೀಡಿದ್ದು, ಮಾನ್ಯ 5ನೇ ಎ.ಸಿ.ಜೆ.ಎಂ ನ್ಯಾಯಾಲಯದ ನಿರ್ದೇಶನದಂತೆ ಕಲಂ 499, 500, 506, 324, 325 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತದೆ.			
66.	ಅನಂತ್‌ಕುಮಾರ್, ಪೊಲೀಸ್ ಹೆಡ್‌ಕಾನ್ಸ್ಟೇಬಲ್, ಯಶವಂತಪುರ ಟ್ರಾಫಿಕ್ ಪೊಲೀಸ್ ಠಾಣೆ, ಬೆಂಗಳೂರು ನಗರ.	ಬ್ಯಾಟರಾಯನಪುರ ಪೊಲೀಸ್ ಠಾಣೆ ಮೊ.ಸಂ. 391/2025	ಕಲಂ: 506, 504, 376, 420 ಐಪಿಸಿ	18-11-2025	ಪಿರ್ಯಾದುದಾರರು ಮೈಸೂರು ವೃತ್ತದಲ್ಲಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಿಕೊಂಡಿದ್ದು, 2021ನೇ ಸಾಲಿನಲ್ಲಿ ಚಿಕ್ಕಪೇಟೆ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿತ್ತಿದ್ದ ಆನಂತ್ ಕುಮಾರ್ ಹೆಡ್‌ಕಾನ್ಸ್ಟೇಬಲ್ ರವರು ಪೆಟ್ರೋಲ್ ಬಂಕ್‌ಗೆ ಶೌಚಾಲಯಕ್ಕೆ ಹಾಗೂ ಊಟ ಮಾಡುವುದಕ್ಕೆ ಬರುತ್ತಿದ್ದರು. ಆ ಸಮಯದಲ್ಲಿ ಮಾತನಾಡಿ ಸಲುಗೆಯಿಂದ ಇರುತ್ತಿದ್ದರು. ಅನಂತ್‌ಕುಮಾರ್ ಮೊಬೈಲ್ ನಂಬರ್ ಪಡೆದುಕೊಂಡು ಪದೇ ಪದೇ ಫೋನ್ ಮಾಡಿ ಮಾತನಾಡಲು ಶುರು ಮಾಡಿದರು. 6 ತಿಂಗಳ ನಂತರ ನಿನ್ನನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿ ಮದುವೆಯಾಗುತ್ತೇನೆ ಎಂದು ಭರವಸೆಯನ್ನು ನೀಡಿ ನಿಮ್ಮ ಅಪ್ಪ ಅಮ್ಮನ ಹತ್ತಿರ ಮಾತಾಡು ಎಂದು ಹೇಳಿ ನಾನು ಕೆಲಸ ಮಾಡುವ ಸ್ಥಳಕ್ಕೆ ಬಂದು ಪ್ರೀತಿ ವಿಚಾರದ ಬಗ್ಗೆ ಮಾತನಾಡುತ್ತಿದ್ದರು. ನಂತರ ನಂತರ ಪ್ರೀತಿ ಹೆಸರಿನಲ್ಲಿ ಮೈ ಕೈ ಮುಟ್ಟುವುದು ಮುತ್ತು ಕೊಡುವುದು ಮಾಡುತ್ತಿದ್ದರು. ಸೆಪ್ಟಂಬರ್-2022 ರಲ್ಲಿ ಪಿರ್ಯಾದಿ ಅಪ್ಪನ ಬಳಿ ಮಾತನಾಡುತ್ತೇನೆ ಎಂದು ಹೇಳಿ ಕಾಳಿದಾಸ ಲೇಔಟ್‌ನಲ್ಲಿರುವ ತನ್ನ ಅಕ್ಕನ ಮನೆಗೆ ಕರೆದುಕೊಂಡು ಹೋಗಿ ಬಲವಂತವಾಗಿ ಆತ್ಯಚಾರ ಮಾಡಿರುತ್ತಾನೆ. ಆಳುತ್ತಿದ್ದಾಗ ಆರೋಪಿ ಪಿರ್ಯಾದಿಗೆ ನಾನು ಪೊಲೀಸ್ ಅಧಿಕಾರಿಯಾಗಿದ್ದೇನೆ, ನಿನಗೆ ಮೋಸ ಮಾಡುವುದಿಲ್ಲ ಎಂದು ಹೇಳಿದ್ದು, ವಿಷಯವನ್ನು ನಮ್ಮ ತಂದೆ ತಾಯಿಗೆ ಹೇಳುತ್ತೇನೆ	ಬಂಧಿಸಿರುವುದಿಲ್ಲ.	ನಿರೀಕ್ಷಣಾ ಜಾಮೀನು	ತನಿಖೆ

					ಎಂದು ಆರೋಪಿ ಬಳಿ ಹೇಳಿದಾಗ ನೀನು ಈಗಾಲೇ ಏನು ಹೇಳಬೇಡ ನಾನೇ ನಿಮ್ಮ ತಂದೆ ತಾಯಿ ಬಳಿ ಮಾತನಾಡುತ್ತೇನೆ ಎಂದು ಹೇಳಿ ಹೋಗಿರುತ್ತಾನೆ. ಅನಂತ್‌ಕುಮಾರ್‌ಗೆ 2023ರಲ್ಲಿ ಜೂನ್ ಮಾಹೆಯಲ್ಲಿ ಯಶವಂತಪುರ ಟ್ರಾಫಿಕ್ ಠಾಣೆಗೆ ವರ್ಗಾವಣೆಯಾದ ನಂತರ 9449299515 ನಂಬರ್ ನ್ನು ಕೊಟ್ಟಿದ್ದು, ಮಾತನಾಡುವುದನ್ನು ಕಡಿಮೆ ಮಾಡಿರುತ್ತಾನೆ. ಯಶವಂತಪುರ ಟ್ರಾಫಿಕ್ ಠಾಣೆ ಬಳಿ ಕೇಳಲು ಹೋದಾಗ ಅನಂತ್ ರವರು ನನಗೆ ಮದುವೆಯಾಗಿದೆ ನನಗೆ ಹೆಂಡತಿ ಮಕ್ಕಳಿದ್ದಾರೆ, ನನ್ನ ಹೆಂಡತಿಗೆ ಅಸ್ತಾಮಾ ಖಾಯಿಲೆಯಿದೆ ಸರಿಯಾಗಿ ಸಹಕರಿಸುತ್ತಿಲ್ಲಾ ಹಾಗಾಗಿ ನಿನ್ನನ್ನು ಮದುವೆಯಾಗುವುದಾಗಿ ನಂಬಿಸಿ ನಿನ್ನನ್ನು ಕಸ್ತೂರಿ ಬಾ ನಗರದಲ್ಲಿರುವ ಮನೆಯಲ್ಲಿ ಅನುಭವಿಸಿದೆ ಎಂದು ಹೇಳಿ ನೀನು ಏನು ಮಾಡಿಕೊಳ್ಳುತ್ತೀಯಾ ಮಾಡಿಕೊ ನನಗೆ ಪೊಲೀಸ್ ಠಾಣೆಯ ಎಲ್ಲಾ ಅಧಿಕಾರಿಗಳು ಸಹಾಯ ಮಾಡುತ್ತಾರೆ, ನೀನು ಸೂಳೆ ಅವರ ಜೊತೆ ಮಲಗಿದ್ದೀಯಾ ಎಲ್ಲಾವು ನನಗೆ ಗೊತ್ತು ಎಂದು ನಿಂದಿಸುತ್ತ ಈ ವಿಚಾರವನ್ನು ಎಲ್ಲಿಯಾದರೂ ಬಾಯಿ ಬಿಟ್ಟರೇ ನಿನ್ನನ್ನು ನಿನ್ನ ತಂದೆ ತಾಯಿಯನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾನೆ. ಅದ್ದರಿಂದ ಪಿರ್ಯಾದಿಯನ್ನು ಮದುವೆಯಾಗುತ್ತೇನೆ ಎಂದು ನಂಬಿಸಿ ಆತ್ಯಾಚಾರ ಮಾಡಿ ಮೋಸ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿರುವ ಆನಂತ್ ಕುಮಾರ್ ಈತನ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೊಟ್ಟ ದೂರನ್ನು ಪಡೆದುಕೊಂಡು ತನಿಖೆ ಕೈಗೊಂಡಿರುತ್ತಾರೆ.			
67.	ಅರುಣ್ ಪಿಸಿ 16071	ಬೊಮ್ಮನಹಳ್ಳಿ ಪೊಲೀಸ್ ಠಾಣೆ, ಬೆಂಗ	ಕಲಂ.4, 6, 10, 12, 15 ಪೊಕ್ಸೊ ಆಕ್ಟ್ ಮತ್ತು ಕಲಂ 64(1), 64(2)(ಎ(,	14-02-2025	ಅನಿತ ರವರ ಮಗಳಾದ ಪ್ರಾರ್ಥನ, 17 ವರ್ಷದ ರವರೊಂದಿಗೆ ಬಲವಂತವಾಗಿ ಲೈಂಗಿಕ ಸಂಪರ್ಕ ಹೊಂದಿ ಹಾಗೂ ವಿಡಿಯೋ ವನ್ನು ಸೋಷಿಯಲ್ ಮೀಡಿಯಾದಲ್ಲಿ ಹಾಕುವುದಾಗಿ ಹೆದರಿಸಿ ಯಾರಿಗೂ ಹೇಳದಂತೆ ಜೀವ ಬೆದರಿಕೆ ಹಾಕಿರುತ್ತಾನೆ. ಆದುದರಿಂದ ಪಿರ್ಯಾದುದಾರರ	ಅರುಣ್ ಪಿಸಿ 16071, ಬೊಮ್ಮನಹಳ್ಳಿ ಪೊಲೀಸ್ ಠಾಣೆ	20-02-2025 (4 ತಿಂಗಳು)	ಪಿ.ಟಿ

		ಳೂರು ನಗರ ಮೊ.ಸಂ : 50/2025	351(3) ಬಿ -ಎಸ್.ಎನ್. 2023		ಮಗಳು ಅಪ್ರಾಪ್ತಳೆಂದು ಗೊತ್ತಿದ್ದರೂ ಸಹ ಪಿರ್ಯಾದುದಾರರ ಮಗಳ ಜೊತೆ ಲೈಂಗಿಕ ಸಂಪರ್ಕ ಹೊಂದಿರುವ ಆರೋಪಿಗಳಾದ ವಿಕ್ಕಿ ಮತ್ತು ಅರುಣ್ ರವರ ವಿರುದ್ದ ಪ್ರಕರಣ ದಾಖಲು ಮಾಡಿರುತ್ತದೆ.			
68.	ಬಿ.ಎಸ್.ಛೇಲಪತಿ ಲೇಟ್ ಜಿ ಶ್ರೀನಿವಾಸಪ್ಪ 46 ವರ್ಷ ಸಿಹೆಚ್ ಸಿ-110 ಮಾಲೂರು ಠಾಣೆ ಕೋಲಾರ ನಂ-06,ಸಿ ಬ್ಲಾಕ್ ಗಲಿಪೇಟೆ ಪೊಲೀಸ್ ವಸತಿ ಗೃಹ ಕೋಲಾರ್	ಕೋರಮಂಗಲ ಮೊ.ಸಂ - 295/2025	ಕಲಂ- 140(2),ರೆ/ವಿ 3(5)) ಬಿಎನ್ ಎಸ್	22-11-2025	ಫಿರ್ಯಾದಿಯು ಗ್ಲೋಬಲ್ ಕನೆಕ್ಟ್ ಟೆಲಿಕಾಂ ಪ್ರೈ ಲಿಮಿಟೆಡ್, ನಂ:48, 2ನೇ ಮಹಡಿ, 4ನೇ ಬ್ಲಾಕ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು ನಗರ ಎಂಬ ಅಮೇರಿಕನ್ ಬೇಸ್ ಕಂಪನಿಯಲ್ಲಿ ಟೆಲಿಕಾಲರ್ ಅಗಿ ಕೆಲಸ ಅವರ ಸಹದ್ಯೋಗಿಗಳಾದ ಪವನ್, ಅಕಾಶ್, ಪಿಂಕು ಮತ್ತು ಅನಾಜ್ ರವರು ಕೆಲಸ ನಿರ್ವಹಿಸುವಾಗ ಮಧ್ಯರಾತ್ರಿ ಸುಮಾರು 12.30 ಗಂಟೆ (22.11.2025) ಸಮಯದಲ್ಲಿ ಇದ್ದಕ್ಕಿದ್ದ ಹಾಗೆ ಅಪರಿಚಿತ 6 ಜನ ಅಸಾಮಿಗಳು ಪೊಲೀಸರೆಂದು ಬಿಂಬಿಸಿಕೊಂಡು ವಿಚಾರಣೆ ಮಾಡಬೇಕಾಗಿದೆ ಬನ್ನಿ ಎಂದು ತಿಳಿಸಿ ಫಿರ್ಯಾದಿ ಜೊತೆ ಕೆಲಸ ಮಾಡುತ್ತಿದ್ದ ಪವನ್, ಅಕಾಶ್, ಪಿಂಕೂ ಮತ್ತು ಅನಾಜ್ ಎಂಬುವರನ್ನು ಕರೆದುಕೊಂಡು ಹೋಗಿ ಮತ್ತೆ ವಾಪಸ್ಸು ಬಂದಿರುವುದಿಲ್ಲ, ತದನಂತರದಲ್ಲಿ ಪವನ್ ಫಿರ್ಯಾದಿ ಮೊಬೈಲ್ ನಂಬರ್ ಗೆ ಕರೆ ಮಾಡಿ 20 ಲಕ್ಷ ರೂ ನೀಡಿದ್ದಲ್ಲಿ ಅಪರಿಚಿತರು ಬಿಡುಗಡೆ ಮಾಡುವುದಾಗಿ ತಿಳಿಸಿ, ಬ್ಯಾಂಕ್ ನಲ್ಲಿ ಇರುವ ಹಣವನ್ನು ಡ್ರಾ ಮಾಡಿಕೊಂಡು ಅವರು ಹೇಳುವ ಸ್ಥಳಕ್ಕೆ ತೆಗೆದುಕೊಂಡು ಬರುವಂತೆ ಫಿರ್ಯಾದಿಗೆ ತಿಳಿಸಿದ್ದು, ಪವನ್ ಮತ್ತು ಇತರರು ಅಪಹರಣ ಆಗಿರುತ್ತಾರೆಂದು ಕೊಟ್ಟ ದೂರು ಇತ್ಯಾದಿ.	ಬಿ.ಎಸ್.ಛೇಲಪತಿ ಲೇಟ್ ಜಿ ಶ್ರೀನಿವಾಸಪ್ಪ 46 ವರ್ಷ ಸಿಹೆಚ್ ಸಿ-110 ಮಾಲೂರು ಠಾಣೆ ಕೋಲಾರ	ಪ್ರಸುತ್ತ ಜೆಸಿ	PT
69.	ಮನೋಜ್ ಪಿ.ಸಿ.	ಹೈಗ್ರಂಡ್	DOWRY PROHIBITIO	29/01/2025	ಪಿರ್ಯಾದುದಾರರ ಶ್ರೀಮತಿ ರೇಖಾ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ	ನ್ಯಾಯಾಲಯಲದಲ್ಲಿ ಜಾಮೀನು	-	ಮಾನ್ಯ ನ್ಯಾ

		22/2025	N ACT, 1961 (U/s-3,4); THE BHARATIYA NYAYA SANHITA (BNS), 2023 (U/s-85,115(2))		ಸಾರಾಂಶವೆನೇಂದರೆ, ಪಿರ್ಯಾದುದಾರರು ಪ್ರಸ್ತುತ ನಂ.06 ಎಸ್ ಬ್ಲಾಕ್ ವಸಂತನಗರ ಪೊಲೀಸ್ ಕ್ವಾಟ್ರಸ್ ನಲ್ಲಿ ಪಿರ್ಯಾದುದಾರರ ಗಂಡನಾದ ಮನೋಜ್ ರವರ ಜೊತೆ 2 ತಿಂಗಳಿಂದ ವಾಸವಾಗಿರುತ್ತಾರೆ. ಪಿರ್ಯಾದುದಾರರ ಮೊದನೇ ಗಂಡನಾದ ನಿಂಗರಾಜ ರವರು ಅಪಘಾತದಲ್ಲಿ ತಿರುಹೋಗಿರುತ್ತಾರೆ, ಈ ವಿಷಯ ಕೋರ್ಟಗೆ ಸಂಬಂಧಿಸಿದಂತೆ ಪ್ರಕರಣವಾಗಿ ಲೆಟರ್ ಕೊಡುಲು ಬಂದಾಗ ಮನೋಜ್ ರವರು ಪರಿಚಯವಾದರು. ತದ ನಂತರ 2024 ರಲ್ಲಿ ಮತ್ತೆ ಸ್ನೆಹ ಪ್ರೀತಿಗೆ ತಿರುಗಿ ಪಿರ್ಯಾದುದಾರರು ವಿದವೆ ಮತ್ತು 2 ಹೆಣ್ಣು ಮಕ್ಕಳು ಇರುವ ವಿಷಯ ತಿಳಿದು ದಿನಾಂಕ:07.08.2024 ರಂದು ನಂಜನಗೂಡಿನಲ್ಲಿ ಪಿರ್ಯಾದುದಾರರನ್ನು ಮದುವೆ ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ:28.11.2024 ರಂದು ವೈಯಾಲಿಕಾವಲ್ ಸಬ್-ರಿಜಿಸ್ಟರ್ ನಲ್ಲಿ ಮದುವೆಯಾಗಿರುತ್ತಾರೆ. ನಂತರ 2 ದಿನಗಳಾದ ಮೇಲೆ ಮನೋಜ್ ರವರ ಅಕ್ಕ ಪವಿತ್ರ, ಭಾವ ವಸಂತ್, ತಂಗಿ ಮೇಘನಾ ಮತ್ತು ಸ್ನೇಹಿತ ವಿನಯ್ ಕುಮಾರ್ ರವರು ಪಿರ್ಯಾದುದಾರರ ಮನೆಗೆ ಬಂದು ಬೈದು ಹೋಗಿರುತ್ತಾರೆ. ಇವರು ಮನೆಗೆ ಬಂದು ಹೋದ ಮೇಲೆ ಪಿರ್ಯಾದುದಾರರ ಗಂಡ ಮನೋಜ್ ರವರು ಸಣ್ಣ ಪುಟ್ಟ ವಿಷಯಗಳಿಗೆ ಜಗಳವಾಗಲು ಮಾಡಲು ಆರಂಭಿಸಿ, ನೀನು ನಮ್ಮ ಮನೆಯವರಿಗೆ ಇಷ್ಟವಿಲ್ಲ ಮತ್ತು ನೀನು ವಿದವೆ ಇದ್ದಿಯಾ ನೀನಗೆ ಇಗಲೇ 2 ಹೆಣ್ಣು ಮಕ್ಕಳು ಇದ್ದಾರೆ ನಾನು ಬೇರೆಯವರನ್ನ ಮದುವೆಯಾಗಿದ್ದರೆ ವರದಕ್ಷಿಣೆ ಕೊಡುತ್ತಿದ್ದರು ನೀನು ನನಗೆ ವರದಕ್ಷಿಣೆ ಕೊಟ್ಟಿಲ್ಲ ಎಂದು	ಪಡೆದುಕೊಂಡಿರುತ್ತಾರೆ, ಮನೋಜ್.ಸಿ., 16650, ಇಂದಿರಾ ನಗರ ಪೊಲೀಸ್ ಠಾಣೆ,		ಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

					ಬೈದು ಹೋಡೆದಿರುತ್ತಾರೆ. ಇವರು ಮುಂದೆ ಸರಿ ಹೋಗಬಹುದು ಎಂದು ಎಂದು ಪಿರ್ಯಾದುದಾರರು ಸಹಿಸಿಕೊಂಡು ಇರುತ್ತಾರೆ. ಆದರೂ ಸಹ ಪಿರ್ಯಾದುದಾರರ ಗಂಡ ಪ್ರತಿ ನಿತ್ಯ ವರದಕ್ಷಿಣೆ ತೆಗುದುಕೊಂಡು ಬಾ ಇಲ್ಲವಾದರೆ ಡೈವರ್ಸ ಕೊಟ್ಟು ಹೋಗು ಎಂದು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆಯನ್ನು ಕೊಡುತ್ತಿರುತ್ತಾನೆ. ಆಗ ಪಿರ್ಯಾದುದಾರರು ಅನುಮಾನ ಬಂದು ಮನೋಜ್ ರವರ ಫೋನ್ ಅನ್ನು ಚೆಕ್ ಮಾಡಿದಾಗ ಅದರಲ್ಲಿ ಬೇರೆ ಮಹಿಳೆಯೊಂದಿಗೆ ಅನೈತಿಕ ಸಂಭಂಧ ಇಟ್ಟುಕೊಂಡಿರುವ ಫೋಟೋ ಮತ್ತು ವಿಡಿಯೋಗಳು ಸಿಕ್ಕಿರುತ್ತವೆ. ಈ ವಿಷಯದ ಬಗ್ಗೆ ಪಿರ್ಯಾದುದಾರರು ಮನೋಜ್ ರವರನ್ನು ಕೇಳಿದಾಗ ಪಿರ್ಯಾದುದಾರರ ಬಲಗೈ ಟಿಸ್ಟ್ ಆಗುವ ರೀತಿ ಹೋಡೆದಿರುತ್ತಾರೆ ನಂತರ ಪಿರ್ಯಾದುದಾರರು ವಸಂತನಗರದ ಮಹಾವೀರ್ ಜೈನ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಇದಲ್ಲದೆ ಮನೋಜ್ ರವರ ಅಕ್ಕ ಪವಿತ್ರ, ಭಾವ ವಸಂತ್, ತಂಗಿ ಮೇಘನಾ ಮತ್ತು ಸ್ನೆಹಿತ ವಿನಯ್ ಕುಮಾರ್ ರವರು ಪಿರ್ಯಾದುದಾರರ ಮನೆಗೆ ಬಂದು ಬೈದು ಮತ್ತು ದೂರವಾಣಿಯ ಮೂಲಕ ಬೈದು ಮತ್ತು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಆದ್ದರಿಂದ ಈ ರೀತಿಯಾಗಿ ಪಿರ್ಯಾದುದಾರರಿಗೆ ಮಾನಸಿಕ ಹಾಗೂ ದೈಹಿಕವಾಗಿ ಮತ್ತು ವರದಕ್ಷಿಣೆ ಕಿರುಕುಳ ಕೊಟ್ಟಿರುವ ಪಿರ್ಯಾದುದಾರರ ಗಂಡನಾದ ಮನೋಜ್ ಮತ್ತು ಅವರ ಅಕ್ಕ ಪವಿತ್ರ, ಭಾವ ವಸಂತ್, ತಂಗಿ ಮೇಘನಾ ಮತ್ತು ಸ್ನೇಹಿತರಾತ ವಿನಯ್ ಕುಮಾರ್, ದೀಪ ರವರ ವಿರುದ್ದ ಕಾನೂನು			

					ರಿತ್ಯಾ ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.			
70.	ಶ್ರೀನಾಗರಾಜುವೈ ಹೆಚ್.ಸಿ-1103 ಹಿರಿಯೂರು ಗ್ರಾಮಾಂತರಪೊಲೀಸ್ಠಾಣೆ. ಚಿತ್ರದುರ್ಗ ಜಿಲ್ಲೆ.	ಪೀಣ್ಯ 277/2025	ಕಲಂ: 308(2), 318(4), 319(2) ಸಹಿತ 3(5) ಬಿಎನ್ಎಸ್ ಆಕ್ಟ್	24.05.2025	ಕೇಸಿನ ಪಿರ್ಯಾದುದಾರರಾದ ಶ್ರೀ..ರಮಾನಂದ ನಾಯ್ಕ್ ರಮಾಯಣಿ ನಾಯ್ಕ್, 65 ವರ್ಷ, ರವರು ಠಾಣೆಗೆ ಹಾಜರಾಗಿ ಕೊಟ್ಟಿರುವ ದೂರಿನ ವಿಷಯವೇನೆಂದರೇ, "ನಾನು ನಿವೃತ್ತ ಬ್ಯಾಂಕ್ ಮ್ಯಾನೇಜ್ ಆಗಿರುತ್ತೇನೆ. ಈಗ್ಗೆ 5 ವರ್ಷದ ಹಿಂದೆ ರಘು ಎಂಬಾತನು ನಮ್ಮ ಮನೆಯಲ್ಲಿ ಬಾಡಿಗೆಗೆ ಬಂದಿದ್ದು, ಸುಮಾರು ಒಂದು ವರ್ಷಗಳ ಕಾಲ ಬಾಡಿಗೆಗೆ ಇದ್ದು, ನಂತರ ರಂಜಿತ್ @ ಕಿರಣ್ ಕುಮಾರ್ ಎಂಬಾತನನ್ನು ಪರಿಚಯ ಮಾಡಿಸಿದರು. ಈತನು ಸುಮಾರು 3 ವರ್ಷಗಳಿಂದ ನನಗೆ ತುಂಬಾ ಆತ್ಮೀಯನಾಗಿದ್ದು, ನನ್ನ ಎಲ್ಲಾ ವ್ಯವಹಾರ ಮತ್ತು ಹಣಕಾಸಿನ ವಿಚಾರವನ್ನು ತಿಳಿದುಕೊಂಡಿದ್ದನು. ಈತನು ನನ್ನ ಬಳಿ ಬಂಗಾರದ ವಿಚಾರವಾಗಿ ಮಾತನಾಡಿ ಕಡಿಮೆ ಬೆಲೆಗೆ ಅಂದರೆ ಅರ್ಧ ರೇಟಿಗೆ ಬಂಗಾರ ಕೊಡಿಸುವುದಾಗಿ ನನ್ನಿಂದ 3 ಲಕ್ಷ ರೂಗಳ ನಗದು ಹಣವನ್ನು ಪಡೆದುಕೊಂಡನು. 2024ನೇ ಸಾಲಿನ ಫೆಬ್ರವರಿ ತಿಂಗಳಲ್ಲಿ ರಂಜಿತ್ @ ಕಿರಣ್ ಕುಮಾರ್ ಮತ್ತತೆ ನನಗೆ ಫೋನ್ ಮಾಡಿ ನನಗೆ ರಿಸರ್ವ್ ಬ್ಯಾಂಕ್ನಲ್ಲಿ ಕೆಲಸ ಮಾಡುವವರು ಪರಿಚಯವಿದ್ದು, ಅವರಿಗೆ 5 ಲಕ್ಷ ರೂ ನಗದನ್ನು ಕೊಟ್ಟರೆ 15 ಲಕ್ಷ ರೂಗಳನ್ನು ಕೊಡುತ್ತಾರೆಂದು ನನ್ನಿಂದ 3 ಲಕ್ಷ ರೂಗಳನ್ನು ಪಡೆದುಕೊಂಡನು. ಇದಾದ ನಂತರ ಸದರಿ ರಂಜಿತ್ @ ಕಿರಣ್ ಕುಮಾರ್ ರವರು ಹಲವಾರು ವ್ಯಕ್ತಿಗಳನ್ನು ನನಗೆ ಪರಿಚಯಿಸಿ, ರಿಸರ್ವ್ ಬ್ಯಾಂಕ್ನಲ್ಲಿ ತಿರಸ್ಕೃತ ನೋಟುಗಳನ್ನು ಕೊಡಿಸುವುದಾಗಿ, ಅದಕ್ಕೆ ನೀವು 15 ಲಕ್ಷ ರೂಪಾಯಿ ಹಣವನ್ನು	ಶ್ರೀನಾಗರಾಜುವೈ ಹೆಚ್.ಸಿ-1103 ಹಿರಿಯೂರುಗ್ರಾಮಾಂತರ ಪೊಲೀಸ್ಠಾಣೆ. ಚಿತ್ರದುರ್ಗಜಿಲ್ಲೆ.	ದಿನಾಂಕ: 25.05.2025 ರಂದು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತದೆ.	ಪ್ರಕರಣದಲ್ಲಿ ದೋಷಾರೋಪಣಾಪಟ್ಟಿಯನ್ನುಸಿದ್ಧಪಡಿಸಿದ್ದು, ಮಾನ್ಯ ಅಭಿಯೋಜಕರಪರಿಶೀಲನೆಗಾಗಿಕಳುಹಿಸಿಕೊಟ್ಟಿರುತ್ತದೆ.

					ಕೊಟ್ಟರೇ, 50 ಲಕ್ಷ ರೂ ರಿಸರ್ವ್ ಬ್ಯಾಂಕ್ ನ ತಿರಸ್ಕೃತ ನೋಟುಗಳನ್ನು ಕೊಡುವುದಾಗಿ ನಂಬಿಸಿ ನನ್ನಿಂದ ಹಂತ ಹಂತವಾಗಿ, 15 ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡಿರುತ್ತಾನೆ. ರಂಜಿತ್ @ ಕಿರಣ್ ಕುಮಾರ ನ ಜೊತೆಯಲ್ಲಿ ಗಜೇಂದ್ರ ಎಂಬುವನು ಸೇರಿಕೊಂಡು ನನಗೆ ಬೇರೆ ಬೇರೆ ಕಾರಣಗಳನ್ನು ಹೇಳಿಕೊಂಡು ನನ್ನಿಂದ ನಗದು ರೂಪದಲ್ಲಿ ಮತ್ತು ಆನ್ಲೈನ್‌ಗಳ ಮೂಲಕ ವೂ ಹಣವನ್ನು ಪಡೆದುಕೊಂಡಿರುತ್ತಾರೆ. ಈ ಪುನಃ ನನಗೆ ಫೋನ್ ಮಾಡಿ, ಹಣದ ವ್ಯವಸ್ತೆ ಮಾಡುವಂತೆ ಹಲವಾರು ಬಾರಿ ಒತ್ತಾಯ ಮಾಡಿರುತ್ತಾರೆ. ಇಲ್ಲವಾದರೆ 50 ಲಕ್ಷರೂಗಳ ತಿರಸ್ಕೃತ ನೋಟ್ಗಳು ಬೇಕೆಂದು ಬೇಡಿಕೆ ಇಟ್ಟಿದ್ದೀರಾ ಎಂದು ನಿಮ್ಮ ಕುಟುಂಬದವರಿಗೆ, ಸಂಬಂಧಿಕರಿಗೆ ತಿಳಿಸಿ ನಿಮ್ಮ ಮರ್ಯಾದೆ ತೆಗೆಯುತ್ತೇವೆಂದು, ಹೆದರಿಸಿ ಭಯಪಡಿಸುತ್ತಿದ್ದು, ಇದರಿಂದ ನಾನು ಅವರಿಗೆ ಹೆದರಿಕೊಂಡು ಹಣವನ್ನು ಕೊಟ್ಟಿರುತ್ತೇನೆ. ವಯಸ್ಸಾದ ನನಗೆ ಇಲ್ಲಸಲ್ಲದ ಮಾತುಗಳನ್ನು ಹೇಳಿ ನನ್ನನ್ನು ನಂಬಿಸಿ, ನನ್ನಿಂದ ಸುಮಾರು 15 ಲಕ್ಷಕ್ಕೂ ಹೆಚ್ಚಿನ ಹಣವನ್ನು ಪಡೆದುಕೊಂಡು, ಮೋಸ ಮಾಡಿ, ಹಾಗೂ ಇನ್ನೂ ಹೆಚ್ಚಿನ ಹಣವನ್ನು ಕೊಡುವಂತೆ ಹೆದರಿ ಸಿ ಭಯಪಡಿಸಿ ಬಲದ್ಬರಣ ಮಾಡುತ್ತಿರುವ ಸದರಿ ರಂಜಿತ್ @ ಕಿರಣ್ ಕುಮಾರ್, ಗಜೇಂದ್ರ ಹಾಗೂ ಇನ್ನಿತರೆ ಯವರ ವಿರುದ್ದ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ ಎಂದು ಆರೋಪಿಸಿ ಕೊಟ್ಟ ದೂರು ಇತ್ಯಾದಿ.			
71.	ಮಹದೇವ ನಾಯ್ಕ,	Cr No-0269/20	U/s-115(2),126(2	09/09/2025	ಈ ಕೇಸಿನ ಸಾರಾಂಶವೇನೆಂದರೆ, ಫಿರ್ಯಾದುದಾರರು ದಿನಾಂಕ-09.09.2025	Hig Court Criminal Peition No-13791/25	0	FIR Quash

	ಪಿಸಿ, ಗೋವಿಂದ ಪುರ, 269/2025	25	),351(3),74,351(2)) BNS		ರಂದು ಸಂಜೆ 06.30 ಗಂಟೆಯ ಸಮಯದಲ್ಲಿ ವೈಟ್‌ಫೀಲ್ಡ್ ನಿಂದ ತಮ್ಮ ಸಹೋದರನೊಂದಿಗೆ, ದ್ವಿಚಕ್ರ ವಾಹನದಲ್ಲಿ ಬರುವಾಗ ನಾಗವಾರ ರಸ್ತೆಯಲ್ಲಿರುವಾಗೆ, ಮಹದೇವ ನಾಯ್ಕ ಸಂಚಾರ ಪೊಲೀಸ್ ಸಿಬ್ಬಂದಿಯು ಯೂಟರ್ನ್ ವಿಚಾರವಾಗಿ, ಫಿರ್ಯಾದುದಾರರಿಗೆ ಏಕಾಏಕಿ ಹಲ್ಲೆ ಮಾಡಿ, ಬೆದರಿಕೆ ಹಾಕಿರುತ್ತಾರೆ, ನಂತರ ಫಿರ್ಯಾದುದಾರರ ವಿಡಿಯೋ ಚಿತ್ರಿಕರಣ ಮಾಡಿ, ಮೊಬೈಲ್ ಅನ್ನು ಪಡೆದುಕೊಂಡು ಮರಳಿ ನೀಡಿ, ನಂತರ ತನ್ನ ಕೂದಲನ್ನು ಸಾರ್ವಜನಿಕ ರಸ್ತೆಯಲ್ಲಿ ಜೋರಾಗಿ ಎಳೆದು ಹೊಡೆದಿರುತ್ತಾನೆ. ಈ ಘಟನೆ ಬಗ್ಗೆ ನಮಗೆ ಸಾಕ್ಷ್ಯ ಗಳಿದ್ದು, ತನಿಖೆಗೆ ಹಾಜರುಪಡಿಸುದಾಗಿ ಮತ್ತು ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿಕೊಂಡು ತಡವಾಗಿ ಬಂದು ನೀಡಿದ ದೂರು ಮತ್ತು ಇತ್ಯಾದಿ,	&14953/25		Date-07/11/2025
72.	ಶ್ರೀಸುನೀಲ್ಹೆಚ್.ಬಿ ಪೊಲೀಸ್ಇನ್ಸ್ಪೆಕ್ಟರ್ ಡಿ.ಜೆಹಳ್ಳಿ ಪೊಲೀಸ್ಠಾಣೆ.	ಪೀಣ್ಯ 597/2025	351(2), 69, 75(1) 75(2) ಬಿ.ಎನ್.ಎಸ	25.10.2025	ಗೋವಿಂದಪುರ ಪೊಲೀಸ್ ಠಾಣೆಯಿಂದ ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ವರ್ಗಾವಣೆಗೊಂಡಿರುವ ಜೀರೋ FIR ನಂ.03/2025 ಕಲಂ 69, 75(1), 75(2), 351(2) ಬಿ.ಎನ್.ಎಸ್. ಪ್ರಕರಣವನ್ನು ಪೊಲೀಸ್ ಐ.ಟಿ.ಯಲ್ಲಿ ಇಂದು ಬೆಳಿಗ್ಗೆ 11:30 ಗಂಟೆಗೆ ಸ್ವೀಕರಿಸಿಕೊಂಡಿರುತ್ತದೆ. ಈ ಕೇಸಿನ ಸಂಕ್ಷಿಪ್ತ ಸಾರಾಂಶವೆನೇಂದರೆ, ಪಿರ್ಯಾದುದಾರರಾದ ಆಯೆಷಾರವರು ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ನೀಡಿರುವ ಲಿಖಿತ ದೂರಿನ ಸಾರಾಂಶವೇನೆಂದರೆ, ಪಿರ್ಯಾದುದಾರರು ಈ ಹಿಂದೆ ಡಿ.ಜೆ .ಹಳ್ಳಿ ಪೊಲೀಸ್ ಠಾಣೆಗೆ ವಂಚನೆ ಪ್ರಕರಣದ ದೂರು ನೀಡಲು ಹೋಗಿದ್ದಾಗ, ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ ಪೊಲೀಸ್	ಶ್ರೀಸುನೀಲ್ ಹೆಚ್.ಬಿ ಪೊಲೀಸ್ ಇನ್ಸ್ಪೆಕ್ಟರ್ ಡಿ.ಜೆ ಹಳ್ಳಿ ಪೊಲೀಸ್ ಠಾಣೆ. ಬಂಧಿತರಾಗಿರುವುದಿಲ್ಲ.	-	ಸದರಿ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತೆ. ಹಾಗೂ

					ಇನ್ಸ್ಪೆಕ್ಟರ್, ಸುನಿಲ್. ಹೆಚ್.ಬಿ. ರವರು ಪರಿಚಯವಾಗಿ, ಇಬ್ಬರೂ ಸ್ನೇಹಿತರಾಗಿ ಪರಸ್ಪರ ಮೊಬೈಲ್ ನಂಬರ್‌ಗಳನ್ನು ವಿನಿಮಯ ಮಾಡಿಕೊಂಡಿದ್ದು, ನಂತರ ಇಬ್ಬರೂ ವಾಟ್ಸ್ ಅಪ್ ಮುಖಾಂತರ ಮೆಸೇಜ್‌ಗಳನ್ನು ಚಾಟಿಂಗ್ ಮಾಡುತ್ತಿದ್ದಾಗ, ಸುನಿಲ್. ಹೆಚ್.ಬಿ. ರವರು ನನಗೆ ಪಾರ್ಲರ್ ಹಾಗೂ ಮನೆಯನ್ನು ಕೊಡಿಸುವುದಾಗಿ ಮತ್ತು ಮದುವೆಯಾಗುವುದಾಗಿ ನಂಬಿಸಿ ಭರವಸೆ ನೀಡಿದ್ದರು. ನಂತರ ಅವರ ಮನೆಯಲ್ಲಿ ಸುನಿಲ್.ಹೆಚ್.ಬಿ ರವರ ಹೆಂಡತಿ ಇಲ್ಲದ ಸಮಯದಲ್ಲಿ ದಿನಾಂಕ:-11/12/2024 ರಂದು ಪೀಣ್ಯದ 8ನೇ ಮೈಲಿಯಲ್ಲಿಯಲ್ಲಿರುವ ಶೋಭಾ ಅಪಾರಟ್‌ಮೆಂಡ್ 14ನೇ ಮಹಡಿಯ ಲೊಕೇಶನ್ ಕಳುಹಿಸಿ, ಅಲ್ಲಿಗೆ ಪಿರ್ಯಾದಿಯನ್ನು ಬರಮಾಡಿಕೊಂಡು, ಮದ್ಯಪಾನ ಮಾಡಿ, ಬೆಡ್ ರೂಂಗೆ ಕರೆದುಕೊಂಡು ಹೋಗಿ, ಮದುವೆಯಾಗುವುದಾಗಿ ಹೇಳಿ, ದೈಹಿಕ ಸಂಪರ್ಕ ಬೆಳೆಸಿದರು. ನಂತರ ಸುನಿಲ್ ಹೆಚ್.ಬಿ ರವರು 2025 ರ ಫೆಬ್ರವರಿ ತಿಂಗಳಲ್ಲಿ ಮಾನ್ಯತಾ ಟೆಕ್ ಪಾರ್ಕ್ ಎದುರು ಇರುವ ಐಬಿ ಸ್ಟೋಟೆಲ್ನ ಒಂದು ರೂಂ ಗೆ ಕರೆದುಕೊಂಡು ಹೋಗಿ ಮದುವೆಯಾಗುವುದಾಗಿ ಹೇಳಿ, ದೈಹಿಕ ಸಂಪರ್ಕ ಬೆಳೆಸಿದರು. ನಂತರ ಹಲವು ಬಾರಿ ವೀಡಿಯೊ ಕಾಲ್‌ಮಾಡಿದಾಗ ನಿನ್ನ ಬೆತ್ತಲೆಯಾಗಿ ದೇಹವನ್ನು ತೋರಿಸು ಎಂದು ಹೇಳುತ್ತಿದ್ದರು. ಇದಾದ ನಂತರ ಹಲವು ಬಾರಿ ಅಸಭ್ಯವಾಗಿ ವೀಡಿಯೊ ಕಾಲ್ ಮತ್ತು ಮೇಸೇಜ್ಗಳನ್ನು ಮಾಡಿರುತ್ತಾರೆ. ನಂತರ ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ			ಸದರಿ ಪ್ರಕರಣವನ್ನು ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು ಪೀಣ್ಯ ಉಪವಿಭಾಗಕ್ಕೆ ವರ್ಗಾವಣೇ ಮಾಡಿದ್ದು, ನಂತರ ಅಲ್ಲಿಂದ CCB ಘಟಕಕ್ಕೆ ವರ್ಗಾವಣೆಯಾಗಿರುತ್ತದೆ.

					ಎಎಸ್ಐ ಪ್ರಕಾಶ್ ರವರು ನನಗೆ ಸುನಿಲ್ ರವರೊಂದಿಗೆ ಸಂಪರ್ಕವಿರುವ ವಿಷಯ ಗೊತ್ತಾಗಿ, ಸುನಿಲ್ ರವರೊಂದಿಗೆ ಮಲಗುತ್ತೀಯಾ ನನ್ನೊಂದಿಗೆ ಯಾಕೆ ಮಲಗುವುದಿಲ್ಲ ಎಂದು ಹೇಳಿ, ಹಲವು ಬಾರಿ ಒಯೋ ರೂಂ ಗೆ ಬಾಎಂದು ಕರೆದು, ಲೈಂಗಿಕ ಕಿರುಕುಳ ನೀಡಿ, ಈ ರೀತಿ ಮಾಡಲು ನಾನು ಒಪ್ಪದ ಕಾರಣ ನನಗೆ ಎಎಸ್ಐ ಪ್ರಕಾಶ್ ರವರು ಬೆದರಿಕೆ ಹಾಕಿರುತ್ತಾರೆ. ಈ ರೀತಿಯಾಗಿ ಸುನಿಲ್ ಹೆಚ್.ಬಿ. ರವರು ನನ್ನನ್ನು ಮದುವೆಯಾಗುವುದಾಗಿ ನಂಬಿಸಿ, ಪಾರ್ಲರ್ ಮತ್ತು ಮನೆಯನ್ನು ಕೊಡಿಸುವುದಾಗಿ ಭರವಸೆ ನೀಡಿ, ದೈಹಿಕ ಸಂಪರ್ಕ ಬೆಳಸಿರುವ ಸುನಿಲ್, ಹೆಚ್.ಬಿ ಮತ್ತು ಲೈಂಗಿಕ ಕಿರುಕುಳ ನೀಡಿ ಬೆದರಿಕೆ ಹಾಕಿರುವ ಎಎಸ್ಐ ಪ್ರಕಾಶ್‌ರವರ ವಿರುದ್ದ ಸೂಕ್ತ ದೂರು ದಾಖಲಿಸಿ, ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಪೀಣ್ಯ ಪೊಲೀಸ್ ಠಾಣೆಗೆ ವರ್ಗಾವಣೆ ನೀಡಬೇಕೆಂದು ನೀಡಿದ ದೂರು ಇತ್ಯಾದಿ..			
73.	ಶಿವರಾಜ್ ಹೆಚ್.ಸಿ -9883 ಬಂಡೇಪಾಳ್ಯ ಪೊಲೀಸ್ ಠಾಣೆ. ಬೆಂಗಳೂರು ನಗರ ಆರ್.ಆರ್.ನಗರ 352/202	352/2025	352,r/w 3(5) BNS	12-11-2025	ಪರ್ಯಾದುದಾರರು ನೀಡಿದ ದೂರಿನ ಸಾರಾಂಶವೇನೆಂದರೆ, ದಿನಾಂಕ 10.11.2025 ರಂದು ನಮ್ಮ ಮನೆಯ ಪಕ್ಕದಲ್ಲಿ ವಾಸ ಮಾಡಿಕೊಂಡಿರುವ ಶಿವರಾಜ್ ಹಾಗೂ ವಿದ್ಯಾ ರವರು ಮನೆಯ ಬಳಿ ವಾಹನ ನಿಲ್ಲಿಸುವ ವಿಚಾರವಾಗಿ ತಮ್ಮ ಮನೆಯಿಂದ ಬಂದು ನನ್ನ ಮೇಲೆ ಹಾಗೂ ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಹಾಗೂ ನನ್ನ ಮಕ್ಕಳು ಮನೆಯ ಮುಂದೆ ಆಟ ಆಡುವಾಗ ಅವರಿಗೆ ಕೆಟ್ಟದಾಗಿ ಬೈಯ್ಯುವುದು, ಹಾಗೂ ನಮ್ಮ ಮನೆಯ ಮುಂದೆ ನಮ್ಮ ವಾಹವನ್ನು ಸ್ವಚ್ಚಗೊಳಿಸಿದರೆ ಅದಕ್ಕೂ ಸಹ ನಮಗೆ ಕೆಟ್ಟ	ಶಿವರಾಜ್ ಹೆಚ್.ಸಿ -9883 ಬಂಡೇಪಾಳ್ಯ ಪೊಲೀಸ್ ಠಾಣೆ. ಬೆಂಗಳೂರು ನಗರ	ನೋಟೀಸ್ ಜಾರಿ ಮಾಡಲಾಗಿರುತ್ತದೆ	ತನಿಖಾ ಹಂತದಲ್ಲಿದೆ

	5				ಪದಗಳಿಂದ ನಿಂದಿಸುತ್ತಿರುತ್ತಾರೆ. ಸಣ್ಣಪುಟ್ಟ ವಿಚಾರಗಳಿಗು ಶಿವರಾಜ್ ಮತ್ತು ಅವರ ಹೆಂಡತಿ ವಿಧ್ಯಾ ರವರು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುತ್ತಾರೆ, ಆದ್ದರಿಂದ ಸದರಿಯವರುಗಳ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ ಠಾಣಾ ಎನ್.ಸಿ.ಆರ್ ನಂ.328/2025 ರಲ್ಲಿ ದೂರು ದಾಖಲು ಮಾಡಿ, ರ್ಯಾದುದಾರರಿಗೆ ಹಿಂಬರಹ ನೀಡಿದ್ದು, ರ್ಯಾದುದಾರರು ದಿನಾಂಕ:12.11.2025 ರಂದು ಮಾನ್ಯ 46ನೇ ಎಸಿಜೆಎಂ ನ್ಯಾಯಾಲಯದಲ್ಲಿ ಸದರಿ ಎನ್.ಸಿ.ಆರ್ ಮೇಲೆ ತನಿಖೆ ಮಾಡುವಂತೆ ಇಂಟಿಮೇಷನ್ ಮಾಡಿಸಿಕೊಂಡು ಠಾಣೆಯಲ್ಲಿ ಹಾಜರುಪಡಿಸಿದ ಮೇರೆಗೆ ಪ್ರ.ವ.ವರದಿ ದಾಖಲಿಸಿರುತ್ತೆ.			
74.	ಜಾನ್ ಇಮ್ಯಾನ್ಯುಯೆಲ್ ಪ್ರೀತಂ ಪೊಲೀಸ್ ಇನ್ಸ್‌ಪೆಕ್ಟರ್. ಸ್ಟೇಟ್ ಇಂಟಲಿಜೆನ್ಸ್, ಬೆಂಗಳೂರು ನಗರ	ಆರ್ .ಆರ್ ನಗರ 217/2025	115(2), 79, 351(2) BNS & 8, 9(C) POCSO Act. & 75 J.J.Act.	18-07-2025	ದಿನಾಂಕ: 18/07/2025 ರಂದು ಪರ್ಯಾದುದಾರರಾದ ಕು|| ಅನಬೆಲ್ ಚೆಸೆಡ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಂಕ್ಷೀಪ್ತ ಸಾರಾಂಶವೇನೆಂದರೆ, ಪರ್ಯಾದುದಾರರು 9ನೇ ತರಗತಿಯಲ್ಲಿ ಓದುತ್ತಿರುವಾಗ್ಗೆ, ತಂದೆಯ ಸಂಬಂಧಿಕರುಗಳಾದ ಜಾನ್ ಇಮ್ಯಾನ್ಯುಯೆಲ್ ಪ್ರೀತಂ ಮತ್ತು ಜಾನ್ ಇಮ್ಯಾನ್ಯುಯೆಲ್ ಪ್ರಜ್ವಲ್ ಎಂಬುವರುಗಳು 2021-2024 ರವರಿಗೆ ಆಗಾಗ್ಗೆ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ನಾನು ಒಬ್ಬಳೇ ರೂಮ್ ನಲ್ಲಿರುವಾಗ, ಬಾಲ್ಕನಿಯಲ್ಲಿ ಕುಳಿತಿರುವಾಗ, ಕೆಲವೊಮ್ಮೆ ಟೆರೆಸ್ ಗೆ ಕರೆದುಕೊಂಡು ಹೋಗಿ ನನ್ನ ಎದೆ ಮತ್ತು ಒಳತೊಡೆಯ ಭಾಗಗಳನ್ನು ಒಳಗೆ ಮತ್ತು ಹೊರಗೆ ಮುಟ್ಟಿ, ತುಟಿಗಳಿಗೆ ಮುತ್ತುಕೊಟ್ಟು, ಬಟ್ಟೆ ಬಿಚ್ಚುವಂತೆ ಒತ್ತಾಯಿಸುತ್ತಿದ್ದರು. ನನ್ನ	ಜಾನ್ ಇಮ್ಯಾನ್ಯುಯೆಲ್ ಪ್ರೀತಂ ಪೊಲೀಸ್ ಇನ್ಸ್ ಪೆಕ್ಟರ್. ಸ್ಟೇಟ್ ಇಂಟಲಿಜೆನ್ಸ್, ಬೆಂಗಳೂರುನಗರ	ಇಲ್ಲಾ	ಬಿ ಅಂತಿಮ ವರದಿ ಸಲ್ಲಿಸಲಾಗಿದೆ

					ಮೇಲೆ ಮಲಗಲು ಪ್ರಯತ್ನಿಸುತ್ತಿದ್ದರು.ನಾನು ಪ್ರತಿರೋಧಿಸಿದಾಗ ನನ್ನನ್ನು ಗೋಡೆಗೆ ತಳ್ಳಿ, ಬಲವಂತವಾಗಿ ನನ್ನ ಕೈಯನ್ನು ಹಿಡಿದುಕೊಳ್ಳುತ್ತಿದ್ದರು. ಪರ್ಯಾದುದಾರರು ಆಳುವಾಗ ಚಾಕೋಲೇಟ್, ಗಿಫ್ಟ್ ಮತ್ತು ಕೆಲವು ಆಹಾರ ಪದರ್ಥಗಳನ್ನು ಕೊಡುತ್ತಿದ್ದರು. ನಾನು ವಿಷಯವನ್ನು ತಂದೆ-ತಾಯಿಗೆ ಮತ್ತು ಪೋಷಕರಿಗೆ ಹೇಳುವುದಾಗಿ ಹೇಳಿದಾಗ ನಿನ್ನನ್ನು ಯಾರು ನಂಬುವುದಿಲ್ಲ. ನಿನ್ನ ತಂದೆ ತಾಯಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ನೀನೇ ನಮ್ಮನ್ನು ಪ್ರಚೋದಿಸಿದ್ದೀಯಾ ಎಂದು ಹೇಳುತ್ತಿವೆ ಎಂಬಿತ್ಯಾದಿಯಾಗಿ ಹೆದರಿಸುತ್ತಿದ್ದರಿಂದ ನಾನು ವಿಚಾರವನ್ನು ಯಾರಿಗೂ ಹೇಳಿರುವುದಿಲ್ಲ. ಇವರುಗಳಿಂದ ತಪ್ಪಿಸಿಕೊಳ್ಳಲು ನಾನು ಕೆಲಮೊಮ್ಮೆ ಆತ್ಮಹತ್ಯೆಗೂ ಸಹ ಯೋಚಿಸಿರುತ್ತೇನೆ. ಅಲ್ಲದೆ ಪ್ರೀತಂ ಕೆಲವೊಮ್ಮೆ ನನಗೆ ತನ್ನ ಆಡಿಯೋ/ವಿಡಿಯೋಗಳನ್ನು ಸಹ ಕಳುಹಿಸುತ್ತಿದ್ದನು. ನಾನು ಇವೆಲ್ಲನ್ನೂ ನಿರಾಕರಿಸಿದಾಗ ಅವರುಗಳು ನನಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ಸಾಯುವಂತೆ ಶಾಪ ಹಾಕುತ್ತಿದ್ದರು ಮತ್ತು ನನ್ನ ದೇಹದ ಬಗ್ಗೆ ಕೆಟ್ಟ ಕೆಟ್ಟ ಮಾತುಗಳನ್ನು ಆಡುತ್ತಿದ್ದರು. ನಾನು ಈಗ್ಗೆ ಕೆಲವು ತಿಂಗಳ ಹಿಂದೆ ಈ ವಿಚಾರವನ್ನು ನನ್ನ ಸಂಬಂಧಿಕರುಗಳಿಗೆ ತಿಳಿಸಿದ್ದು, ಈ ಇಬ್ಬರುಗಳ ಭಯದಿಂದ ನನ್ನ ಪೋಷಕರಿಗೆ ತಿಳಿಸದಂತೆ ಹೇಳಿದ್ದೆನು. ನಂತರ ನನ್ನ 2ನೇ ಪಿ.ಯು.ಸಿ ವ್ಯಾಸಂಗ ಮುಗಿದ ಬಳಿಕ ನನ್ನ ತಾಯಿ ನಾನು ಸುಮ್ಮನೆ ಮನೆಯಲ್ಲಿ ಒಬ್ಬಳೆ ಕುಳಿತುಕೊಳ್ಳುವುದನ್ನು ನೋಡಿ ನನಗೆ ಬೈಯುತ್ತಿರುವಾಗ್ಗೆ ನಾನು ನಡೆದ ಎಲ್ಲಾ ವಿಚಾರವನ್ನು ತಿಳಿಸಿದ್ದು, ಅವರು ನನ್ನ ತಂದೆ			

					ತಿಳಿಸಿದರು. ನಂತರ ನನ್ನನ್ನು ಸಹಾಯಕ್ಕಾಗಿ ಮೈಸೂರಿನಲ್ಲಿರುವ ಎನ್.ಜಿ.ಒ ಗೆ ಕರೆದುಕೊಂಡು ಹೋಗಿದ್ದು, ಅಲ್ಲಿದ್ದ ಸ್ಯಾಟ್ಯನ್ಲಿ ಅಂಕಲ್ ಮತ್ತು ಒಬ್ಬ ಅಂಟಿ ನನ್ನನ್ನು ಮಾತನಾಡಿಸಿ, ವಿಚಾರ ತಿಳಿದುಕೊಂಡು ಪೊಲೀಸ್ ಕಂಪ್ಲೇಂಟ್ ನೀಡುವಂತೆ ತಿಳಿಸಿದ್ದರಿಂದ ಈ ದಿನ ದೂರು ನೀಡುತ್ತಿದ್ದಾನೆ. ಆದ್ದರಿಂದ ಜಾನ್ ಇಮ್ಯಾನ್ಯುಯೆಲ್ ಪ್ರೀತಂ ಎಂಬುವನು ಸಿ.ಐ.ಡಿ ಯ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿರುತ್ತಾನೆ. ಮತ್ತು ಜಾನ್ ಇಮ್ಯಾನ್ಯುಯೆಲ್ ಪ್ರಜ್ವಲ್ ಮೆಸ್ಕಾಂ ನಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ಇವರುಗಳ ವಿರುದ್ದ ಕಾನೂನು ರೀತಿ ಕ್ರಮ ಜರುಗಿಸಬೇಕೆಂದು ಕೇಳಿ ಕೊಟ್ಟ ದೂರು ಇತ್ಯಾದಿ.			
75.	ಸುನಿಲ್ ಕುಮಾರ್ ಸಿ.ಹೆಚ್ ಸಿ-189 ಬ್ಯಾಟರಾಯನಪುರ	46/2025	120B, 409 IPC & 72 IT Act. 42(2) TELECOMMUNICATIONS ACT	05-02-2025	ಭರತ್ ಎಸ್. ರೆಡ್ಡಿ, ಸಹಾಯಕ ಪೊಲೀಸ್ ಆಯುಕ್ತರು, ಬ್ಯಾಟರಾಯನಪುರ ಉಪ ವಿಭಾಗ, ಆದ ನಾನು ಚಂದ್ರಲೇಔಟ್ ಪೊಲೀಸ್ ಠಾಣೆ ಮೊ.ಸಂ.617/2024 ಕಲಂ 120ಬಿ, 406, 419, 420, 504, 506 ಸಹವಾಚಕ 34 ಐಪಿಸಿ ಪ್ರಕರಣದ ತನಿಖಾಧಿಕಾರಿಯಾಗಿರುತ್ತೇನೆ. ಸದರಿ ಪ್ರಕರಣದ ಫರ್ಯಾದುದಾರರಾದ ಶ್ರೀಮತಿ ವನಿತಾ ಎಸ್. ಐತಾಳ್ ಎಂಬುವವರು ದಿನಾಂಕ 23.12.2024 ರಂದು ಚಂದ್ರಲೇಔಟ್ ಪೊಲೀಸ್ ಠಾಣೆಯಲ್ಲಿ ಐಶ್ವರ್ಯಗೌಡ @ ನವ್ಯಶ್ರೀ, ಕೆ.ಎನ್.ಹರೀಶ್ ಹಾಗೂ ರೈಂದ್ರ.ಬಿ ಎಂಬುವವರ ವಿರುದ್ದ ಮೋಸ ಮಾಡುವ ಉದ್ದೇಶದಿಂದ ಚಿನ್ನದ ಆಭರಣಗಳನ್ನು ಪಡೆದು ಹಣ ನೀಡಿದೇ ನಂಬಿಕೆ ದ್ರೋಹ ಮಾಡಿ, ಮೋಸ ಮಾಡಿ, ಮಾಜಿ ಸಂಸದ ಡಿ.ಕೆ.ಸುರೇಶ್ ರವರ ಹೆಸರಿನಲ್ಲಿ ರೈಂದ್ರ ರವರ ಕಡೆಯಿಂದ ತಾನೇ	ಸುನಿಲ್ ಕುಮಾರ್ ಸಿ.ಹೆಚ್ ಸಿ- 189 ಅಕ್ಕೂರ ಪೊಲೀಸ್ ಠಾಣೆ ರಾಮನಗರ ಜಿಲ್ಲೆ ಈಗ ಹಾಲಿ ಕಗ್ಗಲೀಪುರ ಪೊಲೀಸ್ ಠಾಣೆ	12.03.2025 ರಿಂದ 17.03.2025 ರವರೆಗೆ ಒಟ್ಟು 06 ದಿನ ಪೊಲೀಸಸ್ ಬಂಧನದಲ್ಲಿರುತ್ತಾರೆ ನಂತರ (ಮಾನ್ಯ	ತನಿಖೆ

					ಡಿ.ಕೆ.ಸುರೇಶ್ ಎಂದು ಫೋನ್ ಮಾಡಿಸಿ ಬೆದರಿಕೆ ಹಾಕಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಸದರಿ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ 27.12.2024 ರಂದು ಮಾನ್ಯ ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ನಗರ ರವರ ಜ್ಞಾಪನ ಸಂಖ್ಯೆ: ಸಿ.ಆರ್.ಎಂ./ಜ್ಞಾ/1190/ಡಿಸಿಪಿ(ಪ)/2024, ದಿನಾಂಕ: 27-12-2024 ರಂತೆ ಜ್ಞಾಪನದಂತೆ ಸದರಿ ಪ್ರಕರಣದ ತನಿಖೆಯನ್ನು ನಾನು ಕೈಗೊಂಡಿರುತ್ತೇನೆ. ಪ್ರಕರಣದ ತನಿಖಾ ಕಾಲದಲ್ಲಿ ಪ್ರಕರಣದ ಆರೋಪಿಗಳಾದ ಎ-1 ಐಶ್ವರ್ಯಗೌಡ @ ನವ್ಯಶ್ರೀ, ಮನೆ ನಂ. 111/1, ಸಂಭ್ರಮ, ವಿವೇಕಾನಂದ ಪರ್ಕ್ ಹಿಂಭಾಗ, ರಾಜರಾಜೇಶ್ವರಿನಗರ, ಬೆಂಗಳೂರು ರವರ ಕಡೆಯಿಂದ ತಾನು ಬಳಸುತ್ತಿದ್ದ ಹಾಗೂ ಕೃತ್ಯಕ್ಕೆ ಬಳಸಿದ್ದ 5 ಮೊಬೈಲ್ ಫೋನ್ಗಳನ್ನು ಮತ್ತು ತನ್ನ ಗಂಡನಾದ ಎ-2 ಕೆ.ಎನ್.ಹರೀಶ್ ತಾನು ಬಳಸುತ್ತಿದ್ದ ಹಾಗೂ ಕೃತ್ಯಕ್ಕೆ ಬಳಸಿದ್ದ 2 ಮೊಬೈಲ್ ಫೋನ್ಗಳನ್ನು ಚಂದ್ರಾಲೇಔಟ್ ಪೊಲೀಸ್ ಠಾಣೆಯ ಪಿ.ಎಫ್ ನಂ. 218/2024, 219/2024 ಮತ್ತು 02/2025 ರಲ್ಲಿ ಅಮಾನತ್ತು ಪಂಚನಾಮೆಯ ಮುಖಾಂತರ ವಶಪಡಿಸಿಕೊಂಡಿರುತ್ತದೆ. ವಶಪಡಿಸಿಕೊಂಡ ಸದರಿ ಮೊಬೈಲ್ಗಾಳನ್ನು ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡು ಸೆನ್ದ ಪೊಲೀಸ್ ಠಾಣೆ, ಪಶ್ಚಿಮ ವಿಭಾಗ, ಬೆಂಗಳೂರು ಇಲ್ಲಿಗೆ ಕಳುಹಿಸಿ ಮೊಬೈಲ್ಗ ಳ ಮಿರರ್ ಇಮೇಜ್ ಹಾಗೂ ಡೇಟಾ ಎಕ್ಟ್ರಾಕ್ಟ್ ಮಾಡಿಸಿ ವರದಿಯನ್ನು ಪಡೆದಿರುತ್ತದೆ. ಮಿರರ್ ಇಮೇಜ್ ಮಾಡಿಸಿದ ಮತ್ತು ಎಕ್ಟ್ರಾಕ್ಟ್ ಮಾಡಿದ ಡೇಟಾವನ್ನು		ನ್ಯಾಯಾಲಯದಿಂದ ಜಾಮಿನು ಪಡೆದಿರುತ್ತಾನೆ	

					ವರದಿಯೊಂದಿಗೆ ಪರಿಶೀಲನೆ ಮಾಡಿ ನೋಡಲಾಗಿ ಕಂಡುಬಂದಿರುವುದೇನೆಂದರೆ, ಐಶ್ವರ್ಯಗೌಡ @ ನವ್ಯಶ್ರೀ ರವರು ಬಳಸುತ್ತಿದ್ದ 5 ಫೋನ್ ಗಳ ಪೈಕಿ ಒಂದು iPhoტe 11 Pಡಿo ಒಚಿx ಮೊಬೈಲ್ ಇದ್ದು, ಇದರ ಮಾಲೀಕತ್ವದ ಹೆಸರು "oishತಿಚಿಡಿಥಿಚಿ goತಿಜಚಿ iPhoტe" ಎಂದು ಇದ್ದು, ಅದರ ಐಎಂಇಐ ನಂಬರ್ 353915108875669 ಇದ್ದು, ಅದರಲ್ಲಿ ಆಕೆ ಬಳಸುತ್ತಿದ್ದ 9113980634 ಮೊಬೈಲ್ ನಂಬರ್ ಇರುತ್ತದೆ. ಈ ಫೋನ್ ನಲ್ಲಿ ಐಶ್ವರ್ಯಗೌಡ @ ನವ್ಯಶ್ರೀ ರವರು ಖಾಸಗಿ ವ್ಯಕ್ತಿಗಳ ಕಾಲ್ ಡೇಟಾ ರೆಕರ್ಡ್ಸ್ (ಸಿಡಿಆರ್) ಗಳನ್ನು ಪಡೆದಿರುವುದು ಕಂಡುಬಂದಿರುತ್ತದೆ. ಕಾಲ್ ಡೇಟಾ ರೆಕರ್ಡ್ಸ್ (ಸಿಡಿಆರ್) ಗಳು ಒಬ್ಬ ವ್ಯಕ್ತಿಯ ವೈಯಕ್ತಿಕ ಮಾಹಿತಿ ಆಗಿದ್ದು, ಕೇವಲ ತನಿಖಾ ಸಂಸ್ಥೆಗಳು ಅಪರಾಧ ಕೃತ್ಯದ ತನಿಖಾ ಸಮಯದಲ್ಲಿ ಮಾತ್ರ ತನಿಖೆಗೆ ಪಡೆಯಬಹುದಾಗಿರುತ್ತದೆ. ಐಶ್ವರ್ಯಗೌಡ @ ನವ್ಯಶ್ರೀ ರವರು ಕಾನೂನು ಬಾಹಿರವಾಗಿ ತನ್ನ ಸಹಚರರೊಂದಿಗೆ ಸೇರಿಕೊಂಡು ದುರುದ್ದೇಶದಿಂದ ಯಾವುದೋ ತನಿಖಾ ಸಂಸ್ಥೆಯ ಅಧಿಕಾರಿಗಳನ್ನು ಬಳಸಿಕೊಂಡು, ಅವರಿಂದ ಅಪರಾಧಿಕ ನಂಬಿಕೆ ದ್ರೋಹವೆಸಗಿಸಿ, ಖಾಸಗಿ ವ್ಯಕ್ತಿಗಳ ಖಾಸಗಿತನಕ್ಕೆ ಧಕ್ಕೆ ಉಂಟು ಮಾಡಿ ತನ್ನ ಸ್ವಂತ ಲಾಭಕ್ಕೆ 2021 ನೇ ಸಾಲಿನಿಂದ 2023 ನೇ ಸಾಲಿನ ಅವಧಿಗೆ ಸಂಭಂಧಿಸಿದಂತೆ ಮೊಬೈಲ್ ನಂ. 7846048760, 9945359675, 9945492997 & 6363338663, ಗಳ ಕಾಲ್ ಡೇಟಾ ರೆಕರ್ಡ್ಸ್ (ಸಿಡಿಆರ್) ಗಳನ್ನು ದಿನಾಂಕ 27.07.2021 ರಿಂದ ದಿನಾಂಕ 10.03.2024 ರ ಅವಧಿಯ ನಡುವೆ ಪಡೆದುಕೊಂಡಿರುವುದು ಕಂಡುಬಂದಿರುತ್ತದೆ.			

					ಆದ್ದುದರಿಂದ ಐಶ್ವರ್ಯಗೌಡ @ ನವ್ಯಶ್ರೀ, ಆಕೆಯ ಸಹಚರರು ಹಾಗೂ ಆಕೆಗೆ ಸಹಕರಿಸಿದ ರ್ಯಾರಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರುತ್ತೇನೆ ಎಂದು ಕೊಟ್ಟ ದೂರು ಇತ್ಯಾದಿ.			
76.	ಶ್ರೀ. ಕಿಶೋರ್ ಪಿ., ಪೋಲೀಸ್ ಸಬ್ ಇನ್ಸ್ಪೆಕ್ಟರ್, ಚಂದ್ರಾಲೇಔಟ್	131/2025	118(1), 3(5), 115(2), 109, 351(3), 352, 351(2), 85 BNS & 3, 4 D.P. Act.	24-03-2025	ಪರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ;- ಈ ಕೆಳಗೆ ಸಹಿ ಮಾಡಿದ ನಾನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಾನು ನನ್ನ ತಂದೆ ತಾಯಿಯವರಿಗೆ ಏಕೈಕ ಪುತ್ರಿಯಾಗಿರುತ್ತೇನೆ. ನನಗೆ ಸಹೋದರ ಸಹೋದರಿಯರೂ ಯಾರು ಇರುವುದಿಲ್ಲ, ನನ್ನ ತಂದೆಯವರು ವ್ಯಾಪಾರಸ್ಥರಾಗಿರುತ್ತಾರೆ, ನನ್ನ ತಾಯಿಯವರು ಮನೆಯ ಗೃಹಿಣಿಯಾಗಿರುತ್ತಾರೆ. ಹಾಲಿ ನನಗೆ ಈಗ 27 ರ್ಷ ವಯಸ್ಕಳಾಗಿರುತ್ತೇನೆ. ಹೀಗಿರುವಾಗ ನನ್ನ ತಂದೆ ಮತ್ತು ತಾಯಿಯವರು ನನಗೆ ಮದುವೆಯಾಗಲು ಹೇಳಿದರು, ಅದಕ್ಕೆ ನಾನು ಒಪ್ಪಿ ಹುಡುಗನನ್ನು ನೋಡಲು ಹೇಳಿದೆನು. ಅದಕ್ಕೆ ನನ್ನ ತಂದೆ ತಾಯಿಯವರು ಬ್ರೋಕರ್ ಶ್ರೀ. ನಾಗರಾಜು ರವರಿಗೆ ಹುಡುಗನನ್ನು ನೋಡಲು ಹೇಳಿದ್ದರು. ಸದರಿ ಶ್ರೀ. ನಾಗರಾಜು ರವರು ಒಂದು ದಿನ ನಮ್ಮ ತಂದೆ ತಾಯಿಯವರ ಹತ್ತಿರ ಬಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ದಲ್ಲಿ ವಾಸವಾಗಿರುವ ಶ್ರೀಮತಿ. ಸರಸ್ವತಮ್ಮ ಮತ್ತು ಶ್ರೀ. ಪುಟ್ಟಚನ್ನಪ್ಪ ಇವರ ಮಗನಾದ ಶ್ರೀ. ಕಿಶೋರ್. ಪಿ ಇವರು ಪೋಲೀಸ್ ಸಬ್ ಇನ್ಸ್ಪೆಕ್ಟರ್ ಆಗಿ ಮೂಡಿಗೆರೆ ಯಲ್ಲಿ ರ್ತವ್ಯ ನರ್ವಹಿಸುತ್ತಿದ್ದಾರೆ. ಇವರನ್ನು ನೋಡಬಹುದು ಎಂದು ಸದರಿ ಶ್ರೀ. ನಾಗರಾಜು ರವರು ನನ್ನ ತಂದೆ ತಾಯಿಯವರಿಗೆ ತಿಳಿಸಿರುತ್ತಾರೆ. ನಂತರ ನನ್ನ ತಂದೆ ತಾಯಿಯವರು ನನಗೆ ಸದರಿ ಶ್ರೀ.	ಬಂಧನ ಮಾಡಿರುವುದಿಲ್ಲ		ಧರ್ಮಸ್ಥಳ ಪೊಲೀಸ್ ಠಾಣೆಗೆ ವರ್ಗಾವಣೆಯಾಗಿರುತ್ತದೆ. 28.03.2025

					ಕಿಶೋರ್. ಪಿ ರವರ ಬಗ್ಗೆ ಹೇಳಿದರು. ಅದಕ್ಕೆ ನಾನು ಅವರನ್ನು ನೋಡಲು ಒಪ್ಪಿದೆನು. ನಂತರ ಸದರಿ ಬ್ರೋಕರ್ ಶ್ರೀ. ನಾಗರಾಜು ರವರಿಗೆ ಮೇಲೆ ತಿಳಿಸಿದ ವಿಷಯವನ್ನು ತಿಳಿಸಲಾಗಿ ಶ್ರೀ. ನಾಗರಾಜು ರವರು ಶ್ರೀ. ಪುಟ್ಟಚನ್ನಪ್ಪ ಮತ್ತು ಕುಟುಂಬಕ್ಕೆ ಹೆಣ್ಣನ್ನು ನೋಡಲು ಹೇಳಿದರು. ಅದಕ್ಕೆ ಸದರಿ ಶ್ರೀ. ಪುಟ್ಟಚನ್ನಪ್ಪ ರವರು ನವೆಂಬರ್, 2023 ರ ಮೊದಲ ವಾರದಲ್ಲಿ ಶ್ರೀ. ಪುಟ್ಟಚನ್ನಪ್ಪ ಇವರು ನಮ್ಮ ಮನೆಗೆ ಬಂದು ನಮ್ಮ ಕುಟುಂಬಸ್ಥರ ಎದುರಿನಲ್ಲೇ ನನ್ನನ್ನು ನೋಡಿ ಒಪ್ಪಿ ನಮ್ಮ ಕುಟುಂಬವನ್ನು ಇನ್ನು ಒಂದು ವಾರದಲ್ಲಿ ಕರೆದುಕೊಂಡು ಬಂದು ಮತ್ತೊಮ್ಮೆ ನೋಡುತ್ತೇವೆ ಎಂದು ಹೇಳಿದರು, ನಂತರ ನವೆಂಬರ್ 2023 ರ ಎರಡನೇ ವಾರದಲ್ಲಿ ಬೆಳಿಗ್ಗೆ ಸುಮಾರು 10 ಗಂಟೆ ಸಮಯಕ್ಕೆ ನಮ್ಮ ಮನಗೆ ಶ್ರೀ. ಪುಟ್ಟಚನ್ನಪ್ಪ, ಅವರ ಧರ್ಮಪತ್ನಿ ಶ್ರೀಮತಿ. ಸರಸ್ವತಮ್ಮ ಮತ್ತು ಅವರ ಮಕ್ಕಳಾದ ಶ್ರೀ. ಕಿಶೋರ್. ಪಿ ಹಾಗೂ ಶ್ರೀ. ಚಂದನ್. ಪಿ ಇವರು ಬಂದು ನಮ್ಮ ಕುಟುಂಬಸ್ಥರ ಎದುರಿನಲ್ಲೇ ನನ್ನನ್ನು ನೋಡಿ ಶ್ರೀ. ಕಿಶೋರ್. ಪಿ ಇವರು ನಿಮ್ಮ ಮಗಳನ್ನು ಮದುವೆಯಾಗಲು ಒಪ್ಪಿರುತ್ತೇನೆ ಎಂದು ಹೇಳಿದರು. ಆಗ ನಮ್ಮ ಕುಟುಂಬಸ್ಥರು ಸಹ ನನ್ನನ್ನು ಕೇಳಿದರು, ನಾನು ಸದರಿ ಶ್ರೀ. ಕಿಶೋರ್. ಪಿ ಇವರನ್ನು ಮದುವೆಯಾಗಲು ಒಪ್ಪಿಕೊಂಡೆನು. ನಂತರ ಸದರಿ ಶ್ರೀ. ಪುಟ್ಟಚನ್ನಪ್ಪ ಮತ್ತು ಕುಟುಂಬದವರು ಹುಡುಗನಿಗೆ ಏನು ಕೊಡುತ್ತೀರಿ ಮತ್ತು ನಿಮ್ಮ ಮಗಳಿಗೆ ಏನು ಒಡವೆಗಳನ್ನು ಹಾಕುತ್ತೀರಿ ಎಂದು ಕೇಳಿದರು. ಅದಕ್ಕೆ ನಮ್ಮ ತಂದೆ ತಾಯಿಯವರು ನೀವು			

					ಕೇಳಿದ ಸ್ಥಳದಲ್ಲಿ ಮತ್ತು ಹೇಳಿದ ರೀತಿಯಲ್ಲಿ ಮದುವೆ ಮಾಡಿಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಅವರು, ನೋಡಿ ಮದುವೆ ಮಾಡುತ್ತೀರಿ, ಒಬ್ಬಳೇ ಮಗಳೆಂದು ಹೇಳುತ್ತೀರಿ ನಮ್ಮ ಮಗ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಆಗಿರುತ್ತಾನೆ ಏನಾದರೂ ಹಣ ಮತ್ತು ಒಡವೆಗಳನ್ನು ಕೊಡಲೇಬೇಕಲ್ಲವೇ ಎಂದು ಹೇಳಿದರು! ಅದಕ್ಕೆ ನಮ್ಮ ತಂದೆ ತಾಯಿಯವರು ಆಗಲಿ ನಮ್ಮ ಕೈಲಾದ ಮಟ್ಟಿಗೆ ಹಣ ಮತ್ತು ಒಡವೆಯನ್ನು ಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಅವರುಗಳು ಏನು ಕೊಡುತ್ತೀರಿ? ಈಗಲೇ ಹೇಳಿ ಎಂದು ಒತ್ತಾಯ ಮಾಡಿದರು ಆಗ ನಮ್ಮ ತಂದೆಯವರು ಹುಡುಗನಿಗೆ ಒಂದು ಬ್ರಾಸ್ಲೈಟ್, ಒಂದು ಉಂಗುರ ಮತ್ತು ಒಂದು ಚೈನ್ ಹಾಗೂ ಹುಡುಗನಿಗೆ ಸೂಟು ಬೂಟು ಮತ್ತು ಬಟ್ಟೆಗಳನ್ನು ತೆಗೆದುಕೊಳ್ಳಲು ರೂ.2,00,000/- (ರೂ. ಎರಡು ಲಕ್ಷ ಮಾತ್ರ) ಗಳನ್ನು ಕೊಡುತ್ತೇವೆ ಎಂದು ನಮ್ಮ ತಂದೆ ತಾಯಿಯವರು ಹೇಳಿದರು. ಅದಕ್ಕೆ ಶ್ರೀ. ಪುಟ್ಟಚನ್ನಪ್ಪ ಮತ್ತು ಕುಟುಂಬದವರು ಈ ಮೇಲೆ ಹೇಳಿದ ವಸ್ತು ಮತ್ತು ಹಣ ವರೋಪಚಾರಕ್ಕೆ ಮಾತ್ರವಾಯಿತು, ಮದುವೆ ರ್ಚಿಗೆಂದು ರೂ.25,00,000/- (ರೂ. ಇಪ್ಪತ್ತೈದು ಲಕ್ಷ ಮಾತ್ರ) ಗಳನ್ನು ಕೇಳಿದರು. ಅದಕ್ಕೆ ನಮ್ಮ ತಂದೆ ತಾಯಿಯವರು ರೂ.25,00,000/- (ರೂ. ಇಪ್ಪತ್ತೈದು ಲಕ್ಷ ಮಾತ್ರ) ಜಾಸ್ತಿಯಾಗುತ್ತದೆ ರೂ.10,00,000/- (ರೂ. ಹತ್ತು ಲಕ್ಷ ಮಾತ್ರ) ಕೊಡುತ್ತೇವೆಂದು ಹೇಳಿದರು, ಅದಕ್ಕೆ ಸದರಿ ಶ್ರೀ. ಪುಟ್ಟಚನ್ನಪ್ಪ, ಶ್ರೀಮತಿ. ಸರಸ್ವತಮ್ಮ, ಅವರ ಮೊದಲನೇ ಮಗನಾದ ಶ್ರೀ. ಕಿಶೋರ್. ಪಿ (ನನ್ನ ಪತಿ), ಹಾಗೂ ಎರಡನೇ ಮಗನಾದ ಶ್ರೀ. ಚಂದನ್. ಪಿ ಈ ನಾಲ್ವರು ಸದರಿ			

					ಮೇಲೆ ಹೇಳಿದ ವರದಕ್ಷಿಣೆ ಹಣವನ್ನು ತೆಗೆದುಕೊಳ್ಳಲು ಒಪ್ಪಿದರು. ನಂತರ ಸದರಿ ಶ್ರೀ. ಪುಟ್ಟಚನ್ನಪ್ಪ, ಶ್ರೀಮತಿ. ಸರಸ್ವತಮ್ಮ, ಅವರ ಮೊದಲನೇ ಮಗನಾದ ಶ್ರೀ. ಕಿಶೋರ್. ಪಿ (ನನ್ನ ಪತಿ), ಹಾಗೂ ಎರಡನೇ ಮಗನಾದ ಶ್ರೀ. ಚಂದನ್. ಪಿ ಇವರುಗಳು ನಮ್ಮ ತಂದೆಯವರಿಗೆ ಎಂಗೇಜ್ಮೆಂಟ್ ಯಾವಾಗ ಇಟ್ಟುಕೊಳ್ಳೋಣ ಮತ್ತು ಎಲ್ಲಿ ಇಟ್ಟುಕೊಳ್ಳೋಣ ಎಂದು ಕೇಳಿದರು. ಅದಕ್ಕೆ ತಮ್ಮ ತಂದೆ ತಾಯಿಯವರು ನೀವು ಹೇಳಿದ ಸ್ಥಳದಲ್ಲಿ ಮಾಡಿಕೊಡುತ್ತೇವೆಂದು ಹೇಳಿದರು. ಅದಕ್ಕೆ ಅವರುಗಳು ನೆಲಮಂಗಲ ದಲ್ಲಿರುವ ಸಿ.ಕೆ. ಪ್ಯಾಲೇಸ್ ನಲ್ಲಿ ಮಾಡುವಂತೆ ನಮ್ಮ ತಂದೆ ತಾಯಿಯವರಿಗೆ ಹೇಳಿದರು. ಅದಕ್ಕೆ ನಮ್ಮ ತಂದೆ ತಾಯಿಯವರು ಸಹ ಒಪ್ಪಿದರು. 3 ನಂತರ ನಮ್ಮ ತಂದೆ ತಾಯಿ ಮತ್ತು ಶ್ರೀ. ಪುಟ್ಟಚನ್ನಪ್ಪ ರವರ ಕುಟುಂಬ ಇಬ್ಬರೂ ಸೇರಿ ಮದುವೆ ಮಾಡಿಸುವ ಪುರೋಹಿತರ ಹತ್ತಿರ ಹೋಗಿ ಎಗೇಂಜ್ಮೆಂಟ್ ಮಾಡಲು ಒಂದು ಒಳ್ಳೇ ದಿನ ಮತ್ತು ಶುಭ ಸಮಯವನ್ನು ತಿಳಿಸಲು ಕೇಳಿಕೊಂಡೆವು. ಅದಕ್ಕೆ ಪುರೋಹಿತರು ದಿನಾಂಕ : 24-11-2023 ರ ಸಂಜೆ ಒಳ್ಳೆಯ ದಿನವಾಗಿದ್ದರಿಂದ ಆ ದಿನ ನೀವು ಎಗೇಂಜ್ಮೆಂಟ್ ಮಾಡಬಹುದು ಎಂದು ಹೇಳಿದರು. ಅದಕ್ಕೆ ಅವರ ಕುಟುಂಬಸ್ಥರು ಮತ್ತು ನಮ್ಮ ಕುಟುಂಬಸ್ಥರು ಸೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ದಲ್ಲಿರುವ ಸಿ.ಕೆ. ಪ್ಯಾಲೇಸ್ ನಲ್ಲಿ ನನ್ನ ಮತ್ತು ಶ್ರೀ. ಕಿಶೋರ್. ಪಿ ಇವರ ಎಗೇಂಜ್ಮೆಂಟ್ ಅನ್ನು ಅದ್ಧೂರಿಯಾಗಿ ನಮ್ಮ ಸ್ವಂತ ರಿಚ್ಚನಿಂದ ಮಾಡಿರುತ್ತಾರೆ. ಸದರಿ ಎಗೇಂಜ್ಮೆಂಟ್ನಲ್ಲಿ ಶ್ರೀ. ಪುಟ್ಟಚನ್ನಪ್ಪ ಮತ್ತು			

					ಅವರ ಕುಟುಂಬದವರ ಬೇಡಿಕೆಯಂತೆ ಹುಡುಗನಿಗೆ 18 ಗ್ರಾಂ ತೂಕವಿರುವ ಚಿನ್ನದ ಉಂಗುರವನ್ನು ಸದರಿ ಸಮಾರಂಭದಲ್ಲಿ ನಾನು ಹುಡುಗನ ಬೆರಳಿಗೆ ಹಾಕಿರುತ್ತೇನೆ. ನಂತರ, ಶ್ರೀ. ಪುಟ್ಟಚನ್ನಪ್ಪ, ಶ್ರೀಮತಿ. ಸರಸ್ವತಮ್ಮ, ಅವರ ಮೊದಲನೇ ಮಗನಾದ ಶ್ರೀ. ಕಿಶೋರ್. ಪಿ (ನನ್ನ ಪತಿ), ಹಾಗೂ ಎರಡನೇ ಮಗನಾದ ಶ್ರೀ. ಚಂದನ್. ಪಿ ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ನಾವು ಅವರನ್ನು ಪ್ರೀತಿ ಗೌರವದಿಂದ ಕಾಣುತ್ತಿದ್ದೆವು. ಒಂದು ದಿನ ಇದ್ದಕ್ಕಿಂದ್ದತೆ ಶ್ರೀ. ಕಿಶೋರ್. ಪಿ ರವರು ಪೋಲೀಸ್ ಡ್ರೆಸ್ನಲ್ಲಿಯೇ ನಮ್ಮ ಮನೆಗೆ ಬಂದರು. ನಾನು ಅವರನ್ನು ಪ್ರೀತಿಯಿಂದ ಬರಮಾಡಿಕೊಂಡು ಸತ್ಕರಿಸಿದೆವು. ಸ್ವಲ್ಪ ಸಮಯದ ನಂತರ ಶ್ರೀ. ಕಿಶೋರ್. ಪಿ ಇವರು ನನಗೆ ಒಂದು ಕಾರನ್ನು ಕೊಡಿಸಿಕೊಡಿ ಎಂದು ಕೇಳಿದರು. ಅದಕ್ಕೆ ನಾನು ಆಗುವುದಿಲ್ಲ ಎಂದು ಹೇಳಿದೆ, ನಂತರ ಸದರಿ ಶ್ರೀ. ಕಿಶೋರ್. ಪಿ ಈತನು ಮೂರು ನಾಲ್ಕು ದಿನ ನನ್ನೊಡನೆ ಬೇಜಾರು ಮಾಡಿಕೊಂಡು ನನ್ನನ್ನು ಮಾತನಾಡಿಸುತ್ತಿರಲಿಲ್ಲ. ನಂತರ ನಾನು ನನ್ನ ತಂದೆ ತಾಯಿಯವರಿಗೆ ಸದರಿ ವಿಚಾರವನ್ನು ತಿಳಿಸಲಾಗಿ ನನ್ನ ತಂದೆ ತಾಯಿಯವರು ನನಗೆ ಬೇಸರವಾಗಬಾರದೆಂದು ತಿಳಿದು ಸದರಿ ಶ್ರೀ. ಕಿಶೋರ್. ಪಿ ಇವರಿಗೆ ಕಾರು ಕೊಡಿಸಲು ಒಪ್ಪಿದರು. ಸದರಿ ವಿಷಯವನ್ನು ನಾನು ಶ್ರೀ. ಕಿಶೋರ್. ಪಿ ಇವರಿಗೆ ತಿಳಿಸಿದೆನು. ನಂತರ ಶ್ರೀ. ಕಿಶೋರ್. ಪಿ ಮತ್ತು ಅವರ ತಂದೆ, ತಾಯಿ ಹಾಗೂ ಅವರ ತಮ್ಮ ನಮ್ಮ ಮನೆಗೆ ಬಂದು ಯಾವ ಕಾರನ್ನು ಕೊಡಿಸುತ್ತೀರಿ? ಅದರ ಮೌಲ್ಯವೆಷ್ಟು? ಎಂದು ಕೇಳಿದರು ಅದಕ್ಕೆ ನಮ್ಮ			

					ತಂದೆ ತಾಯಿ ಮತ್ತು ನಾನು ಮತ್ತು ಅವರ ಕುಟುಂಬದವರು ಎಲ್ಲರೂ ಸೇರಿ ರಾಜಾಜಿನಗರ, ಡಾ. ರಾಜ್ಕುಮಾರ್ ರಸ್ತೆಯಲ್ಲಿರುವ ಬ್ಲೂ ಹ್ಯೂಂಡೈ ಶೋರೂಮ್ ಗೆ ಹೋದೆವು. ಅಲ್ಲಿ ಎಲ್ಲರೂ ಸೇರಿ ಹಲವಾರು ವಿಧದ ಕಾರುಗಳನ್ನು ನೋಡಿ ಕೊನೆಗೆ ಊಐUಓಆಂI ಅಖಇಖಿಂ ಕಾರನ್ನು ತೆಗೆದುಕೊಳ್ಳಲು ಶ್ರೀ. ಕಿಶೋರ್. ಪಿ ಇವರು ಒಪ್ಪಿದರು. ಅದಕ್ಕೆ ನಮ್ಮ ತಂದೆಯವರು ಶ್ರೀ. ಕಿಶೋರ್. ಪಿ ಇವರಿಗೆ ಕಾರು ಕೊಡಿಸಲು ಒಪ್ಪಿದರು. ಸದರಿ ಕಾರಿನ ಮೌಲ್ಯ ಸರಿಸುಮಾರು ರೂ.23,60,000/- (ರೂ. ಇಪ್ಪತ್ತಮೂರು ಲಕ್ಷದ ಅರವತ್ತು ಸಾವಿರ ಮಾತ್ರ) ಗಳು ಆಗಿರುತ್ತದೆ. ನಂತರ ಶ್ರೀ. ಕಿಶೋರ್. ಪಿ ಮತ್ತು ಆತನ ಕುಟುಂಬಸ್ಥರು ನಾನು ರ್ಯಾರಿ ನೌಕರಿಯಲ್ಲಿರುವುದರಿಂದ ಇಂತಹ ಬೃಹತ್ ಗಾತ್ರದ ಮೊತ್ತದ ಹಣದ ಕಾರನ್ನು ತೆಗೆದುಕೊಂಡರೆ ನನಗೆ ತೊಂದರೆಯಾಗುತ್ತದೆ ಎಂದು ಹೇಳಿದರು ಅದಕ್ಕೆ ನನ್ನ ತಂದೆಯವರ ಹೆಸರಿಗೆ ಕಾರನ್ನು ಒಂದೇ ಕಂತಿನಲ್ಲಿ ಹಣವನ್ನು ಕಟ್ಟಿ ಕಾರನ್ನು ಸದರಿ ಕುಟುಂಬದವರು ಮತ್ತು ನನ್ನ ಕುಟುಂಬದವರು ತಂದಿರುತ್ತೇವೆ. ಆ ಕಾರನ್ನು ಈಗಲೂ ಸಹ ನನ್ನ ಗಂಡನಾದ ಶ್ರೀ. ಕಿಶೋರ್. ಪಿ ರವರು ಉಪಯೋಗಿಸುತ್ತಿದ್ದಾರೆ. ಸದರಿ ವಾಹನದ ಸಂಖ್ಯೆ ಏಂ02 ಒU9934 ಆಗಿರುತ್ತದೆ. ನಂತರ ನಾನು ಮತ್ತು ನನ್ನ ಕುಟುಂಬದವರು ಮತ್ತು ಶ್ರೀ. ಕಿಶೋರ್. ಪಿ ಮತ್ತು ಅವರ ಕುಟುಂಬದವರು ಸೇರಿ ಮದುವೆಯನ್ನು ಯಾವಾಗ ಮಾಡಬೇಕೆಂದು ಮಾತುಕತೆ ಮಾಡಿ ದಿನಾಂಕ : 20-02-2024 ಮಂಗಳವಾರ ದಂದು ಸಂಜೆ ಆರತಕ್ಷತೆಯನ್ನು ಹಾಗೂ 21-02-2024 ರ ಬುಧವಾರ ಬೆಳಿಗ್ಗೆ			

					11.30 ರಿಂದ 12.00 ಗಂಟೆ ಒಳಗೆ ಸಲ್ಲುವ ಶುಭ ಲಗ್ನದಲ್ಲಿ ಮದುವೆ ಮಾಡಲು ಹಿರಿಯರೆಲ್ಲರೂ ತರ್ಮಾನಿಸಿದರು. ನಂತರ ಎರಡು ಕುಟುಂಬದವರು ಸೇರಿ ನಮ್ಮ ವಿವಾಹ ಮಹೋತ್ಸವವನ್ನು ಎಂ.ವಿ.ಎಂ ಕನ್ವೆಷನಲ್ ಹಾಲ್, ರೆ್ವ ನಂ. 191, ನೆಲಮಂಗಲ ಎಕ್ಸ್ಪ್ರೆಸ್ ವೇ, ಬೈರವೇಶ್ವರನಗರ, ಸೊಂಡೇಕೊಪ್ಪ ಕ್ರಾಸ್ ಹತ್ತಿರ, ಬೆಂಗಳೂರು-560023 ಇಲ್ಲಿ ನೆರವೇರಿಸಲು ಹಿರಿಯರೆಲ್ಲರೂ ತರ್ಮಾನಿಸಿದರು. ಅದರಂತೆ ನಮ್ಮ ತಂದೆಯವರು ಈ ಹಿಂದೆ ಮಾತನಾಡಿದಂತೆ ಹುಡುಗನಿಗೆ ಮತ್ತು ಕುಟುಂಬಸ್ಥರಿಗೆ ರೂ.10,00,000/- ಹಣವನ್ನು ಕೊಟ್ಟಿರುತ್ತಾರೆ. ನಂತರ ಹುಡುಗನಿಗೆ ಒಂದು ಬ್ರಾಸ್ಲೆಟ್ ಮತ್ತು ಒಂದು ಕೊರಳಿನ ಚೈನ್, ಅಂದಾಜು 130 ರಿಂದ 135 ಗ್ರಾಂ ತೂಕದ ಒಡವೆಗಳನ್ನು ಮದುವೆಯ ಸಮಯದಲ್ಲಿ ಕೊಟ್ಟಿರುತ್ತಾರೆ. ಮದುವೆ ಸಮಯದಲ್ಲಿ ನನಗೆ ಸುಮಾರು 850 ಗ್ರಾಂ ತೂಕದ ವಿವಿಧ ಬಗೆಯ ಚಿನ್ನದ ಆಭರಣಗಳನ್ನು ಮದುವೆಯ ಸಮಯದಲ್ಲಿ ನೀಡಿರುತ್ತಾರೆ. ಹಾಗೂ ಸುಮಾರು 3 ಕೆಜಿ ಗೂ ಹೆಚ್ಚಿನ ತೂಕದ ಬೆಳ್ಳಿಯ ವಸ್ತುಗಳನ್ನು ಕೊಟ್ಟಿರುತ್ತಾರೆ ಹಾಗೂ ಸುಮಾರು 50 ರಿಂದ 60 ಲಕ್ಷ ರೂಪಾಯಿಗಳು ರ್ಚು ಮಾಡಿ ಮದುವೆಯನ್ನು ವಿಜೃಂಭಣೆಯಿಂದ ಹಾಗೂ ಶ್ರೀ. ಕಿಶೋರ್. ಪಿ ಮತ್ತು ಅವರ ತಂದೆ ತಾಯಿ ಮತ್ತು ನನ್ನ ಮೈದುನರ ಇಚ್ಛೆಯಂತೆ ಯಾವುದಕ್ಕೂ ಕುಂದು ಕೊರತೆಬಾರದಂತೆ ಅದ್ಧೂರಿಯಾಗಿ ಗುರು ಹಿರಿಯರ ಸಮ್ಮುಖದಲ್ಲಿ ನಮ್ಮ ಮದುವೆಯನ್ನು ಮಾಡಿರುತ್ತಾರೆ. ಸದರಿ ಶ್ರೀ. ಕಿಶೋರ್. ಪಿ ಇವರು ಮದುವೆಯಾಗುವ ಸಂರ್ಭದಲ್ಲಿ ಮೂಡಿಗೆರೆ ಪೋಲೀಸ್ ಠಾಣೆಯಲ್ಲಿ			

					ಪೋಲೀಸ್ ಸಬ್ ಇನ್ಸ್ಪೆಕ್ಟರ್ ಆಗಿ ರ್ತವ್ಯ ನರ್ವಹಿಸುತ್ತಿದ್ದರು. ನಾನು ಆಗ ನನ್ನ ಗಂಡನ ಜೊತೆ ಹತ್ತರಿಂದ ಹದಿನೈದು ದಿನ ಅನ್ಯೂನ್ಯವಾಗಿ ಇಬ್ಬರೂ ಇದ್ದೆವು. ನಂತರ ನನ್ನ ಗಂಡನು ಮೂಡಿಗೆರೆ ಪೋಲೀಸ್ ಠಾಣೆಯಲ್ಲಿ ।ಓಅಔಒಇ ಇರುವುದಿಲ್ಲ. ಬೇರೆ ಯಾವುದಾದರೂ ಪೋಲೀಸ್ ಠಾಣೆಗೆ ರ್ಾವಣೆ ಮಾಡಿಸಿಕೊಂಡು ಹೋಗೋಣವೆಂದು ಹೇಳುತ್ತಿದ್ದರು. ಅದಕ್ಕೆ ನಾನು ನಿಮಗೆ ಹೇಗೆ ಅನ್ನಿಸುತ್ತಿದೆಯೋ ಹಾಗೆಯೇ ಮಾಡಿ ಎಂದು ಹೇಳಿದೆನು. ಅದಕ್ಕೆ ನನ್ನ ಗಂಡನು ರ್ಾವಣೆ ಮಾಡಿಸಬೇಕೆಂದರೆ 8 ರಿಂದ 10 ಲಕ್ಷ ಲಂಚವನ್ನು ಎಸ್.ಪಿ ಮತ್ತು ಮೇಲಿನಾಧಿಕಾರಿಗಳಿಗೆ ಲಂಚ ಕೊಡಬೇಕು ಅದಕ್ಕೆ ನಿಮ್ಮ ತಂದೆಯಿಂದ ರೂ.10,00,000/- (ರೂ. ಹತ್ತು ಲಕ್ಷ ಮಾತ್ರ) ಗಳನ್ನು ತೆಗೆದುಕೊಂಡು ಬಾ ಎಂದು ನನಗೆ ಹೇಳಿದರು. ಅದಕ್ಕೆ ನಾನು ನಮ್ಮ ತಂದೆಯವರ ಬಳಿ ಹಣವಿಲ್ಲ, ಈಗಾಗಲೇ ಮದುವೆಗೆ ಮತ್ತು ಕಾರಿಗೆ ರೂ.80,00,000/- (ರೂ. ಎಂಭತ್ತು ಲಕ್ಷ ಮಾತ್ರ) ರಿಂದ ರೂ.90,00,000/- (ರೂ. ತೊಂಭತ್ತು ಲಕ್ಷ ಮಾತ್ರ) ಹಣವನ್ನು ರ್ಚು ಮಾಡಿರುತ್ತಾರೆ. ಹಾಗೂ ನನಗೆ ಮತ್ತು ನಿಮಗೆ ಈಗಾಗಲೇ ರೂ.1,00,00,000/- (ರೂ. ಒಂದು ಕೋಟಿ ಮಾತ್ರ) ಮೌಲ್ಯದ ಬೆಳ್ಳಿ ಮತ್ತು ಬಂಗಾರದ ಒಡವೆಗಳನ್ನು ಮದುವೆ ಸಮಯದಲ್ಲಿ ಕೊಟ್ಟಿರುತ್ತಾರೆ, ಮತ್ತೆ ರೂ.10,00,000/- (ರೂ. ಹತ್ತು ಲಕ್ಷ ಮಾತ್ರ) ಗಳನ್ನು ಕೇಳಿದರೆ ನಮ್ಮ ತಂದೆ ತಾಯಿಯವರು ಎಲ್ಲಿಂದ ತಂದುಕೊಡುತ್ತಾರೆ ಎಂದು ಹೇಳಿದೆ, ಅದಕ್ಕೆ ನನ್ನ ಗಂಡನು ನನ್ನನ್ನು ಸೂಳೆಮುಂಡೆ, ಒಳ್ಳೆ			

					ಎಮ್ಮೆ ತರ ಇದಿಯಲ್ಲೇ, ನೀನು ಒಬ್ಬಳೇ ಮಗಳು ನಿನ್ನ ಅಪ್ಪನಿಗೆ ನಿನಗೆ ಹಿಂದೆ ಮುಂದೆ ಯಾವ ನನ್ನ ಮಗನು ಇಲ್ಲ, ನಿನ್ನನ್ನು ಗನ್ ತೆಗೆದುಕೊಂಡು ಶೂಟ್ ಮಾಡಿದರು ಕೇಳುವವರೂ ಯಾರೂ ಇಲ್ಲ, ಇನ್ನು ಅನೇಕ ಕೇಳಬಾರದ ಅವಾಚ್ಯ ಶಬ್ದಗಳಿಂದ ನನಗೆ, ನನ್ನ ತಂದೆಯವರಿಗೆ ಹಾಗೂ ನನ್ನ ತಾಯಿಯವರಿಗೆ ಬೈದು ಗನ್ ಅನ್ನು ನನ್ನ ತಲೆಗೆ ಇಟ್ಟು ಸಾಯಿಸುತ್ತೇನೆಂದು ಎದುರಿಸಿದರು. ನಾನು ಸಮಾಧಾನ ಮಾಡಿಕೊಂಡು ಮತ್ತು ಮಾನ ರ್ಯಾದೆಗೆ ಅಂಜಿಕೊಂಡು ನನ್ನ ಗಂಡನ ಜೊತೆಯಲ್ಲೇ ವಾಸಮಾಡಿಕೊಂಡಿದ್ದೆನು. ನನ್ನ ಮತ್ತು ನನ್ನ ಗಂಡನ ಜೊತೆಗೆ ನನ್ನ ಅತ್ತೆ ಮತ್ತು ಮಾವ ಹಾಗೂ ಮೈದುನ ಶ್ರೀ. ಚಂದನ್. ಪಿ ಇವರುಗಳು ನಮ್ಮ ಜೊತೆಯಲ್ಲಿದ್ದರು. ನನ್ನ ಗಂಡನು ಇಷ್ಟೆಲ್ಲ ತೊಂದರೆ ಕೊಡುತ್ತಿದ್ದರೂ ಸಹ ನನ್ನ ಅತ್ತೆ ಮಾವ ಮತ್ತು ಮೈದುನ ಇವರುಗಳು ನನ್ನ ಗಂಡನಿಗೆ ಇವಳನ್ನು ಬಿಡಬೇಡ ಅವರ ಅಪ್ಪನಿಗೆ ಹೇಳಿಸಿ ದುಡ್ಡನ್ನು ತರಿಸಿಕೋ, ಇಲ್ಲದಿದ್ದರೆ ಇವಳನ್ನು ಸಾಯಿಸಿ ಎಂದು ಏರು ಧ್ವನಿಯಲ್ಲಿ ಬಾಯಿಗೆ ಬಂದಂತೆ ನನಗೆ ಬೈದು ನನ್ನ ಗಂಡನಿಗೆ ಪ್ರಚೋದನೆ ಕೊಡುತ್ತಿದ್ದರು. ನಂತರ ಇದೇ ರೀತಿಯಾಗಿ ಪ್ರತಿ ದಿನ ಮದುವೆಯಾದಾಗಿನಿಂದಲೂ ಕೊಡಬಾರದ ತೊಂದರೆ ಕೊಟ್ಟು ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಕೊಡುತ್ತಿದ್ದರು. ಆದರೂ ಸಹ ನಾನು ಈ ವಿಚಾರವನ್ನು ತಂದೆ ತಾಯಿಯವರಿಗೆ ಮತ್ತು ಬಂಧು ಬಳಗದವರಿಗೆ ಹೇಳಿದರೆ ರ್ಯಾದೆ ಹೋಗುತ್ತದೆ ಎಂದು ನಾನು ಅಂಜಿ ಇಲ್ಲಿಯವರೆವಿಗೂ ಸಮಾಧಾನದಿಂದ ಇದ್ದೇನು.			

					ನಂತರ ನನ್ನ ಗಂಡನಿಗೆ ಮೂಡಿಗೆರೆಯಿಂದ ರ್ಸ್ವಳಕ್ಕೆ ಜುಲೈ ತಿಂಗಳಿನಲ್ಲಿ ರ್ಾವಣೆಯಾಗಿರುತ್ತದೆ. ನಂತರ ನನ್ನ ಗಂಡನಾದ ಶ್ರೀ. ಕಿಶೋರ್. ಪಿ ಇವರು ರ್ಸ್ವಳದಲ್ಲಿ ಮನೆ ಮಾಡಲು ಅಡ್ವಾನ್ಸ್ ಹಣ ಬೇಕು ಮತ್ತು ಮನೆಗೆ ಎಲ್ಲಾ ಪೀಠೋಪಕರಣಗಳನ್ನು ಕೊಳ್ಳಲು ಮತ್ತು ಮನೆಯ ಸಾಮಾಗ್ರಿಗಳನ್ನು ಕೊಳ್ಳಲು ರೂ.2,00,000/- ಗಳನ್ನು ನಿಮ್ಮ ತಂದೆ ತಾಯಿಯವರ ಹತ್ತಿರ ತೆಗೆದುಕೊಂಡು ಬಾ ಎಂದು ಹೇಳಿದೆನು. ಅದಕ್ಕೆ ನಾನು ಒಪ್ಪದೇ ಇದ್ದಾಗ ನನ್ನ ಗಂಡನು ವರದಕ್ಷಿಣೆ ವಿಚಾರವಾಗಿ ಪ್ರತಿ ದಿವಸವು ಒಂದಲ್ಲ ಒಂದು ರೀತಿ ತೊಂದರೆ ಕೊಟ್ಟು ದೈಹಿಕವಾಗಿ ಹಲ್ಲೆ ಮಾಡಿ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಿದ್ದನು. ಈ ರೀತಿಯ ರ್ತನೆ ಸುಮಾರು 2024 ರ ಆಗಸ್ಟ್ ತಿಂಗಳಿನಿಂದ ನಡೆಯುತ್ತಿದ್ದು ನಾನು ಒಂದಲ್ಲ ಒಂದು ದಿನ ಸರಿ ಹೋಗಬಹುದೆಂದು ತಿಳಿದು ಯಾರಿಗೂ ಹೇಳದೆ ಸಹಿಸಿಕೊಂಡು ಸುಮ್ಮನಿದ್ದೆನು. ಮತ್ತು ಸದರಿ ವಿಷಯವನ್ನು ನೀನು ಯಾರಿಗಾದರೂ ಹೇಳಿದರೆ ನಾವು ಎಲ್ಲರೂ ಸೇರಿ ನಿನ್ನನ್ನು ಸಾಯಿಸಿ ಯಾರಿಗೂ ಗೊತ್ತಾಗದ ಹಾಗೇ ಮುಚ್ಚಿಹಾಕುತ್ತೇವೆ, ನಾನು ಪೋಲೀಸ್ ಸಬ್ ಇನ್ಸ್ಪೆಕ್ಟರ್, ನಾನು ಏನೂ ಮಾಡಿದರೂ ನನ್ನನ್ನು ಕೇಳುವವರಿಲ್ಲ ಮತ್ತು ಹೇಳುವವರಿಲ್ಲ ಎಂದು ಹೇಳಿ ನನಗೆ ನನ್ನ ಗಂಡ, ನನ್ನ ಮಾವ, ನನ್ನ ಅತ್ತೆ, ನನ್ನ ಮೈದುನ ಸೇರಿ ಹಲವಾರು ಬಾರಿ ನನಗೆ ಬಾಯಿಗೆ ಬಂದಂತೆ ಬೈದು ನನಗೆ ನನ್ನ ಗಂಡನು ಹಾಕಿಕೊಂಡಿದ್ದ ಪೋಲೀಸ್ ಬೆಲ್ಟಿನಿಂದ ಹೊಡೆದಿರುತ್ತಾರೆ. ನನ್ನ ಅತ್ತೆ ನನ್ನ ತಲೆಯ ಕೂದಲನ್ನು ಹಿಡಿದು ಬಗ್ಗಿಸಿ ಬೆನ್ನಿಗೆ ಬಲವಾಗಿ ಗುದ್ದಿರುತ್ತಾರೆ ಹಾಗೂ ಅಡುಗೆ			

					ಮನೆಯಲ್ಲಿರುವ ಲಟ್ಟಣಿಗೆಯನ್ನು ತಂದು ನನಗೆ ಮನಸೋಇಚ್ಛೆ ದೇಹದ ಪ್ರತಿಯೊಂದು ಭಾಗಕ್ಕೂ ಹೊಡೆದಿರುತ್ತಾರೆ. ಹಾಗೂ ಸದರಿ ಲಟ್ಟಣಿಗೆಯನ್ನು ತೆಗೆದುಕೊಂಡು ನನ್ನ ಗುಪ್ತಾಂಗಕ್ಕೆ ಇಟ್ಟಿರುತ್ತಾಳೆ. ನನ್ನ ಮಾವನು ನನಗೆ ಸೂಳೆಮುಂಡೆ, ನಿನ್ನ ಅಪ್ಪನ ಹತ್ತಿರ ಪ್ರತಿ ತಿಂಗಳು ರೂ.50,000/- ಹಾಕಿಸಿಕೋ, ನೀನು ನಿನ್ನ ಅಪ್ಪನಿಗೆ ಒಬ್ಬಳೇ ಮಗಳು ನಿಮ್ಮ ಹತ್ತಿರ ಕೋಟಿಗಟ್ಟಲೆ ಹಣವಿದೆ ಹಾಗೂ ನಿಮ್ಮ ತಂದೆ ತಿಂಗಳಿಗೆ ಲಕ್ಷಾಂತರ ವ್ಯಾಪಾರ ವ್ಯವಹಾರ ಮಾಡುತ್ತಾರೆ, ಸ್ವಂತ ಮನೆಯಿದೆ, ಜಮೀನಿದೆ, ನಿಮ್ಮ ತಂದೆ ತಾಯಿಯವರು ಸತ್ತರೆ ಅದಕ್ಕೆ ವಾರಸುದಾರಳೂ ನೀನೇ ಆಗಿರುತ್ತೀಯ ಅದಕ್ಕೆ ನೀನು ನಿನ್ನ ತಂದೆ ತಾಯಿಯವರಿಗೆ ಹೇಳಿ ಮನೆ ಮತ್ತು ಜಮೀನನ್ನು ನಿನ್ನ ಹೆಸರಿಗೆ ಬರೆಸಿಕೋ ಎಂದು ನನಗೆ ಹಲವಾರು ಬಾರಿ ಒತ್ತಾಯಿಸಿರುತ್ತಾರೆ ಹಾಗೂ ಹೊಡೆದಿರುತ್ತಾರೆ. ಅವರ ಹೊಡೆತಕ್ಕೆ ನನಗೆ ಬಹಳ ತೊಂದರೆಯಾಗಿ ಎದ್ದು ಓಡಾಡಲು ಕಷ್ಟವಾಗುತ್ತಿದ್ದಾಗ, ನನ್ನನ್ನು ನನ್ನ ಮಾವ ಮತ್ತು ನನ್ನ ಗಂಡ ರತ್ನಸ್ವಳದಲ್ಲಿರುವ ಎಸ್.ಡಿ.ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ. ನಾವು ಕೊಟ್ಟಂತಹ ತೊಂದರೆಯನ್ನು ನೀನು ಡಾಕ್ಟ್ರ ಬಳಿ ಹೇಳಬಾರದು, ನಾನೇ ಜಾರಿ ಬಿದ್ದೆ ಎಂದು ಹೇಳಿದರೆ ನಿನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆಂದು ಹೆದರಿಸಿದರು. ಅದಕ್ಕೆ ನಾನು ಒಪ್ಪಿ ಅವರು ಹೇಳಿಕೊಟ್ಟ ಹಾಗೇ ನಾನು ವೈದ್ಯಾಧಿಕಾರಿಗಳ ಮುಂದೆ ಹೇಳಿರುತ್ತೇನೆ. ಇದೇ ರೀತಿಯಾಗಿ ರ್ನಾಲ್ಕು ಬಾರಿ ನನ್ನ ಗಂಡನಾದ ಶ್ರೀ. ಕಿಶೋರ್. ಪಿ, ನನ್ನ ಮಾವನಾದ ಶ್ರೀ.			

					ಪುಟ್ಟಚನ್ನಪ್ಪ, ನನ್ನ ಅತ್ತೆಯಾದ ಶ್ರೀಮತಿ. ಸರಸ್ವತಮ್ಮ ಮತ್ತು ನನ್ನ ಮೈದುನನಾದ ಶ್ರೀ. ಚಂದನ್. ಪಿ ರವರುಗಳು ನನಗೆ ತೊಂದರೆ ಕೊಟ್ಟಿರುತ್ತಾರೆ. ಇದೇ ರೀತಿಯಾಗಿ ಸುಮಾರು ತಿಂಗಳುಗಳಿಂದ ನನಗೆ ಹಲವಾರು ಬಾರಿ ದೈಹಿಕವಾಗಿ ಹೊಡೆದು, ನನ್ನ ಕತ್ತನ್ನು ಹಿಸುಕಿ ಪ್ರಾಣ ತೆಗೆಯಲು ಪ್ರಯತ್ನಿಸಿರುತ್ತಾರೆ, ಆದರೂ ಸಹ ನಾನು ಇಷ್ಟೆಲ್ಲಾ ತೊಂದರೆಗಳನ್ನು ಕೊಟ್ಟಿದ್ದರೂ ಸಹ ಸಹಿಸಿಕೊಂಡು ಸುಮ್ಮನಿದ್ದೆ ಹಾಗೂ 2025 ರ ಫೆಬ್ರವರಿ ತಿಂಗಳಿನಲ್ಲಿ ನನ್ನ ಗಂಡ, ನನ್ನ ಮಾವ, ನನ್ನ ಅತ್ತೆ, ನನ್ನ ಮೈದುನ ನಾಲ್ವರೂ ಸೇರಿಕೊಂಡು ನನ್ನ ಮೇಲೆ ಹಲ್ಲೆ ಮಾಡಿ ನನ್ನ ಮೊಬೈಲನ್ನು ಕಿತ್ತುಕೊಂಡಿರುತ್ತಾರೆ. ನನಗೆ ಇವರ ಹಿಂಸೆ ತಾಳಲಾರದೆ ಮನೆಯಲ್ಲಿರುವ ಒಂದು ರೂಮಿಗೆ ಹೋಗಿ ಬಾಗಿಲನ್ನು ಹಾಕಿಕೊಂಡು ರೂಮಿನಲ್ಲಿರುವ ಫ್ಯಾನಿಗೆ ನೇಣು ಹಾಕಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಸದರಿ ಮೇಲೆ ಹೇಳಿದ ನಾಲ್ವರೂ ಸೇರಿ ರೂಮಿನ ಬಾಗಿಲನ್ನು ಹೊಡೆದು ಒಳಗೆ ಬಂದು ನನ್ನನ್ನು ನಾಲ್ವರೂ ಸೇರಿ ಬಾಯಿಗೆ ಬಂದಂತೆ ಬೈದು, ಹೊಡೆದು ಸೂಳೆಮುಂಡೆ ನೀನು ನೇಣು ಹಾಕಿಕೊಂಡು ನಮ್ಮನ್ನ ಜೈಲಿಗೆ ಹಾಕಿಸಬೇಕೆಂದು ಇದ್ದೀಯ ಎಂದು ಬೈದು ಹಲ್ಲೆ ಮಾಡಿದರು. ನಾನು ಈ ವಿಚಾರವನ್ನು ಯಾರಿಗಾದರೂ ಹೇಳಬೇಕೆಂದರೆ ಫೋನ್ ಇರಲಿಲ್ಲ. ಅಂದಿನಿಂದ ನನ್ನ ಗಂಡನು ಗೃಹ ಬಂಧನದಲ್ಲಿ ಇರಿಸಿ, ಎಲ್ಲಾ ಕಿಟಕಿ ಮತ್ತು ಬಾಗಿಲನ್ನು ಮುಚ್ಚಿ ಕೊಡಬಾರದ ಚಿತ್ರಹಿಂಸೆ ದಿನಾಲೂ ಕೊಡುತ್ತಿದ್ದರು. ದಿನಾಂಕ : 21-03-2025 ರಂದು ರಾತ್ರಿ 9.00 ಗಂಟೆಯಿಂದ ಮಧ್ಯರಾತ್ರಿ 1.00 ಗಂಟೆವರೆವಿಗೂ ನನ್ನ			

					ಗಂಡನಾದ ಶ್ರೀ. ಕಿಶೋರ್. ಪಿ ಇವರು ನನಗೆ ಬಾಯಿಗೆ ಬಂದಂತೆ ಬೈದು ಅವರ ಧರಿಸುವ ಪೋಲೀಸ್ ಬೆಲ್ಟ್ನಿಂದ ದೇಹದ ಪ್ರತಿಯೊಂದು ಭಾಗಕ್ಕೂ ಹೊಡೆದು, ನನ್ನ ತಲೆಗೆ ಚಪಾತಿ ಮಾಡುವ ಲಟ್ಟಣಿಗೆಯಿಂದ ಬಲವಾಗಿ ಹೊಡೆದಿದ್ದಕ್ಕೆ ನನ್ನ ಹಲ್ಲು ಮತ್ತು ತುಟಿಗೆ ತೀವ್ರವಾದ ಗಾಯವಾಗಿ ಮತ್ತು ಕೆನ್ನೆಗೆ ಬಲವಾಗಿ ಹೊಡೆದಿದ್ದಕ್ಕೆ ಕಿವಿಯಲ್ಲಿ ರಕ್ತ ಸ್ರಾವವಾಗಿರುತ್ತದೆ. ತದನಂತರ ನನ್ನನ್ನು ಮನೆಯ ಹಾಲ್ನಿಂದ ಧರಧರನೆ ಎಳೆದುಕೊಂಡು ಹೋಗಿ ರೂಮಿನಲ್ಲಿ ನನ್ನನ್ನು ಕೆಡವಿ ತಲೆ ದಿಂಬನ್ನು ತೆಗೆದುಕೊಂಡು ನನ್ನ ಎದೆಯ ಮೇಲೆ ಕುಳಿತು ನನ್ನ ಮುಖಕ್ಕೆ ಬಲವಾಗಿ ಒತ್ತಿ ಉಸಿರುಗಟ್ಟಿಸಿ ಕೊಲ್ಲಲು ಪ್ರಯತ್ನಿಸಿರುತ್ತಾನೆ. ಆಗ ನಾನು ನನ್ನ ಗಂಡನನ್ನು ಕೈಯಿಂದ ತಳ್ಳಿದೆ. ಆಗ ಎದ್ದುನಿಂತು ನನ್ನ ಕೂದಲನ್ನು ಹಿಡಿದು ಬಗ್ಗಿಸಿ ನನ್ನ ಬೆನ್ನಿಗೆ ಮುಷ್ಠಿ ಮಾಡಿ ಬಲವಾಗಿ ಹೊಡೆದಿರುತ್ತಾನೆ. ಹಾಗೂ ನನ್ನನ್ನು ಸಾಯಿಸಲು ಪ್ರಯತ್ನಿಸಿರುತ್ತಾನೆ. ಈ ವಿಚಾರ ಅಕ್ಕ ಪಕ್ಕದವರಿಗೆ ಗೊತ್ತಾಗಿ ಯಾರೋ ಪುಣ್ಯಾತ್ಮರು ನಮ್ಮ ತಾಯಿಯವರಿಗೆ ದಿನಾಂಕ : 22-03-2025 ರಂದು ನಿಮ್ಮ ಮಗಳಿಗೆ ನಿಮ್ಮ ಅಳಿಯ ಶ್ರೀ. ಕಿಶೋರ್. ಪಿ ರವರು ಕಳೆದ ರಾತ್ರಿ ನಿಮ್ಮ ಮಗಳಿಗೆ ರಾತ್ರಿ 9.00 ರಿಂದ ಮಧ್ಯರಾತ್ರಿ 1.00 ರವರೆಗೆ ಕೊಡಬಾರದ ಚಿತ್ರಹಿಂಸೆಯನ್ನು ಕೊಟ್ಟಿರುತ್ತಾನೆ, ನೀವು ಬರದೆ ಇದ್ದರೆ ನಿಮ್ಮ ಮಗಳು ಜೀವಂತ ಉಳಿಯುವುದು ಕಷ್ಟ ಎಂದು ಮಾಹಿತಿ ಕೊಟ್ಟಿದ್ದರಿಂದ ನಮ್ಮ ತಂದೆ ಮತ್ತು ತಾಯಿಯವರು, ಮತ್ತು ನನ್ನ ದೊಡ್ಡಮ್ಮನವರ ಮಗನಾದ ಶ್ರೀ. ಅಕ್ಷಯಗೌಡ ಹಾಗೂ ನನ್ನ ಚಿಕ್ಕಜ್ಜಿಯ ಮಗನಾದ ಶ್ರೀ. ಚೇತನ್ಕುಮಾರ್			

					ರವರು ದಿನಾಂಕ : 23-03-2025 ರಂದು ಮಧ್ಯಾಹ್ನ 12.30 ಕ್ಕೆ ರ್ಸ್ಥಳಕ್ಕೆ ಬಂದು ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಬಂದಿರುತ್ತಾರೆ. ಆ ಸಮಯದಲ್ಲಿ ನನಗೆ ಆರೋಗ್ಯ ತೀವ್ರ ಹದಗೆಟ್ಟಿದ್ದು, ದೇಹದ ಹಲವಾರು ಭಾಗಗಳಿಗೆ ಗಾಯಗಳಾಗಿದ್ದು ಉಸಿರಾಡಲು ತುಂಬಾ ತೊಂದರೆಯಾಗುತ್ತಿತ್ತು. ಆಗ ನಮ್ಮ ತಂದೆ ತಾಯಿಯವರು ಕೆ.ಸಿ. ಜನರಲ್ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿರುತ್ತಾರೆ. ತದನಂತರ ಅಲ್ಲಿನ ವೈದ್ಯರು ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಇಓಖಿ/ಔಡಿhಣಂ ಹಾಗೂ ಶಸ್ತ್ರ ವೈದ್ಯರಿಗೆ (Suಡಿgeoಟಿ) ಗೆ ತೋರಿಸಲು ಹೇಳಿರುತ್ತಾರೆ. ನಂತರ ನನ್ನನ್ನು ತಂದೆ ತಾಯಿಯವರು ಇಂದು ದಿನಾಂಕ : 24-03-2025 ರಂದು ಗುರುಶ್ರೀ ರ್ಸಿಂಗ್ ಹೋಮ್ಸ್ ಕರೆದುಕೊಂಡು ಹೋದರು. ಅಲ್ಲಿನ ವೈದ್ಯರು ನನ್ನನ್ನು ಪರೀಕ್ಷಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಲು ಸೂಚಿಸಿರುತ್ತಾರೆ. ಅವರ ಸಲಹೆಯಂತೆ ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಆದ ಕಾರಣ ಮಾನ್ಯ ದಯಾ ಪ್ರಭುಗಳಾದ ತಾವುಗಳು ನನ್ನ ಗಂಡನಾದ ಶ್ರೀ. ಕಿಶೋರ್. ಪಿ, ನನ್ನ ಮಾವನಾದ ಶ್ರೀ. ಪುಟ್ಟಚನ್ನಪ್ಪ, ನನ್ನ ಅತ್ತೆಯವರಾದ ಶ್ರೀಮತಿ. ಸರಸ್ವತಮ್ಮ ಹಾಗೂ ನನ್ನ ಮೈದುನನಾದ ಶ್ರೀ. ಚಂದನ್. ಪಿ ಇವರುಗಳು ನನಗೆ ವರದಕ್ಷಿಣೆ ತರಲು ಒತ್ತಾಯಿಸಿ, ಮಾನಸಿಕ ಮತ್ತು ದೈಹಿಕವಾಗಿ ಹಿಂಸಿಸಿ, ನನ್ನನ್ನು ಕೊಲ್ಲಲು ಪ್ರಯತ್ನಿಸಿರುತ್ತಾರೆ, ಆದ ಕಾರಣ ದಯವಿಟ್ಟು ತಾವುಗಳು ಅವರುಗಳ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೊಟ್ಟ ದೂರು ಇತ್ಯಾದಿ,			

77.	ಮಾರುತಿ ಗೋಂಡಿ, 32 ವರ್ಷ, ಸಿಹೆಚ್‌ಸಿ. 12197 (ಹೆಚ್.ಎಸ್. ಆರ್ ಲೇಔಟ್ ಸಂಚಾರ ಪೊಲೀಸ್ ಠಾಣೆ) #73, ಎಈಸಿಎಸ್ ಲೇಔಟ್ ಮುಖ್ಯರಸ್ತೆ, ಪ್ರಭು ಲೇಔಟ್, ಕೂಡ್ಲುಗೇಟ್, ಬೆಂಗಳೂರು ನಗರ	ಪರಪ್ಪನ ಅಗ್ರಹಾರ ಮೊ.ಸಂ .133/2025	ಕಲಂ.69 ಬಿಎನ್ಎಸ್	05-05-2025	ಈ ಕೇಸಿನ ಸಂಕ್ಷಿಪ್ತ ಸಾರಾಂಶವೆನೆಂದರೆ ಪಿರ್ಯಾದುದಾರರು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ಬ್ಲಾಸಂ ಆಸ್ಪತ್ರೆಯಲ್ಲಿ ಕೆಲಸ ಮಾಡಿಕೋಂಡಿರುತ್ತಾರೆ. ಹೀಗಿರುವಾಗ ಮಾರುತಿ ಎಂಬುವವರು ಆಗಾಗ ಆಸ್ಪತ್ರೆಗೆ ಬಂದು ಪಿರ್ಯಾದುದಾರರ ಜೊತೆ ಸಲುಗೆಯಿಂದ ಮಾತನಾಡಿ ಪರಿಚಯ ಮಾಡಿಕೊಂಡಿ ನಂತರ ಮೊಬೈಲ್ ನಂಬರ ತೆಗೆದುಕೋಂಡು ಪಿರ್ಯಾದುದಾರರ ಜೊತೆ ಮಾತನಾಡಿರುತ್ತಾರೆ.ನಂತರ ಮಾರುತಿಯವರು ಪಿರ್ಯಾದುದಾರರನ್ನು 2018 ಮೇ ನಿಂದ ಪ್ರೀತಿಸುವುದಾಗಿ ತಿಳೀಸಿರುತ್ತಾರೆ . 2017 ಡಿಸೆಂಬರ್ ನಲ್ಲಿ ಪಿರ್ಯಾದುದಾರರನ್ನು ಮದುವೆ ಮಾಡಿಕೊಟ್ಟಿದ್ದು ನಂತರ ಪೆಭ್ರುವರಿ ತಿಂಗಳಲ್ಲಿ ಪಿರ್ಯಾದುದಾರರು ಬೆಂಗಳೂರಿಗೆ ಬಂದಿದ್ದು ಮದುವೆ ಯಾಗಿ ಗಂಡನ ಜೊತೆ ಇರದೆ ಹಾಸ್ಟೆಲ್ ನಲ್ಲಿ ಒಬ್ಬಳೆ ಇರುವ ಎಲ್ಲ ವಿಚಾರವನ್ನು ಪಿರ್ಯಾದುದಾರರು ಮಾರುತಿಯವರಿಗೆ ತೀಳಿಸಿರುತ್ತಾರೆ. ಆಗ ಮಾರುತಿಯವರು ಪಿರ್ಯಾದುದಾರರಿಗೆ ನಾನು ನಿನ್ನ ಜೊತೆ ಇರುವುದಾಗಿ ಹೇಳಿ ನನ್ನ ಮೆನಯಲ್ಲಿ ತಿಳಿಸಿ ನಿನ್ನನ್ನು ಮದುವೆಯಾಗುತ್ತೆನೆ ಎಂದು ನಂಬಿಸಿ ನಂ 38 ಭುವನೇಶ್ವರ ಲೇಔಟ್ ನಾಗನಾಥಪುರ ದಲ್ಲಿರುವ ಮೆನೆಗೆ ಪಿರ್ಯಾದುದಾರರನ್ನು ಕರೆಯಿಸಿಕೊಂಡು ಮದುವೆಯಾಗುವುದಾಗಿ ನಂಬಿಸಿ ಹಲವಾರು ಬಾರಿ ದೈಹಿಕ ಸಂಪರ್ಕ ಮಾಡಿರುತ್ತಾರೆ.ನಂತರ ಮಾರುತಿಯವರು ಪಿರ್ಯಾದುದಾರರ ಗಮನಕ್ಕೆ ಬಾರದೆ ಬೆರೊಂದು ನಿಶ್ಚಿತಾರ್ಥ ಮಾಡಿಕೊಂಡು	ದಸ್ತಗಿರಿಪಡಿಸಿರುವುದಿಲ್ಲ.	-	ಸಿಸಿ.ನಂ. 23179/2025 ರಲ್ಲಿ ವಿಚಾರಣೆಯಲ್ಲಿರುತ್ತದೆ. ಸದರಿ ಪ್ರಕರಣವನ್ನು ಆಗ್ನೇಯ ವಿಭಾಗ, ಮಹಿಳಾ ಪೊಲೀಸ್ ಠಾಣೆಗೆ ವರ್ಗಾವಣೆ ನೀಡಲಾಗಿರುತ್ತದೆ.

					ಅದನ್ನು ಮುಚ್ಚಿಟ್ಟು ಪಿರ್ಯಾದುದಾರರ ಜೊತೆ ದೈಹಿಕ ಸಂಪರ್ಕ ಬೇಳಿಸಿರುತ್ತಾನೆ. ಕಳೆದ ತಿಂಗಳಿನಿಂದ ಮಾರುತಿಯವರು ಮೋಬೈಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡಿಕೋಂಡು ಊರಿಗೆ ಹೋಗಿ ಮದುವೆ ತಯಾರಿಯನ್ನು ಮಾಡುತ್ತಿರುತ್ತಾರೆ.ಹೀಗೆ ಪಿರ್ಯಾದುದಾರರರಿಗೆ ಮದುವೆಯಾಗುವುದಾಗಿ ನಂಬಿಸಿ ಮೋಸ ಮಾಡಿ ದೈಹಿಕ ಸಂಪರ್ಕವನ್ನು ಹೊಂದಿರುವ ಮಾರುತಿ ಗೊಂದಿ ರವರ ವಿರುದ್ದ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.			
78.	Manjunath PSI Ramamurthy Nagar PS	ಕೆ.ಆರ್ ಪುರಂ 123/2025	118(1), 126(2),3(5),351(3),351(2), 352 BNS	17-02-2025	ದಿನಾಂಕ: 17/02/2025 ರಂದು ಹೆಚ್‌ಸಿ-8125 ರವರು ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆಗೆ ಹೋಗಿ ಹೇಳಿಕೆ ಪಡೆದುಕೊಂಡು ಬಂದು ನೀಡಿದ ದೂರಿನ ವರದಿ ಏನೆಂದರೆ ಪಿರ್ಯಾದುದಾರರು ನಂ-150 ಹಣ ಬೆಗ್ರಾಮ, ದೊಡ್ಡ ಬೈಲಹೊಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲೂಕಿನಲ್ಲಿ ವಾಸವಾಗಿದ್ದು, ಒಂದು ಗಂಡು ಮಗ ಮಂಜುನಾಥ ಇಬ್ಬರು ಹೆಣ್ಣು ಮಕ್ಕಳು ಮಂಜುಳಾ ಮತ್ತು ಆಶಾ ರವರು ಇರುತ್ತಾರೆ. ಮಗನಿಗೆ 2011 ರಲ್ಲಿ ಅನಿತಾ ಕುಮಾರಿ ರವರ ಜೋತೆಯಲ್ಲಿ ಮದುವೆಯಾಗಿದ್ದು 2 ಮಕ್ಕಳಿರುತ್ತವೆ. ನನ್ನ ಮಗನು ಆರ್ .ಎಂ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕೆಲಸ ಮಾಡುತ್ತಿರುತ್ತಾನೆ ಹೀಗಿರುವಾಗ ಪಿರ್ಯಾದುದಾರರ ಮಗ ಕೆ.ಆರ್ .ಪುರ ಅಯ್ಯಪ್ಪ ನಗರ ಕಡೆಯಲ್ಲಿ ವಾಸವಿರುವ ಬಸವ ಜ್ಯೋತಿ ಎಂಬ ಹುಡುಗಿಯ ಜೊತೆ ಸಂಬಂಧ ಹೊಂದಿದ್ದು, ಈ ವಿಚಾರ ತಿಳಿದು 1	Not Arrested Manjunath PSI Ramamurthy Nagar PS	NIl	B Report

					ವರ್ಷವಾಗಿರುತ್ತದೆ. ಮಗನಿಗೆ ಎಷ್ಟೇ ಬುದ್ಧಿ ಹೇಳಿದರೂ ಆಕೆಯ ಸಹವಾಸ ಬಿಟ್ಟಿರುವುದಿಲ್ಲ. ನಂತರ ಬಸವ ಜ್ಯೋತಿಗೂ ಕೂಡ ಫೋನ್ ಮಾಡಿ ನನ್ನ ಮಗನಿಗೆ ಮದುವೆಯಾಗಿ ಮಕ್ಕಳಿವೆ ಆತನ ಸಹವಾಸ ಬಿಟ್ಟು ಬಿಡು ಎಂದು ಬುದ್ಧಿ ಹೇಳಿದರು ಬಿಟ್ಟಿರಲಿಲ್ಲ. ಹೀಗಿರುವಾಗ ದಿನಾಂಕ 16/02/2025 ರಂದು ಪಿರ್ಯಾದುದಾರರು ಹಾಗೂ ಇಬ್ಬರು ಹೆಣ್ಣು ಮಕ್ಕಳಾದ ಮಂಜುಳಾ ಮತ್ತು ಆಶಾರವರು ಬಸವಜ್ಯೋತಿ ಮನೆ ಹುಡುಕಿಕೊಂಡು ಬೆಳಿಗ್ಗೆ 11.30 ಗಂಟೆಗೆ ಸಮಯದಲ್ಲಿ ಹೋಗಿ ಪಿರ್ಯಾದುದಾರರು ತಮ್ಮ ಮಗನ ಸಹವಾಸ ಬಿಟ್ಟು ಬಿಡುವಂತೆ ಕೇಳುತ್ತಿದ್ದಾಗ ಬಸವ ಜ್ಯೋತಿಯೂ ಕರೆಮಾಡಿ ಪಿರ್ಯಾದುದಾರರ ಮಗನಿಗೆ ಕರೆದಿದ್ದು, ಪಿರ್ಯಾದುದಾರರ ಮಗ ಅಲ್ಲಿಗೆ ಬಂದಿದ್ದು, ನೀವು ಏಕೆ ಇಲ್ಲಿಗೆ ಬಂದಿದ್ದೀರಿ ಎಂದು ಪಿರ್ಯಾದುದಾರರ ಬಲ ಕೆನ್ನೆಗೆ ಹೊಡೆದಿದ್ದು, ಬಿಡಿಸಲು ಬಂದ ಮಂಜುಳಾ ಮತ್ತು ಆಶಾ ರವರಿಗೂ ಹೊಡೆದಿರುತ್ತಾರೆ. ಅಷ್ಟರಲ್ಲಿ ಬಸವ ಜ್ಯೋತಿ ಪಿರ್ಯಾದುದಾರರ ಮೇಲೆ ಜಗಳ ಮಾಡಿ ಸೂಳೆ ಮುಂಡೇರ ಎಂದು ಅವಾಚ್ಯ ಶಬ್ದಗಳಿಂದ ಬೈದು ಪಿರ್ಯಾದುದಾರರ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾಳೆ ಮತ್ತು ಕೈನಿಂದ ಹಲ್ಲೆ ಮಾಡಿರುತ್ತಾಳೆ. ಅಲ್ಲಿಯೇ ಇದ್ದ ಬಸವ ಜ್ಯೋತಿಯ ತಮ್ಮ ಬಸವ ಪ್ರಭು ಕೂಡ ಹಲ್ಲೆ ಮಾಡಿರುತ್ತಾನೆ. ಎಲ್ಲರೂ ಸೇರಿ ಮತ್ತೆ ಇಲ್ಲಿ ಬಂದರೆ ಹೊಡೆದು ಸಾಯಿಸುವುದಾಗಿ ಬೆದರಿಕೆ ಹಾಕಿರುತ್ತಾರೆ. ಪಿರ್ಯಾದುದಾರರ ಮೊಬೈಲ್ ಕೆಳಗೆ ಬಿದ್ದಿದ್ದು ತೆಗೆದುಕೊಂಡು ಬರುವಾಗ ಇನ್ನೊಂದು ಐಫೋನ್ ತಂದಿದ್ದು ಅದು ಬಸವ ಜ್ಯೋತಿಯ ಮೊಬೈಲ್ ಎಂದು ಗೊತ್ತಾಗಿದ್ದು			

					ವಾಪಸ್ ನೀಡಿರುತ್ತಾರೆ ಪಿರ್ಯಾದುದಾರರು ಕೆ.ಆರ್ ಪುರಂ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು, ಆದ್ದರಿಂದ, ಪಿರ್ಯಾದುದಾರರ ಮೇಲೆ ಜಗಳ ಮಾಡಿ ಕೈಗಳಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಬೆದರಿಕೆ ಹಾಕಿರುವ ಬಸವ ಜ್ಯೋತಿ, ಬಸವ ಪ್ರಭು, ಹಾಗೂ ಮಗ ಮಂಜುನಾಥ್‌ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗೀಸಬೇಕೆಂದು ಕೊಟ್ಟ ದೂರು ಇತ್ಯಾದಿ.			
79.	1: ಸತೀಶ್ ಹೆಚ್‌ಸಿ-9812 ಕೋರಮಂಗಲ ಪೊಲೀಸ್ ಠಾಣೆ 2. ಶ್ರೀ ಸುರೇಶ್ ಎಸ್ ಎ ಹೆಚ್‌ಸಿ-9882 ಕೋರಮಂಗಲ ಪೊಲೀಸ್ ಠಾಣೆ 3.ತೀರ್ಥಕುಮಾರ್ ಪಿಸಿ-16088 ಕೊತ್ತನೂರು ಪೊಲೀಸ್	ಕಬ್ಬನ್ ಪಾರ್ಕ್ ಮೊ. ಸಂ:21/2026	115(2), 126(2), 3(5), 352, 324(4) ಬಿಎನ್‌ಎಸ್	11.02.2026	ಮನೆಯ ಪಕ್ಕದಲ್ಲಿ ಮೂತ್ರ ವಿಸರ್ಜನೆ ಮಾಡುತತ್ತಿದ್ದು, ಈ ಬಗ್ಗೆ ವಿಚಾರಿಸಲಾಗಿ ಪಿರ್ಯಾದುದಾರರ ಮೇಲೆ ಹಲ್ಲೇ ಮಾಡಿರುತ್ತಾರೆ.	-	-	ತನಿಖೆಯಲ್ಲಿರುತ್ತದೆ

	ಠಾಣೆ							
80.	01. ಗಂಗರಾಜು ಪಿಸಿ-7559 02. ಬಾಳಪ್ಪ ಗವತಿ ಪಿಸಿ-20614 03. ಕುಮಾರ ದೊಡ್ಡಮನಿ ಪಿಸಿ-22110	ಕೆಐಎ 13/2026	126(2), 115(2), 351(2), 352 ರೆ/ವಿ 3(5) ಬಿಎನ್ಎಸ್	11.02.2026	ದೂರುದಾರರಾದ ಶ್ರೀ.ಅಜಿತ್ಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರು ಏನೆಂದರೆ, ತಾನು ಬೆಂಗಳೂರು ಇಂಟರ್ನ್ಯಾಷನಲ್ ಏಪೋರ್ಟ್ನಲ್ಲಿನ ಆಲ್ಫಾ ಬಿಲ್ಡಿಂಗ್ನಲ್ಲಿರವ ಕ್ಯಾಂಟಿನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ಏಪೋರ್ಟ್ನಲ್ಲಿ ಹಗಲು ರಾತ್ರಿ ಕಾರ್ಮಿಕರು ಕೆಲಸ ಮಾಡುವುದರಿಂದ ಅವರಿಗೆ ಸೂಕ್ತ ಸಮಯದಲ್ಲಿ ಉಪಹಾರವನ್ನು ರಿಯಾಯಿತಿ ದರದಲ್ಲಿ ನೀಡುತ್ತಿದ್ದು, ದಿನಾಂಕ;-11-02-2026 ರಂದು ರಾತ್ರಿ ಸುಮಾರು 12-30 ಗಂಟೆಯಲ್ಲಿ ಕೆ.ಐ.ಎ.ಎಲ್ ಪೊಲೀಸ್ ಠಾಣೆಯ ಪೊಲೀಸ್ ಠಾಣೆಯ 3 ಜನ ಸಿಬ್ಬಂದಿಗಳಾದ ಗಂಗರಾಜು, ಬಾಳಪ್ಪ ಮತ್ತು ಕುಮಾರ ನಮ್ಮ ಹೋಟೆಲ್ ಬಳಿ ಬಂದು ಕಾಫಿ ಕೌಂಟರ್ನಲ್ಲಿ ಕಾಫಿಕೊಡುವಂತೆ ಕೇಳಿರುತ್ತಾರೆ. ಆ ಸಮಯದಲ್ಲಿ ಹಿಂದಿ ಭಾಷೆ ಮಾತನಾಡುವ ಹುಡುಗ ಹಿಂದಿಯಲ್ಲಿ ಕಾಫಿಟೋಕನ್ ತೆಗೆದುಕೊಂಡು ಬರುವಂತೆ ತಿಳಿಸಿದಾಗ ತಕ್ಷಣ ಗಂಗರಾಜು ಎಂಬ ಪೊಲೀಸ್ ಸಿಬ್ಬಂದಿ ನಾನು ಏಕೆ ಟೋಕನ್ ತೆಗೆದುಕೊಳ್ಳಬೇಕು ಎಂದು ಜೋರಾಗಿ ಸೂಳೆ ಮಕ್ಕಳ ನಿಮಗೆ ಇಷ್ಟುವತ್ತಿಗೆ ಹೋಟೆಲ್ ತೆಗೆಯಲಿಕ್ಕೆ ಬಿಟ್ಟಿರುವುದೇ ತಪ್ಪು ಎಂದು ಏಕಾಏಕಿ ನಮ್ಮ ಕೆಲಸಗಾರನಿಗೆ ಕೆಲಸ ಮಾಡದಂತೆ ತಡೆಹಿಡಿದು ಆತನಿಗೆ ಕೈಗಳಿಂದ ಮುಷ್ಟಿ ಕಟ್ಟಿ ಮುಖಕ್ಕೆ ಮತ್ತು ಭುಜಕ್ಕೆ ಹೊಡೆದು ನೋವುಂಟು ಮಾಡಿದ್ದಲ್ಲದೆ ತಕ್ಷಣವೇ ಇನ್ನೂ ಬಾಗಿಲು ಹಾಕಲಿಕ್ಕೆ ಸಮಯವಿದ್ದರೂ ಸಹ ಬಾಗಿಲು ಹಾಕಿಸಿ ಕೆಲಸಗಾರರಿಗೆ ಮತ್ತು ಹೋಟೆಲ್ಗೆ ಬಂದಿದ್ದ ಗ್ರಾಹಕರಿಗೆ ತೊಂದರೆಯುಂಟು ಮಾಡಿರುತ್ತಾರೆ.	--	--	UI

					ಅಲ್ಲದೆ ನಮ್ಮ ಕೆಲಸಗಾರ ಸೈಪುಲ್ಲಾ ದಿವಾನ ಈತನಿಗೆ ಹೊಡೆಯುವಾಗ ಬಿಡಿಸಲು ಬಂದ ರಾಜೇಶ್ ಮತ್ತು ದಿಲ್ದಾರ್ ಎಂಬುವರಿಗೂ ಸಹ ಜೀವ ಬೆದರಿಕೆ ಹಾಕಿ ಹೆದರಿಸಿ ಹೋಟೆಲ್ ಒಳಗೆ ಹೋಗುವಂತೆ ಬೆದರಿಕೆ ಹಾಕಿ ನಮ್ಮ ಉದ್ಯಮಕ್ಕೆ ನಷ್ಟವುಂಟು ಮಾಡಿರುತ್ತಾರೆ. ಈ ವಿಚಾರವನ್ನು ಕೆಲಸಗಾರರು ತನಗೆ ತಿಳಿಸಿದಾಗ ನಾನು ಅವರಿಗೆ ಎಲ್ಲಿಗೂ ಹೋಗಬೇಡಿ ಎಂದು ತಿಳುವಳಿಕೆ ನೀಡಿ ಈ ದಿವಸ ಅವರನ್ನು ವಿಚಾರ ಮಾಡಿ ದೇವನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ.ಆದುದರಿಂದ ನಮ್ಮ ಕೆಲಸಗಾರರಿಗೆ ಕೆಲಸ ಮಾಡದಂತೆ ಅಡ್ಡಿಪಡಿಸಿ ಕೈಗಳಿಂದ ಹಲ್ಲೆ ಮಾಡಿ ನೋವುಂಟು ಮಾಡಿ ಕೊಲೆಬೆದರಿಕೆ ಹಾಕಿದ್ದಲ್ಲದೆ ಹೋಟೆಲ್ ಬಂದ್ ಮಾಡಿ ವ್ಯಾಪಾರಕ್ಕೆ ನಷ್ಟವುಂಟು ಮಾಡಿರುವ ಪೊಲೀಸ್ ಸಿಬ್ಬಂದಿಗಳಾದ ಗಂಗರಾಜು, ಬಾಳಪ್ಪ ಮತ್ತು ಕುಮಾರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕಾಗಿ ಕೋರುತ್ತೇನೆ.			
81.	ಶ್ರೀ ಗೋವಿಂದರಾಜು, ಪಿಐ, ಕೆ.ಪಿ ಅಗ್ರಹಾರ ಪೊ.ಠಾ (ಹಾಲಿ ಅಮಾನತ್ತು)	ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಠಾಣಾ ಮೊ.ಸಂಖ್ಯೆ: 04/2026	ಕಲಂ7(ಎ), ಭಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 ರ ಪ್ರಕರಣ	29-01-2026	ಶ್ರೀ ಗೋವಿಂದರಾಜು, ಪಿಐ, ಕೆ.ಪಿ ಅಗ್ರಹಾರ ಪೊಲೀಸ್ ಠಾಣೆ, ಬೆಂಗಳೂರು ನಗರ ರವರು ದಿನಾಂಕ: 29.01.2026 ರಂದು ಪಿರ್ಯಾದುದಾರರಿಂದ 04 ಲಕ್ಷ ರೂ. ಲಂಚದ ಹಣವನ್ನು ಸ್ವೀಕರಿಸುವ ಸಮಯದಲ್ಲಿ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ದಿನಾಂಕ: 29.01.2026 ರಂದು ಸಂಜೆ 05-00 ಗಂಟೆಗೆ ದಸ್ತಗಿರಿ ಮಾಡಲಾಗಿರುತ್ತದೆ	ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆ	ನ್ಯಾಯಾಂಗ ಬಂಧನ	ತನಿಖೆ
82.	ಶ್ರೀ ಯಮುನಾ ನಾಯ್ಕ ಎಫ್, ಸಿ.ಪಿ.ಸಿ-21335, ಆರ್.ಟಿ ನಗರ ಪೊಲೀಸ್ ಠಾಣೆ	ಉಪ್ಪಾರ ಪೇಟೆ ಪೊಲೀಸ್ ಠಾಣಾ ಮೊಕದ ಮೆ ಸಂಖ್ಯೆ:	ಕಲಂ 09ಎ(ಐ), 10 ಪೋಕ್ಸೋ ಕಾಯ್ದೆ.	23-01-2026	ತಮಗೆ ನೇಮಕ ಮಾಡಿದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸದೇ ಪುರುಷರ ಶೌಚಾಲಯದ ಹತ್ತಿರ ಹೋಗಿ, ಶೌಚಾಲಯದ ಹತ್ತಿರ ಇದ್ದ ಪಿರ್ಯಾದುದಾರರ ಸ್ವಯಂಸೇವಕ ತಂಡದ ಶಾಲಾ ಬಾಲಕನೊಂದಿಗೆ ಅನುಚಿತವಾಗಿ ವರ್ತಿಸಿ, ಬಾಲಕನ ಮೈ ಮುಟ್ಟಿ, ಬಾಲಕನ ಖಾಸಗಿ ಅಂಗವನ್ನು ಮುಟ್ಟಿ ಕೃತ್ಯ ಎಸಗಿರುವ ಆರೋಪ	ಹೌದು ಯಮುನಾ ನಾಯ್ಕ್ ಪೊಲೀಸ್ ಕಾನ್ ಸ್ಟೇಬಲ್ ಪಿ.ಸಿ-21335 (ಇವರು ಪ್ರಸ್ತುತ ಅಮಾನತ್ತಿನಲ್ಲಿರುತ್ತಾರೆ)	14 ದಿನ	ತನಿಖಾ ಹಂತದಲ್ಲಿರುತ್ತದೆ

		0034/2026,				ಸದರಿ ರವರು ಆರ್.ಟಿ ನಗರ ಪಿ.ಎಸ್ ನಿಂದ ಉಪ್ಪಾರಪೇಟೆ ಪಿಎಸ್ ನ ಫ್ರೀಡಂಪಾರ್ಕ ವಿಶೇಷ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ)		
83.	1) ಕೌಶಿಕ್, ಪಿಎಸ್ಐ ಮಾಗಡಿ ರಸ್ತೆ 2) ನರಸಿಂಹ, ಎಎಸ್ಐ, ತಾವರೆಕೆರೆ ಪಿಎಸ್	ಮಾಗಡಿ ರಸ್ತೆ 305/2025	ಕಲಂ 74, 75, 115(2), 117(2), 351(2), 352, 3(5) ಬಿಎನ್ ಎಸ್	17.02.2026	ಮಾನ್ಯ ನ್ಯಾಯಾಲಯದಿಂದ ಬಂದ ಪಿ .ಆರ್.ಸಿ. .ಸಂ20062/2025 ಅನ್ನು ಪರಿಶೀಲಿಸಿದಾಗ, ಪಿರ್ಯಾದುದಾರರಾದ ಶ್ರೀ ಅವಿನಾಶ್ ಎನ್ .ಬಿ. ರವರು ತಮ್ಮ ಮತ್ತು ತಮ್ಮ ಕುಟುಂಬದವರು ಪೊಲೀಸ್ ಠಾಣೆ ಮಾಗಡಿ ರಸ್ತೆ .ಸಂ.ಮೊ184/2025 ಪ್ರಕರಣದಲ್ಲಿ ಆರೋಪಿತರಾಗಿದ್ದು, ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದ ಸಂದರ್ಭದಲ್ಲಿ ದಿನಾಂಕ 20.09.2025 ರಂದು ಪಿ .ವಿ.ಐ ಕೌಶಿಕ್ ಎನ್.ಎಸ್. ಅವರು ಯಾವುದೇ ನೋಟೀಸ್ ನೀಡದೆ ಪಿರ್ಯಾದುದಾರರ ತಾಯಿ, ತಂದೆ ಹಾಗೂ ಸಹೋದರಿಯನ್ನು ಅರೆಸ್ಟ್ ಮಾಡಿ ಅವಮಾನಕಾರಿ ಪದಗಳಿಂದ ಬೈದು, ಎಳೆದಾಡಿ ಕಿರುಕುಳ ನೀಡಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆನಂತರ ಜಾಮೀನ .ು ಮಂಜೂರಾಗಿ ದಿನಾಂಕ 11.10.2025 ರಂದು ಬೇಲ್ ಪ್ರತಿಯನ್ನು ನೀಡಲು ಹೋದಾಗ ಪಿಐ .ಎಸ್. ಅವರು ಪಿರ್ಯಾದುದಾರರ ಕೆನ್ನೆಗೆ ಹೊಡೆದು ಬೆದರಿಕೆ ಹಾಕಿ, ಬೇರೆ ಪ್ರಕರಣ ದಾಖಲಿಸುವುದಾಗಿ ನೀಡಿರುವುದರಿಂದ ಕಿವಿಗೆ ಗಾಯವಾಗಿ ಚಿಕಿತ್ಸೆ ಪಡೆದಿರುವುದಾಗಿ ಹಾಗೂ ಎ-2 ಮತ್ತು ಎ-3 ರವರ ಸಹಕಾರದಿಂದ ಕಿರುಕುಳ ನೀಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.	ಬಂಧಿಸಿರುವುದಿಲ್ಲ. ನೋಟೀಸ್ ನೀಡಿರುತ್ತದೆ.	-	ತನಿಖೆ

ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ								
ಕ್ರ. ಸಂ.	ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಅಧಿಕಾರಿ / ಸಿಬ್ಬಂದಿ ಹೆಸರು ಮತ್ತು ಹುದ್ದೆ	ಪ್ರಕರಣದ ವಿವರ			ಪ್ರಕರಣದ ಸಾರಾಂಶ	ಸದರಿ ಅಪರಾಧ ಪ್ರಕರಣದಡಿಯಲ್ಲಿ ಬಂಧಿತರಾಗಿರುವರೇ? ಬಂಧಿತರಾಗಿದ್ದಲ್ಲಿ ಪೊಲೀಸ್ ಅಧಿಕಾರಿ / ಸಿಬ್ಬಂದಿ ಹೆಸರು, ಕರ್ತವ್ಯದ ಸ್ಥಳ ಮತ್ತು ಹುದ್ದೆ	ಬಂಧನದ ಅವಧಿ ಎಷ್ಟು?	ಅಪರಾಧ ಪ್ರಕಣದ ಪ್ರಸ್ತುತ ಹಂತ
		ಠಾಣಾ ಎಫ್ .ಐ.ಆರ್. ಸಂಖ್ಯೆ	ಕಲಂ	ಪ್ರಕರಣ ದಾಖಲಾದ ದಿನಾಂಕ				
1.	ಮರಿಸ್ವಾಮಿ ಸಿಪಿಸಿ 112, ನೆಲಮಂಗಲ ಸಂಚಾರ ಠಾಣೆ.	ಮಸ್ಕಿ ಪೊಲೀಸ್ ಠಾಣೆ ಮೊ.ಸಂ.66/2024	ಕಲಂ 323, 324,143, 147,149,354, 307, ಮತ್ತು 506 ಐಪಿಸಿ	01.05.2024	ಆಪೊಅ ರವರು ಪಿರ್ಯಾದಿಗೆ ಬೈದಾಡಿ, ಇಟ್ಟಿಗೆ, ಕಲ್ಲು, ಕಟ್ಟಿಗೆ ರಾಡು ಕೈಯಿಂದ ಹೊಡೆದು ರಕ್ತಗಾಯಪಡಿಸಿ, ಅಂಬಮ್ಮ ಈಕೆಗೆ ಕುಪ್ಪಸ ಹಿಡಿದು ಎಳೆದಾಡಿ ಮಾನಭಂಗ ಮತ್ತು ಜೀವ ಬೆದರಿಕೆ ಹಾಕಿದ ಆರೋಪ.	ಇಲ್ಲ	-	ಇಲಾಖಾ ವಿಚಾರಣೆಗೆ ಆದೇಶಿಸಿದೆ
2.	ಶಿವರುದ್ರಯ್ಯ ಎಆರ್ಎಸ್ಐ ಹರೀಶ್ ಎಆರ್ಎಸ್ಐ , ಡಿ.ಎ.ಆರ್.	ಮಾದನಾಯಕನ ಹಳ್ಳಿ ಪೊಲೀಸ್ ಠಾಣಾ ಮೊ.ಸಂ.493/2025	ಕಲಂ 281, 106 ಬಿಎನ್ಎಸ್ 2023	09.06.2025	ಹೈವೇ ಪೆಟ್ರೋಲ್ ವಾಹನ–01 ಅನ್ನು ಅಜಾಗರೂಕತೆ ಯಿಂದ ಹಾಗೂ ನಿರ್ಲಕ್ಷ್ಯತೆ ಯಿಂದ ತಮ್ಮ ವ್ಯಾಪ್ತಿಗೆ ಒಳಪಡುವ ಯಾವುದೇ ದೂರು ಇಲ್ಲ ಇದ್ದರೂ ಮೇಲಾಧಿಕಾರಿಗಳಿಗೆ ಮಾಹಿತಿ ಯನ್ನು ನೀಡದೇ ತಮ್ಮ ಕಾರ್ಯವ್ಯಾಪ್ತಿಗೆ ಒಳಪಡದ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿಕೊಂಡು ಶ್ರೀ ವಿನಯ್ ಕುಮಾರ್, 42 ವರ್ಷ ರವರು ಮಾರಣಾಂತಿಕ ಅಪಘಾತಕ್ಕೆ ಕಾರಣರಾಗಿರುವ ಆರೋಪ.	ಇಲ್ಲ	-	ಇಲಾಖಾ ವಿಚಾರಣೆಗೆ ಆದೇಶಿಸಿದೆ
3	ಗಿರಿಜೇಶ್ ಸಿಹೆಚ್ ಸಿ 629	ನೆಲಮಂಗಲ ಟೌನ್ ಪೊಲೀಸ್	ಕಲಂ 318(4) 319, 322, 335,	13.01.2026	ಸಾರ್ವಜನಿಕರ ಆಸ್ತಿಯನ್ನು ಕಬಳಿಸುವ	ನಿರೀಕ್ಷಣಾ ಜಾಮೀನಿನ ಮೇಲಿರುತ್ತಾರೆ.	-	-

	ನೆಲಮಂಗಲ ಗ್ರಾಮಾಂತರ ಠಾಣೆ (ಅಮಾನತ್ತು ಲೀನ್ ಅನುಗೊಂಡನ ಹಳ್ಳಿ)	ಠಾಣಾ ಮೊ.ನಂ.07/2026	336 (3) 340, 351 ಜೊತೆಗೆ 190 ಬಿಎನ್ಎಸ್		ಹುನ್ನಾರದೊಂದಿಗೆ ಭೂ ಮಾಫಿಯಾರೊಂದಿಗೆ ಸೇರಿ ಅಕ್ರಮವಾಗಿ ಭೂ ಆಸ್ತಿಯನ್ನು ಕಬಳಿಸಿರುವ ಆರೋಪ.			
		ನೆಲಮಂಗಲ ಟೌನ್ ಪೊಲೀಸ್ ಠಾಣಾ ಮೊ.ನಂ.18/2026	ಕಲಂ 168, 169, 420, 504, 506 ಜೊತೆಗೆ 34 ಐಪಿಸಿ	30.01.2026	ಪಿರ್ಯಾದುದಾರರ ಭೂ ಆಸ್ತಿಯನ್ನು ಕಬಳಿಸುವ ಹುನ್ನಾರ ಮಾಡಿ, ಮೋಸ ಮಾಡಿರುವ ಆರೋಪ.	ಹೌದು ಗಿರಿಜೇಶ್ ಸಿಹೆಚ್ಸಿ 629 ನೆಲಮಂಗಲ ಗ್ರಾಮಾಂತರ ಠಾಣೆ.	04 ದಿನಗಳು (30.1.2026 ರಿಂದ 2.2.2026)	
4	ಪ್ರಶಾಂತ್ ನಾವಿ, ಸಿಪಿಸಿ 1083 ಹೊಸಹಳ್ಳಿ ಠಾಣೆ	ಸಿಸಿಬಿ ಪೊಲೀಸ್ ಠಾಣೆ ಮೊ.ನಂ.67/2025	ಕಲಂ 140(2), 308(2) 351 (2)(3) 315(4) ಸಹಿತ 3(5) ಬಿಎನ್ಎಸ್ 2023	02.09.2025	ತ್ಯಾಜ್ಯ ಸಂಗ್ರಹಕಾರರಿಂದ ಮತ್ತು ಇವರ ಕುಟುಂಬದವರ ಮೇಲೆ ಮಾನವೀಯತೆ ಇಲ್ಲದೆ ಕಿರುಕುಳ, ಹಣದ ದಬ್ಬಾಳಿಕೆ ಹಾಗು ಜೀವ ಬೆದರಿಕೆ ನೀಡಿದ ಆರೋಪ.	ಹೌದು ಪ್ರಶಾಂತ್ ನಾವಿ, ಸಿಪಿಸಿ 1083 ಹೊಸಹಳ್ಳಿ ಠಾಣೆ	15 ದಿನಗಳು (9.9.2025 ರಿಂದ 23.9.2025)	
5	1.ಮಧುಕುಮಾರ್ ಸಿಹೆಚ್ಸಿ 702 ವಿಜಯಪುರ ಠಾಣೆ ಮತ್ತು 2.ಮಹೇಶ ಸಿಪಿಸಿ 1619 ತಿರುಮಶೆಟ್ಟಹಳ್ಳಿ ಠಾಣೆ.	ಲೋಕಾಯುಕ್ತ ಮೊ. ಸಂ.04/2025	ಕಲಂ 7(ಎ) ಪಿ.ಸಿ. ಆಕ್ಟ್ 1988 (ತಿದ್ದುಪಡಿ - 2018	24.02.2025	ಪಿರ್ಯಾದುದಾರರಿಂದ ರೂ.5,000/- ಲಂಚವನ್ನು ಪಡೆಯುತ್ತಿದ್ದ ವೇಳೆ ಲೋಕಾಯುಕ್ತರಿಂದ ಬಂಧನ.	ಹೌದು 1. ಮಹೇಶ ಸಿಪಿಸಿ 1619 ತಿರುಮಶೆಟ್ಟಹಳ್ಳಿ ಠಾಣೆ. ಮತ್ತು 2.ಮಧುಕುಮಾರ್ ಸಿಹೆಚ್ಸಿ 702 ವಿಜಯಪುರ ಠಾಣೆ.	05 ದಿನಗಳು (24.3.2025 ರಿಂದ 28.3.2025) 03 ದಿನಗಳು (3.3.2025 ರಿಂದ 5.3.2025)	

ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ

ಕ್ರ. ಸ ಂ.	ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಅಧಿಕಾರಿ/ಸಿಬ್ಬಂದಿ ಹೆಸರು ಮತ್ತು ಹುದ್ದೆ	ಪ್ರಕರಣದ ವಿವರ			ಪ್ರಕರಣದ ಸಾರಾಂಶ	ಸದರಿ ಅಪರಾಧ ಪ್ರಕರಣದಡಿಯಲ್ಲಿ ಬಂಧಿತರಾಗಿರುವರೇ? ಬಂಧಿತರಾಗಿದ್ದಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದಿ ಹೆಸರು, ಕರ್ತವ್ಯದ ಸ್ಥಳ ಮತ್ತು ಹುದ್ದೆ	ಬಂಧನದ ಅವಧಿ ಎಷ್ಟು	ಅಪರಾಧ ಪ್ರಕರಣದ ಪ್ರಸ್ತುತ ಹಂತ
		ಠಾಣಾ FIR ಸಂಖ್ಯೆ	ಕಲಂ	ಪ್ರಕರಣ ದಾಖಲಾದ ದಿನಾಂಕ				
1	ಭಗವಂತರಾಯ್ ಬಿರಾದಾರ್, ಸಿ.ಪಿ.ಸಿ. 823, 34 ವರ್ಷ, ಅಮೃತೂರು ಪೊಲೀಸ್ ಠಾಣೆ, ತುಮಕೂರು ಜಿಲ್ಲೆ. ನಾಗಭೂಷಣ ಡಿ.ಆರ್. ಸಿ.ಹೆಚ್.ಸಿ. 372, ಅಮೃತೂರು ಪೊಲೀಸ್ ಠಾಣೆ, ತುಮಕೂರು ಜಿಲ್ಲೆ.	ಅಮೃತೂರು ಠಾಣಾ ಮೊ.ನಂ. 81/2025	ಕಲಂ 318(2), 352, 115(2), 351(2), 54, 74, 3(5) ಬಿ.ಎನ್.ಎಸ್. ಮತ್ತು ಕಲಂ 3(1)(ಆರ್) (ಎಸ್) (ಡಬ್ಲ್ಯು) (ಐ),3(2)(5ಎ) ಎಸ್.ಸಿ/ ಎಸ್.ಟಿ. ಕಾಯ್ದೆ 2015	18/05/2025	ಈ ಕೇಸಿನ ಪಿರ್ಯಾದಿ ಶಶಿಕಲಾ ಮತ್ತು ಆರೋಪಿಗಳು ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಆರೋಪಿ 01 ಭಗವಂತರಾಯ ಬಿರಾದರಾ ಪಿರ್ಯಾದಿಯನ್ನು ಮದುವೆ ಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಉಪಯೋಗಿಸಿ ಕೊಂಡು ನಂತರ ಪಿರ್ಯಾದಿಯ ರೂಂನಲ್ಲಿ ದೇವರ ಮುಂದೆ ತಾಳಕಟ್ಟಿ ಮದುವೆಯಾಗಿದ್ದು ಪಿರ್ಯಾಧಿಯು ಆರೋಪಿ 01 ರವರನ್ನು ರಿಜಿಸ್ಟರ್ ಮ್ಯಾರೇಜ್ ಮಾಡಿಕೊಳ್ಳೋಣವೆಂತ ತಿಳಿಸಿದಾಗ ಆರೋಪಿಯು ನಿರಾಕರಿಸಿದ್ದು ಹಾಗೂ ಬೇರೆ ಹುಡುಗಿಯನ್ನು ಮದುವೆಯಾಗಲು ಸಿದ್ದತೆ ಮಾಡಿಕೊಂಡಿದ್ದು ಈ ವಿಚಾರವಾಗಿ ಪಿರ್ಯಾದಿ ಕೇಳಿದ್ದಕ್ಕೆ ಆರೋಪಿ ಕೆಟ್ಟ ಮಾತುಗಳಿಂದ ನಿಂದಿಸಿ ಜಾತಿನಿಂದನೆ ಮಾಡಿರುತ್ತಾನೆಂತ ಮತ್ತು ಎ2 ರವರು ಎ1 ರವರಿಗೆ ಸಹಾಯ ಮಾಡಿ ಪಿರ್ಯಾದಿಯನ್ನು ಕುರಿತು ಕೆಟ್ಟ ಮಾತುಗಳಿಂದ ನಿಂದಿಸಿ ಜಾತಿನಿಂದನೆ ಮಾಡಿ ಎ1 ರವರಿಗೆ ಸಹಕರಿಸಿರುತ್ತಾರೆಂತ ಇತ್ಯಾದಿ.	–	–	ಮಾನ್ಯ ಉಚ್ಚ ನ್ಯಾಯಾಲಯದಲ್ಲಿ Quash ಆಗಿರುತ್ತದೆ.

ಪೊಲೀಸ್ ಅಧೀಕ್ಷಕರು ಕೋಲಾರ ಜಿಲ್ಲೆ

ಕ್ರಮ ಸಂಖ್ಯೆ	ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಅಧಿಕಾರಿ / ಸಿಬ್ಬಂದಿ ಹೆಸರು ಮತ್ತು ವಿಳಾಸ	ಪ್ರಕರಣದ ವಿವರ			ಪ್ರಕರಣ ಸಾರಾಂಶ	ಸದರಿ ಅಪರಾಧ ಪ್ರಕರಣದಡಿಯಲ್ಲಿ ಬಂಧಿತರಾಗಿರುವರೇ? ಬಂಧಿತರಾಗಿದ್ದಲ್ಲಿ ಪೊಲೀಸ್ ಅಧಿಕಾರಿ / ಸಿಬ್ಬಂದಿ ಹೆಸರು, ಕರ್ತವ್ಯದ ಸ್ಥಳ ಮತ್ತು ಹುದ್ದೆ	ಬಂಧನದ ಅವಧಿ ಎಷ್ಟು	ಅಪರಾದ ಪ್ರಸ್ತುತ ಹಂತ
		ಠಾಣಾ FIR ಸಂಖ್ಯೆ	ಕಲಂ	ಪ್ರಕರಣ ದಾಖಲಾದ ದಿನಾಂಕ				
01	ಶಶಿಕುಮಾರ್ ಸಿಪಿಸಿ-675 ಸಂಚಾರಿ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ.	CR NO:07/2023 ಕೋಲಾರ ಲೋಕಾಯುಕ್ತ	U/S 7(A) CORRUPTION ACT	14.09.2023	ಅಮಾನತ್ತು ಪಡಿಸಿಕೊಂಡಿರುವ ವಾಹವನ್ನು ಬಿಡುಗಡೆಗೊಳಿಸಲು ಹಣಕ್ಕಾಗಿ ಬೇಡಿಕೆ ಇಟ್ಟು ಲೋಕಾಯುಕ್ತ ಕೋಲಾರ ರವರಿಂದ ಟ್ರಾಪ್ ಆಗಿರುವ ಬಗ್ಗೆ.	ಶಶಿಕುಮಾರ್ ಸಿಪಿಸಿ-675 ಸಂಚಾರಿ ಪೊಲೀಸ್ ಠಾಣೆ, ಕೋಲಾರ.	11	ವಿಚಾರಣೆ ಯಲ್ಲಿರುತ್ತೆ.
02	ವಿನಾಯಕ ಸಿಪಿಸಿ-693 ಅಮಾನತ್ತು ಲೀನ್ ಮಹಿಳಾ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ.	ಗಂಗಾವರಂ ಪೊಲೀಸ್ ಠಾಣೆ, ಚಿತ್ತೂರು ಜಿಲ್ಲೆ ಆಂದ್ರಪ್ರದೇಶ CR NO.144/2024	U/S 109, 61(2), 55, 238 R/W 3(5) OF BNS	20.08.2024	ದಿನಾಂಕ:19.08.2024 ರಂದು ಶ್ರೀ ರಘುಚಂದ್ರ ಗುಪ್ತ ರವರ ಮೇಲೆ ರಾಜಕೀಯ ದುರುದ್ದೇಶದಿಂದ ಸಂಚನ್ನು ರೂಪಿಸಿ ಇತರೆ ಆರೋಪಿಗಳೊಂದಿಗೆ ಸೇರಿ ಕೊಲೆ ಮಾಡಲು ಯತ್ನಿಸಿರುವ ಬಗ್ಗೆ.	ವಿನಾಯಕ ಸಿಪಿಸಿ-693 ಅಮಾನತ್ತು ಲೀನ್ ಮಹಿಳಾ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ.		ತನಿಖೆಯಲ್ಲಿರುತ್ತೆ
03	ಮುನಿರತ್ನಂ ಸಿಹೆಚ್ ಸಿ-92, ಅಮಾನತ್ತು ಲೀನ್ ಶ್ರೀನಿವಾಸಪುರ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ.	CR NO.186/2024 BASAVESWARA NAGAR POLICE STATION. CR NO.199/2024 GOVINDARAJ NAGAR POLICE STATION. CRNO. 200/2024 GOVINDARAJ NAGAR POLICE STATION BANGALORE CITY	U/S 409, 420, 122(B) IPC 72 IT ACT 2000 & U/S 42(2)(A) INDIAN TELECOMMUNICATION & TELE GRAPH ACT U/S 120(B) 409, 420, IPC 72 IT ACT R/W 34 IPC INDIAN TELECOMMUNICATION & TELE GRAPH ACT U/S 120(B) 409, 420 IPC 72 IT ACT & R/W 42(2)	25.02.2024	ಸಿಡಿಆರ್ ಗಳನ್ನು ಅನಧಿಕೃತವಾಗಿ ಸರ್ವೀಸ್ ಪ್ರವೈಡರ್ ಗಳೊಂದಿಗೆ ಬಳಸಿಕೊಂಡಿರುವ ಬಗ್ಗೆ	ಮುನಿರತ್ನಂ ಸಿಹೆಚ್ ಸಿ-92, ಅಮಾನತ್ತು ಲೀನ್ ಶ್ರೀನಿವಾಸಪುರ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ.	09	ವಿಚಾರಣೆ ಯಲ್ಲಿರುತ್ತೆ.

			TELECOMMUNICATION ACT					
